ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜೂನ್ 25 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 70 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಚಿಕನ್, ಫಿಶ್ ಕಬಾಬ್‌ಗೆ ಕೃತಕ ಬಣ್ಣ ಬಳಸಿದರೆ ಜೀವಾವಧಿ ಶಿಕ್ಷೆ



ಮೊದಲು ಅರಿವು ಮೂಡಿಸಿ...



"ಕಬಾಬ್‌ಗಳಲ್ಲಿ ಕೃತಕ ಬಣ್ಣಗಳ ಬೆರೆಸುವಿಕೆಯನ್ನು ನಿಷೇಧಿಸಿರುವುದನ್ನು ಮೈಸೂರು ಹೋಟೆಲ್ ಮಾಲೀಕರ ಸಂಘ ಸ್ವಾಗತಿಸುತ್ತದೆ. ಗ್ರಾಹಕರ ಆರೋಗ್ಯದ ದೃಷ್ಟಿಯಿಂದ ಸರ್ಕಾರ ಸೂಕ್ತ ಕ್ರಮ ಕೈಗೊಂಡಿದೆ. ಆದರೆ ಇದನ್ನೇ ನೆಪಮಾಡಿಕೊಂಡು ಹೋಟೆಲ್‌ನವರಿಗೆ ತೊಂದರೆ ನೀಡಬಾರದು. ಇಲ್ಲಸಲ್ಲದ ಕಾರಣ ಹೇಳಿ ಕೇಸ್ ಹಾಕುವುದು, ಬೆದರಿಸುವುದು, ಹಣ ವಸೂಲಿ ಮಾಡುವುದನ್ನು ಸಂಘ ಪ್ರಬಲವಾಗಿ ಖಂಡಿಸುತ್ತದೆ. ಆದೇಶದ ಬಗ್ಗೆ ಮೊದಲು ಅರಿವು ಮೂಡಿಸಿ, ನಂತರ ಕ್ರಮ ಕೈಗೊಳ್ಳುವುದು ಒಳ್ಳೆಯದು.

–ಸಿ.ನಾರಾಯಣಗೌಡ, ಅಧ್ಯಕ್ಷರು, ಮೈಸೂರು ಹೋಟೆಲ್ ಮಾಲೀಕರ ಸಂಘ

ಬೆಂಗಳೂರು, ಜೂ.24– ಗೋಬಿ ಮಂಚೂರಿಯಲ್ಲಿ ಕೃತಕ ಬಣ್ಣ ಬಳಕೆಗೆ ನಿಷೇಧ ಹೇರಿದ ಬೆನ್ನಲ್ಲೇ ಇದೀಗ ಕಬಾಬ್‌ಗೂ ಕೃತಕ ಬಣ್ಣ ಬಳಸದಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯಾದ್ಯಂತ ಮಾರಾಟವಾಗುತ್ತಿರುವ ವೆಜ್, ಚಿಕನ್, ಫಿಶ್ ಇತರೆ ಕಬಾಬ್‌ಗಳಲ್ಲಿ ಕೃತಕ ಬಣ್ಣ ಬೆರೆಸುತ್ತಿರುವುದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಬಾಬ್ ತಯಾರಿಕೆಯಲ್ಲಿ ಕೃತಕ ಬಣ್ಣಗಳನ್ನು ಬೆರೆಸುವುದನ್ನು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ನಿರ್ಬಂಧಿಸಿದೆ.

ವೆಜ್, ಚಿಕನ್, ಫಿಶ್ ಕಬಾಬ್ ತಯಾರಿಕೆಯಲ್ಲಿ ಕೃತಕ ಬಣ್ಣಗಳ ಬಳಕೆ ಮಾಡಲಾಗುತ್ತಿರುವುದು ಪ್ರಯೋಗಾಲಯಗಳ ಮೂಲಕ ನಡೆಸಲಾದ ಪರೀಕ್ಷೆಯಿಂದ ದೃಢಪಟ್ಟಿದೆ. ಈ ಕೃತಕ ಬಣ್ಣಗಳು ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ವೆಜ್, ಚಿಕನ್, ಫಿಶ್ ಕಬಾಬ್ ತಯಾರಿಕೆ ವೇಳೆ ಕೃತಕ ಬಣ್ಣ ಬಳಕೆಯನ್ನು ನಿಷೇಧಿಸಿ ಆದೇಶ ಹೊರಡಿಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ರಾಜ್ಯಾದ್ಯಂತ 39 ಕಬಾಬ್‌ಗಳ ಮಾದರಿಗಳನ್ನು ಸಂಗ್ರಹಿಸಿ ಲ್ಯಾಬ್‌ಗೆ ಕಳಿಸಿದಾಗ, ಅದರಲ್ಲಿ 8 ಕಬಾಬ್ ಮಾದರಿಗಳಲ್ಲಿ ಬಳಸಿರುವ ಕೃತಕ ಬಣ್ಣದಲ್ಲಿ ಸನ್‌ಸೆಟ್ ಯೆಲ್ಲೋ ಮತ್ತು ಕಾರ್ಮೋಸಿನ್ ಕಂಡುಬಂದಿದೆ. ಇದು ಅಸುರಕ್ಷಿತ ಎಂದು ವರದಿಗಳಲ್ಲಿ ದೃಢಪಟ್ಟಿದೆ. ಹಾಗಾಗಿ ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದ ಇನ್ನು ಮುಂದೆ ಯಾವುದೇ ಕೃತಕ ಬಣ್ಣಗಳನ್ನು ಉಪಯೋಗಿಸುವಂತಿಲ್ಲ ಎಂದು ತಿಳಿಸಿದ್ದಾರೆ. ನಿಷೇಧದ ಆದೇಶ ಉಲ್ಲಂಘನೆಯ ಪ್ರಕರಣಗಳು ಕಂಡುಬಂದಲ್ಲಿ ಅಂತಹವರ ವಿರುದ್ಧ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ–2006ರ ಅನ್ವಯ 7 ವರ್ಷಗಳಿಂದ ಜೀವಾವಧಿವರೆಗೆ ಜೈಲುಶಿಕ್ಷೆ ಹಾಗೂ 10 ಲಕ್ಷದವರೆಗೆ ದಂಡ ವಿಧಿಸಲು ಅವಕಾಶವಿದೆ. ರಾಜ್ಯದ ಎಲ್ಲಾ ಕಬಾಬ್ ತಯಾರಿಸುವ ಮತ್ತು ಮಾರಾಟ ಮಾಡುವ ಆಹಾರ ಉದ್ದಿಮೆದಾರರು ಈ ಆದೇಶವನ್ನು ತತ್‌ಕ್ಷಣದಿಂದಲೇ ಪಾಲಿಸಲು ಸೂಚಿಸಲಾಗಿದೆ. ನಮ್ಮ ಆರೋಗ್ಯದ ಗುಟ್ಟು ನಮ್ಮ ಆಹಾರ ಅಭ್ಯಾಸಗಳಲ್ಲಿದೆ. ಉತ್ತಮ ಆರೋಗ್ಯಕ್ಕಾಗಿ ಇಂತಹ ಅಪಾಯಕಾರಿ ವಸ್ತುಗಳಿಂದ ತಯಾರಿಸಲಾದ ಆಹಾರ ಪದಾರ್ಥಗಳ ಸೇವನೆಯಿಂದ ದೂರವಿರೋಣ. ನಮ್ಮ ಆರೋಗ್ಯದ ರಕ್ಷಣೆ ಮಾಡೋಣ ಎಂದು ದಿನೇಶ್ ಗುಂಡೂರಾವ್ ಕೋರಿದ್ದಾರೆ.

ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣ

ವಿಧಾನಪರಿಷತ್ ಸದಸ್ಯ ಸೂರಜ್ ಜು.1ರವರೆಗೆ ಸಿಐಡಿ ವಶಕ್ಕೆ



ಬೆಂಗಳೂರು, ಜೂ. 24(ಕೆಎಂಶಿ)– ಸಲಿಂಗ ಕಾಮ, ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣ ಅವರನ್ನು ಜುಲೈ 1ರವರೆಗೆ ಸಿಐಡಿ ವಶಕ್ಕೆ ನ್ಯಾಯಾಲಯ ನೀಡಿದೆ. ನಿನ್ನೆಯಷ್ಟೇ ಬಂಧಿತರಾಗಿದ್ದ ಅವರನ್ನು 14 ದಿನ ನ್ಯಾಯಾಂಗ ವಶಕ್ಕೆ ನೀಡಿದ್ದ ನ್ಯಾಯಾಲಯ ಹೆಚ್ಚಿನ ವಿಚಾರಣೆಗಾಗಿ ಸಿಐಡಿ ಪೊಲೀಸರು ಕಸ್ಟಡಿಗೆ ನೀಡುವಂತೆ ಮಾಡಿದ ಮನವಿಯನ್ನು ಪುರಸ್ಕರಿಸಿದೆ. ವಿಚಾರಣೆ ಕೈಗೆತ್ತಿಕೊಂಡ ಜನಪ್ರತಿನಿಧಿಗಳ ನ್ಯಾಯಾಲಯ, ವಾದ–ಪ್ರತಿ ವಾದದ ನಂತರ ಒಂದು ವಾರ ಪೊಲೀಸರ ವಶಕ್ಕೆ ನೀಡಿ, ಆದೇಶಿಸಿದೆ. ಯುವಕರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಪ್ರಕರಣದಲ್ಲಿ ಆರೋಪಿಯಾಗಿರುವ ಸೂರಜ್ ರೇವಣ್ಣ ಅವರನ್ನು ಹಾಸನ ಪೊಲೀಸರು ಬಂಧಿಸಿದ್ದರು. ಸೂರಜ್ ವಿಧಾನಪರಿಷತ್ ಸದಸ್ಯರಾಗಿರುವುದರಿಂದ ಪೊಲೀಸರು ನಗರದ 42ನೇ ಎಸಿಎಂಎಂ ನ್ಯಾಯಾಲಯದ ಮುಂದೆ ರಜಾ ದಿನವಾದ ನಿನ್ನೆ ಹಾಜರುಪಡಿಸಿದಾಗ ನ್ಯಾಯಾಂಗ ● 9ನೇ ಪುಟಕ್ಕೆ

ಅಂಗನವಾಡಿ ಕೇಂದ್ರಗಳು ಮಾಂಟೆಸರಿಗಳಾಗಿ ಮೇಲ್ದರ್ಜೆಗೆ

ಇಲ್ಲಿಯೇ ಎಲ್‌ಕೆಜಿ, ಯುಕೆಜಿ ಆರಂಭ; ರಾಜ್ಯ ಸರ್ಕಾರದ ಮಹತ್ವದ ನಿರ್ಧಾರ



ಲಕ್ಷ್ಮಿ ಹೆಬ್ಬಾಳ್ಕರ್



ಬೆಂಗಳೂರು: ಅಂಗನವಾಡಿ ಕೇಂದ್ರಗಳನ್ನು ಮಾಂಟೆಸ್ಸರಿಗಳನ್ನಾಗಿ ಮೇಲ್ದರ್ಜೆಗೇರಿಸುವ ಮಹತ್ವದ ನಿರ್ಧಾರವನ್ನು ರಾಜ್ಯ ಸರ್ಕಾರ ತೆಗೆದುಕೊಂಡಿದೆ. ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಸಚಿವರ ಜತೆ ಸಭೆ ನಡೆಸಿ ಈ ನಿರ್ಧಾರ ಕೈಗೊಳ್ಳಲಾಯಿತು.

ಸಭೆ ಬಳಿಕ ಮಾತನಾಡಿದ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿ ಪ್ರಾರಂಭಕ್ಕೆ ಅಂಗನವಾಡಿ ಕಾರ್ಯಕರ್ತೆಯರು ವಿರೋಧ ಮಾಡುತ್ತಿದ್ದಾರೆ. ಈ ಸಂಬಂಧ ಶಿಕ್ಷಣ ಇಲಾಖೆ, ನಮ್ಮ ಇಲಾಖೆ ಜತೆ ಸಿಎಂ ಸಭೆ ಮಾಡಿದರು. ಗುಣಮಟ್ಟದ ಶಿಕ್ಷಣ ಕೊಡಲು ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿ ಪ್ರಾರಂಭ ಮಾಡಲಾಗುತ್ತಿದೆ. ಇದು ಅಂಗನವಾಡಿ ಕಾರ್ಯಕರ್ತರ ಆತಂಕಕ್ಕೆ ಕಾರಣವಾಗಿದೆ. ಈ ಹಿನ್ನಲೆಯಲ್ಲಿ ಸಿಎಂ ಜೊತೆ ಸಭೆ ಮಾಡಿದ್ದು, ಈಗ ಆದೇಶ ಹೊರಡಿಸಿರುವ ಶಾಲೆಗಳನ್ನು ಬಿಟ್ಟು ಹೊಸದಾಗಿ ಎಲ್‌ಕೆಜಿ, ಯುಕೆಜಿ ಪ್ರಾರಂಭ ಮಾಡದಂತೆ ಮಾತುಕತೆ ನಡೆದಿದೆ. ಮುಂದಿನ ಪ್ರಕ್ರಿಯೆ ಮಾಡಲು ತಜ್ಞರ ಸಮಿತಿ ನೇಮಕ ಮಾಡಲಾಗುತ್ತಿದೆ ಎಂದರು. ಅಂಗನವಾಡಿಗಳನ್ನು ಅಪ್‌ಗ್ರೇಡ್ ಮಾಡಲು ಸಿಎಂ ಅವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸಿಎಂ ಇದಕ್ಕೆ ಒಪ್ಪಿದ್ದಾರೆ. ಅಂಗನವಾಡಿಗಳನ್ನ ಇನ್ನು ಮುಂದೆ ಸರ್ಕಾರಿ ಮಾಂಟೆಸ್ಸರಿಗಳಾಗಿ ಅಪ್‌ಗ್ರೇಡ್ ಮಾಡಲಾಗುತ್ತದೆ. ● 9ನೇ ಪುಟಕ್ಕೆ

ಚನ್ನಪಟ್ಟಣದಲ್ಲಿ ಸಿ.ಪಿ.ಯೋಗೇಶ್ವರ್ ಎನ್‌ಡಿಎ ಅಭ್ಯರ್ಥಿ

● ತೆನೆ ಹೊತ್ತ ಮಹಿಳೆ ಚಿನ್ಹೆಯಡಿ ಸ್ಪರ್ಧೆ
● ಉಳಿದೆರಡು ಕ್ಷೇತ್ರದಲ್ಲಿ ಬಿಜೆಪಿ ಕಣಕ್ಕೆ



ಯೋಗೇಶ್ವರ್

ಬೆಂಗಳೂರು, ಜೂ. 24(ಕೆಎಂಶಿ)– ಬಿಜೆಪಿ ವಿಧಾನಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಚನ್ನಪಟ್ಟಣ ವಿಧಾನಸಭಾ ಉಪಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ. ಲೋಕಸಭೆಗೆ ಆಯ್ಕೆಗೊಂಡ ನಂತರ ಕುಮಾರಸ್ವಾಮಿ ತಾವು ಪ್ರತಿನಿಧಿಸುತ್ತಿದ್ದ ಈ ಕ್ಷೇತ್ರವನ್ನು ತೆರವುಗೊಳಿಸಿದ್ದರು.

ತೆರವುಗೊಂಡ ಈ ಸ್ಥಾನಕ್ಕೆ ಉಪಚುನಾವಣೆ ನಡೆಯಲಿದ್ದು ಯೋಗೇಶ್ವರ್ ಅವರನ್ನು ಎನ್‌ಡಿಎ ಮೈತ್ರಿಕೂಟ ಹಾಗೂ ಜೆಡಿಎಸ್ ಚಿನ್ಹೆಯಡಿ ಕಣಕ್ಕಿಳಿಸಲು ಕುಮಾರಸ್ವಾಮಿ ನಿರ್ಧರಿಸಿದ್ದಾರೆ. ಈ ಮೊದಲು ಕುಮಾರಸ್ವಾಮಿ ಪುತ್ರ ನಿಖಿಲ್ ಉಪ ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತಾರೆಂಬ ಮಾತುಗಳು ಕೇಳಿಬಂದಿತ್ತು ಆದರೆ ಅವರು ರಾಮನಗರ ಬಿಟ್ಟು ಚನ್ನಪಟ್ಟಣಕ್ಕೆ ಬರುವುದಿಲ್ಲ ಎಂದ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರಿಗೆ ಟಿಕೆಟ್ ನೀಡುವುದೋ ಅಥವಾ ಬಿಜೆಪಿಗೆ ಕ್ಷೇತ್ರ ಬಿಟ್ಟುಕೊಡಬೇಕೋ ಎಂಬ ಬಗ್ಗೆ ಕುಮಾರಸ್ವಾಮಿ ಗೊಂದಲದಲ್ಲಿದ್ದರು. ಇದರ ಮಧ್ಯೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದರು. ಇದರ ಬೆನ್ನಲ್ಲೇ ● 9ನೇ ಪುಟಕ್ಕೆ

'ಮೂರು ಉಪಮುಖ್ಯಮಂತ್ರಿ' ಮುಜುಗರ

ಸಹಕಾರಿ ಸಚಿವ ರಾಜಣ್ಣ ವಿರುದ್ಧ ಡಿಕೆಶಿ ಬೆಂಬಲಿಗ ಸಚಿವರು, ಸಂಸದರು, ಶಾಸಕರು ಗರಂ

● ಅವರನ್ನು ಸಂಪುಟದಿಂದ ಕೈಬಿಡಲು ಆಗ್ರಹ ● ತುಮಕೂರಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ರಾಜಣ್ಣ ಅಸಹಕಾರ ಆರೋಪ



ಕೆ.ಎನ್.ರಾಜಣ್ಣ



ಸತೀಶ್ ಜಾರಕಿಹೊಳಿ



ಬೆಂಗಳೂರು, ಜೂ. 24(ಕೆಎಂಶಿ)– ಪಕ್ಷ ಮತ್ತು ಸರ್ಕಾರಕ್ಕೆ ಮುಜುಗರ ಉಂಟು ಮಾಡುತ್ತಿರುವ ಸಹಕಾರಿ ಸಚಿವ ಕೆ.ಎನ್. ರಾಜಣ್ಣ ಅವರನ್ನು ಸಂಪುಟದಿಂದ ವಜಾಗೊಳಿಸಿ ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬೆಂಬಲಿಗ ಸಂಸದರು, ಸಚಿವರು, ಶಾಸಕರು ಪಟ್ಟುಹಿಡಿದಿದ್ದಾರೆ.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ ರಾಜಣ್ಣ ಮೂರು ಉಪಮುಖ್ಯಮಂತ್ರಿಗಳ ಹುದ್ದೆ ಸೃಷ್ಟಿಸಿ ಶಿವಕುಮಾರ್ ಅಧಿಕಾರಕ್ಕೆ ಕಡಿವಾಣ ಹಾಕಲು ಮುಂದಾಗಿರುವ ಬೆನ್ನಲ್ಲೇ ಈ ಪಟ್ಟು ಎದುರಾಗಿದೆ. ಪಕ್ಷದ ವರಿಷ್ಠರು ತೆಗೆದುಕೊಂಡ ತೀರ್ಮಾನಗಳನ್ನೇ ಆಗಿಂದ್ದಾಗ್ಯೆ ಪ್ರಶ್ನೆ ಮಾಡುತ್ತಾ ಮುಜುಗರ ಉಂಟು ಮಾಡುತ್ತಿರುವ ರಾಜಣ್ಣ ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲೇಬೇಕೆಂದು ಪಟ್ಟು ಹಿಡಿದಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ತುಮಕೂರು ಕ್ಷೇತ್ರಕ್ಕೆ ತಾವೇ ಕೇಳಿಕೊಂಡು ಮುದ್ದಹನುಮೇಗೌಡರನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಸಿದ್ದರು.

ಅವರನ್ನು ಕಣ್ಣಕ್ಕಿಳಿಸಿದ ನಂತರ ರಾಜಣ್ಣ ಪಕ್ಷದ ಅಭ್ಯರ್ಥಿ ಪರವಾಗಿ ಕೆಲಸ ಮಾಡಲಿಲ್ಲ, ಅಷ್ಟೇ ಅಲ್ಲ ತಾವು ಪ್ರತಿನಿಧಿಸುವ ಮಧುಗಿರಿ ಕ್ಷೇತ್ರದಲ್ಲೇ ಕಾಂಗ್ರೆಸ್‌ಗೆ ಭಾರಿ ಹಿನ್ನಡೆಯಾಗಿದೆ. ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಬೇರ್‍ಯಾವುದೇ ವಿಧಾನಸಭಾ ಕ್ಷೇತ್ರದಲ್ಲೂ ಅವರು ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡದೆ ವಿರೋಧಿ ಗೆಲುವಿಗೆ ಸಹಕರಿಸಿದಂತಿದೆ ಎಂದು ದೂರುತ್ತಿದ್ದಾರೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಚನೆ ಸಂದರ್ಭದಲ್ಲಿ ಎಐಸಿಸಿ ವರಿಷ್ಠರು ಕೆಲವು ನಿಬಂಧನೆಗಳನ್ನು ಹಾಕಿದ್ದರು, ಅದರಂತೆ ಸರ್ಕಾರ ನಡೆದುಕೊಂಡು ಬರುತ್ತಿದೆ. ಇಂತಹ ನಿಬಂಧನೆಗಳನ್ನು ರಾಜಣ್ಣ ಪ್ರಶ್ನೆ ಮಾಡುತ್ತಿರುವುದಲ್ಲದೆ, ಜಾತಿಗೊಂದು ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಬಹಿರಂಗವಾಗಿ ಹೇಳಿಕೆ ನೀಡುತ್ತಿದ್ದಾರೆ. ಇದಕ್ಕೆ ಕೆಲವು ಸಚಿವರ ಕುಮ್ಮಕ್ಕೂ ಇದೆ. ಇದೇ ರೀತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ಸರ್ಕಾರ ಮತ್ತು ಪಕ್ಷದ ಮೇಲೆ ದುಷ್ಪರಿಣಾಮ ಬೀರುತ್ತದೆ.

ಇಲ್ಲಿನ ಕಾಂಗ್ರೆಸ್ ಸರ್ಕಾರವನ್ನು ಉರುಳಿಸಲು ಬಿಜೆಪಿ ತೆರೆಮರೆಯಲ್ಲಿ ತನ್ನ ಪ್ರಯತ್ನ ಮುಂದುವರೆಸಿದೆ, ಇಂತಹ ಸನ್ನಿವೇಶದಲ್ಲಿ ಸಚಿವರುಗಳೇ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದರೆ, ಮುಂದೆ ದೊಡ್ಡ ಗಂಡಾಂತರ ಎದುರಿಸಬೇಕಾಗುತ್ತದೆ.

ರಾಜಣ್ಣ ಮತ್ತು ಜಾರಕಿಹೊಳಿ ವಿಷಯವನ್ನು ಶಿವಕುಮಾರ್ ಬೆಂಬಲಿತ ಸಚಿವರು ಮುಂದಿನ ಸಂಪುಟ ಸಭೆಯಲ್ಲೇ ಚರ್ಚೆ ಮಾಡುವ ನಿರ್ಧಾರಕ್ಕೆ ಬಂದಿದ್ದಾರೆ. ಇದರ ಮಧ್ಯೆ ದೆಹಲಿಯಲ್ಲೇ ಉಳಿದಿರುವ ಲೋಕೋಪಯೋಗಿ ಸಚಿವ ಜಾರಕಿ ಹೊಳಿ, ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ತಮ್ಮನ್ನೂ ಸೇರಿದಂತೆ ಮೂವರಿಗೆ ಉಪಮುಖ್ಯಮಂತ್ರಿ ಸ್ಥಾನಕ್ಕೆ ಬಡ್ತಿ ನೀಡುವಂತೆ ಒತ್ತಾಯ ತಂದಿದ್ದಾರೆ.

ಲೋಕಸಭಾ ಚುನಾವಣೆ ನಂತರ ಈ ವಿಚಾರವನ್ನು ಕೈಗೆತ್ತಿಕೊಳ್ಳುವ ಭರವಸೆ ನೀಡಿದ್ದಿರಿ. ನೀವು ನೀಡಿದ್ದ ಆಶ್ವಾಸನೆಯನ್ನು ಈಡೇರಿಸಿ ಎಂದು ಜಾರಕಿ ಹೊಳಿ ಪಟ್ಟು ಹಿಡಿದಿದ್ದಾರೆ.

ಅತ್ಯಾಚಾರ ಪ್ರಕರಣ: ಪ್ರಜ್ವಲ್‌ಗೆ 14 ದಿನ ನ್ಯಾಯಾಂಗ ಬಂಧನ



ಬೆಂಗಳೂರು: ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ 14 ದಿನಗಳ ನ್ಯಾಯಾಂಗ ಬಂಧನಕ್ಕೆ ನೀಡಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸೋಮವಾರ ಆದೇಶಿಸಿದೆ. ಮೂರನೇ ಕೇಸ್‌ನಲ್ಲಿ ಪ್ರಜ್ವಲ್ ರೇವಣ್ಣ ಪೊಲೀಸ್ ಕಸ್ಟಡಿ ಮುಕ್ತಾಯವಾದ ಹಿನ್ನೆಲೆಯಲ್ಲಿ ಇಂದು ಮತ್ತೆ ಕೋರ್ಟ್ ಮುಂದೆ ಹಾಜರುಪಡಿಸಲಾಯಿತು. ವಿಚಾರಣೆ ನಡೆಸಿದ 42ನೇ ಎಸಿಎಂಎಂ ಕೋರ್ಟ್ ನ್ಯಾಯಾಧೀಶರು ಜುಲೈ 8ರ ವರೆಗೆ ನ್ಯಾಯಾಂಗ ಬಂಧನಕ್ಕೆ ನೀಡಿ ಆದೇಶ ಹೊರಡಿಸಿದರು.

ಮೂರನೇ ಅತ್ಯಾಚಾರ ಪ್ರಕರಣದ ವಿಚಾರಣೆ ಇದಾಗಿದ್ದು, ಈ ಕೇಸ್‌ನಲ್ಲಿ ಎಸ್‌ಐಟಿ ಅಧಿಕಾರಿಗಳು 5 ದಿನಗಳ ಕಸ್ಟಡಿ ಮುಕ್ತಾಯ ಹಿನ್ನೆಲೆಯಲ್ಲಿ ಇಂದು ಕೋರ್ಟ್‌ಗೆ ಹಾಜರುಪಡಿಸಿದರು. ವಿಶೇಷ ತನಿಖಾ ತಂಡ ಮತ್ತೆ ಕಸ್ಟಡಿಗೆ ಕೋರದ ಹಿನ್ನೆಲೆಯಲ್ಲಿ ಅವರನ್ನು ನ್ಯಾಯಾಂಗ ಬಂಧನಕ್ಕೆ ನೀಡಿ ನ್ಯಾಯಾಧೀಶರು ತೀರ್ಪು ಪ್ರಕಟಿಸಿದರು. ಈ ಪ್ರಕರಣದಲ್ಲಿ ಜುಲೈ 8ವರೆಗೆ ಪ್ರಜ್ವಲ್ ಪರಪ್ಪನ ಅಗ್ರಹಾರ ಜೈಲಿನಲ್ಲಿರಲಿದ್ದಾರೆ. ಲೋಕಸಭಾ ಸದಸ್ಯರಾಗಿದ್ದಾಗ ಸಂಸದರ ನಿವಾಸದಲ್ಲಿ ತನ್ನ ಮೇಲೆ ಅತ್ಯಾಚಾರ ನಡೆದಿತ್ತು ಎಂದು ಸಂತ್ರಸ್ತೆ, ಜಿಪಂ ಮಾಜಿ ಸದಸ್ಯೆ ದೂರು ನೀಡಿದ್ದರು.

ಮೈಸೂರಿನ ಹಲವೆಡೆ ಮಣ್ಣು ಮಿಶ್ರಿತ ನೀರು ಪೂರೈಕೆ

ಶಾಸಕ ಟಿ.ಎಸ್.ಶ್ರೀವತ್ಸ, ಪಾಲಿಕೆ ಅಧಿಕಾರಿಗಳೊಂದಿಗೆ ಬಿದರಗೂಡು ಕಬಿನಿ ಕುಡಿಯುವ ನೀರು ಪಂಪಿಂಗ್ ಸ್ಟೇಷನ್ ಪರಿಶೀಲನೆ

ಮೈಸೂರು, ಜೂ.24(ಆರ್‌ಕೆ)–ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಪಾಲಿಕೆ ಅಧಿಕಾರಿಗಳೊಂದಿಗೆ ಇಂದು ಬಿದರಗೂಡು ಬಳಿಯ ಕಬಿನಿ ಕುಡಿಯುವ ನೀರು ಸರಬರಾಜು ಘಟಕಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮೈಸೂರಿನ ಕೆ.ಆರ್.ಕ್ಷೇತ್ರ ವ್ಯಾಪ್ತಿಯ ಹಲವೆಡೆ ಕಳೆದ ಕೆಲವು ದಿನಗಳಿಂದ ಮಣ್ಣು ಮಿಶ್ರಿತ ಕುಡಿಯುವ ನೀರು ಪೂರೈಕೆಯಾಗುತ್ತಿದೆ. ಮತ್ತೆ ಕೆಲವೆಡೆ ನೀರಿನ ಹಾಹಾಕಾರವೂ ಉಂಟಾಗಿದೆ ಎಂದು ನಿವಾಸಿಗಳು ದೂರುತ್ತಿದ್ದ ಹಿನ್ನೆಲೆಯಲ್ಲಿ ಇಂದು ಮಾಜಿ ಮೇಯರ್ ಶಿವಕುಮಾರ್, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ.ಸಿಂಧೂ, ಎಗ್ಸಿಕ್ಯುಟಿವ್ ಇಂಜಿನಿಯರ್‌ಗಳಾದ ನಾಗರಾಜ್, ಅಶ್ವಿನ್ ಹಾಗೂ ಅಧಿಕಾರಿಗಳೊಂದಿಗೆ ಕಬಿನಿ ಕುಡಿಯುವ ನೀರು ಪಂಪಿಂಗ್ ಸ್ಟೇಷನ್‌ಗೆ ಭೇಟಿ ನೀಡಿ, ಪರಿಶೀಲಿಸಿದರು.

ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ಕಬಿನಿ ನದಿಯಲ್ಲಿ ಮಣ್ಣು ಮಿಶ್ರಿತ, ಬಗಡು ನೀರು ಹರಿಯುತ್ತಿದ್ದು, ಮೈಸೂರಿಗೆ ಸರಬರಾಜಾಗುವ ಕುಡಿಯುವ ನೀರೂ ಮಣ್ಣು ಮಿಶ್ರಿತವಾಗಿದೆ ಎಂದು ಇಂಜಿನಿಯರ್‌ಗಳು ಶಾಸಕರಿಗೆ ವಿವರಿಸಿದರು. ಪಂಪಿಂಗ್ ಸ್ಟೇಷನ್ ಮತ್ತು ಶುದ್ಧೀಕರಣ ಘಟಕದಲ್ಲೇ ಪ್ಯೂರಿಫೈ ಮಾಡಿ ನಿಯಮಾನುಸಾರ ಕ್ಲೋರಿನ್ ಮಿಶ್ರಣ ಮಾಡಿ ಶುದ್ಧೀಕರಿಸಿ ಕುಡಿಯಲು ಯೋಗ್ಯ ಎಂಬುದನ್ನು ದೃಢಪಡಿಸಿದ ನಂತರವಷ್ಟೇ ವಸತಿ ಬಡಾವಣೆಗೆ ಪಂಪ್ ಮಾಡಬೇಕೆಂದು ಶ್ರೀವತ್ಸ, ಇಂಜಿನಿಯರ್‌ಗಳಿಗೆ ತಾಕೀತು ಮಾಡಿದರು.

ಶುದ್ಧೀಕರಣ ಘಟಕದಲ್ಲಿ ಏನಾದರೂ ತಾಂತ್ರಿಕ ಸಮಸ್ಯೆಗಳಿದ್ದರೆ ಪರಿಶೀಲಿಸಿ ಸರಿಪಡಿಸಿಕೊಂಡು ಶುದ್ಧವಾದ ನೀರನ್ನು ಮಾತ್ರ ಸರಬರಾಜು ಮಾಡಬೇಕು. ನದಿ ನೀರನ್ನು ಯಥಾವತ್ತಾಗಿ ಸರಬರಾಜು ಮಾಡಿದರೆ, ಜನರು ಅನಾರೋಗ್ಯಕ್ಕೀಡಾಗುತ್ತಾರೆ. ನೀರು ಸರಬರಾಜು ಸಂಪರ್ಕ ಮಾರ್ಗದಲ್ಲಿನ ತೊಂದರೆ ಸರಿಪಡಿಸಿ ಎಲ್ಲಾ ಬಡಾವಣೆಗಳಿಗೂ ಸಮರ್ಪಕ ರೀತಿ ನೀರು ಪೂರೈಸಬೇಕೆಂದು ಸೂಚನೆ ನೀಡಿದರು. ಅದೇ ರೀತಿ ಮೈಸೂರು ನಗರಕ್ಕೆ 60 ಎಂಎಲ್‌ಡಿ ಹೆಚ್ಚುವರಿ ನೀರು ಪೂರೈಸುವ ಯೋಜನೆ ಕಾಮಗಾರಿ ಪ್ರಗತಿಯಲ್ಲಿದ್ದು, ಪೈಪ್‌ಲೈನ್ ಜಾಕ್‌ವಾಲ್ವ್ ಅಳವಡಿಸುವ ಕೆಲಸ ತೀವ್ರಗೊಳಿಸಿ ನಿಗದಿತ ಅವಧಿಯೊಳಗಾಗಿ ಕಾಮಗಾರಿ ಪೂರ್ಣಗೊಳಿಸುವಂತೆಯೂ ಅವರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮೂಲಕ (ಕೆಯುಡಬ್ಲ್ಯೂಎಸ್ & ಡಿಬಿ) ಅಧಿಕಾರಿಗಳಿಗೆ ಇದೇ ವೇಳೆ ತಾಕೀತು ಮಾಡಿದರು.

ಕಬಿನಿ ಕುಡಿಯುವ ನೀರು ಸರಬರಾಜು ಎರಡನೇ ಹಂತದ ಕಾಮಗಾರಿಯನ್ನು ಮಂಡಳಿ ಕೈಗೆತ್ತಿಕೊಂಡಿದ್ದು, ಅದರಿಂದ ಮೈಸೂರು ದಕ್ಷಿಣ ಭಾಗದ ನಗರಕ್ಕೆ ಹೊಂದಿಕೊಂಡಂತಿರುವ ವಸತಿ ಬಡಾವಣೆಗಳಿಗೆ ಕುಡಿಯುವ ನೀರು ಪೂರೈಸಬಹುದಾಗಿದೆ. ಎಲ್ಲಿಯೂ ಕೊರತೆ ಉಂಟಾಗದಂತೆ ಶುದ್ಧ ಕುಡಿಯುವ ನೀರು ಪೂರೈಸುವಂತೆಯೂ ಶ್ರೀವತ್ಸ, ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ನೀರಿನ ಸಂಪರ್ಕ ಜಾಲ ಸದೃಢಗೊಳಿಸಿ, ತೊಂದರೆಗಳಿದ್ದರೆ ಸರಿಪಡಿಸಿಕೊಂಡು ಜನರಿಗೆ ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು ಮಾಡಿ. ಒಂದು ವೇಳೆ ಅನುದಾನದ ಕೊರತೆ ಉಂಟಾಗಿದ್ದರೆ ನಮಗೆ ತಿಳಿಸಿ ಎಂದು ಶಾಸಕರು ಅಧಿಕಾರಿಗಳಿಗೆ ತಿಳಿಸಿದರು.



ಶಾಸಕ ಟಿ.ಎಸ್.ಶ್ರೀವತ್ಸ, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಮಾಜಿ ಮೇಯರ್ ಶಿವಕುಮಾರ್ ಹಾಗೂ ಅಧಿಕಾರಿಗಳು ಸೋಮವಾರ ಬಿದರಗೂಡು ಬಳಿ ಕಬಿನಿ ಕುಡಿಯುವ ನೀರು ಪಂಪಿಂಗ್ ಸ್ಟೇಷನ್‌ಗೆ ಭೇಟಿ ನೀಡಿ, ಪರಿಶೀಲಿಸಿದರು.

ಸಂವಿಧಾನ ಹೊತ್ತಿಗೆ ಹಿಡಿದು 'ಇಂಡಿಯಾ' ಪ್ರತಿಭಟನೆ

ಪ್ರತಿಪಕ್ಷಗಳ ವಿರುದ್ಧ ಪ್ರಧಾನಿ ವಾಗ್ದಾಳಿ



ನವದೆಹಲಿ: ತುರ್ತು ಪರಿಸ್ಥಿತಿ ಬಗ್ಗೆ ಮಾತನಾಡುತ್ತಾ ಎಷ್ಟು ದಿನ ಆಡಳಿತ ನಡೆಸಲು ಬಯಸುತ್ತೀರಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪ್ರಶ್ನಿಸಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 10 ವರ್ಷ ಅಘೋಷಿತ ತುರ್ತು ಪರಿಸ್ಥಿತಿ ಬಗ್ಗೆಯೂ ಮಾತಾಡಿ ಎಂದು ಸೋಮವಾರ ತಿರುಗೇಟು ನೀಡಿದ್ದಾರೆ.

ಇಂದಿನಿಂದ 18ನೇ ಲೋಕಸಭೆಯ ಮೊದಲ ಅಧಿವೇಶನ ಆರಂಭವಾಗಿದ್ದು, ಈ ಮಧ್ಯೆ, ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ, ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಟಿಎಂಸಿ ಸಂಸದ ಸೌಗತ ರಾಯ್ ಸೇರಿದಂತೆ ವಿರೋಧ ಪಕ್ಷಗಳ ಮೈತ್ರಿಕೂಟ ಇಂಡಿಯಾ ಬಣದ ನಾಯಕರು ಸಂಸತ್ತಿನ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಕೈಯ್ಯಲ್ಲಿ ಸಂವಿಧಾನದ ಪ್ರತಿಗಳನ್ನು ಹಿಡಿದುಕೊಂಡು, ಬಿಜೆಪಿಯವರು ಸಂವಿಧಾನಕ್ಕೆ ಅಗೌರವ ತೋರುತ್ತಿದ್ದಾರೆ ಎಂದು ಆರೋಪಿಸಿದ ಇಂಡಿಯಾ ಬಣದ ನಾಯಕರು, ಸಂವಿಧಾನ ರಕ್ಷಿಸುವಂತೆ ಘೋಷಣೆಗಳನ್ನು ಕೂಗಿದರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮೋದಿಯವರು ಸಂವಿಧಾನವನ್ನು ಹಾಳು ಮಾಡಲು ಯತ್ನಿಸಿದ್ದಾರೆ. ಅದಕ್ಕಾಗಿಯೇ ಇಂದು ಎಲ್ಲ ಪಕ್ಷಗಳ ನಾಯಕರು ಒಗ್ಗೂಡಿ ಪ್ರತಿಭಟನೆ ನಡೆಸುತ್ತಿದ್ದಾರೆ. ಇಲ್ಲಿ ಗಾಂಧಿ ಪ್ರತಿಮೆ ಇತ್ತು, ಎಲ್ಲ ಪ್ರಜಾಪ್ರಭುತ್ವವನ್ನು ನಾಶ ಮಾಡುತ್ತಿದ್ದಾರೆ. ಅದಕ್ಕಾಗಿಯೇ ಇಂದು ನಾವು ಮೋದಿ ಜೀ, ನೀವು ಸಂವಿಧಾನದ ಪ್ರಕಾರ ಮುಂದುವರಿಯಬೇಕು ಎಂದು ತೋರಿಸಲು ಬಯಸುತ್ತೇವೆ ಎಂದರು.

ಅವರು ತುರ್ತು ಪರಿಸ್ಥಿತಿಯ ಬಗ್ಗೆ 100 ಬಾರಿ ಹೇಳುತ್ತಾರೆ. ಆದರೆ ತುರ್ತು ಪರಿಸ್ಥಿತಿ ಘೋಷಿಸದೆ ನೀವು 10 ವರ್ಷಗಳಿಂದ ತುರ್ತು ಪರಿಸ್ಥಿತಿಯನ್ನು ನಿರ್ಮಿಸಿದ್ದೀರಿ. ತರ್ತು ಪರಿಸ್ಥಿತಿ ಬಗ್ಗೆ ಮಾತನಾಡುತ್ತಾ ಎಷ್ಟು ದಿನ ಆಡಳಿತ ನಡೆಸುತ್ತೀರಿ ಎಂದು ಖರ್ಗೆ ಪ್ರಶ್ನಿಸಿದರು.

ಭಾರತದ ಹೊಸ ಪೀಳಿಗೆ ಮರೆಯಲ್ಲ: ಸಂಸತ್ ಸದಸ್ಯರಾಗಿ ಇಂದು ಪ್ರಮಾಣ ವಚನ ಸ್ವೀಕರಿಸುವ ಮುನ್ನ ಹೊಸ ಸಂಸತ್ ಭವನದ ಹೊರಗೆ ಮಾಧ್ಯಮ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಪ್ರಧಾನಿ ಮೋದಿ, ತುರ್ತು ಪರಿಸ್ಥಿತಿಯ ಬಗ್ಗೆ ಪ್ರತಿಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದರು.

ಜೂನ್ 25, 1975 ರಂದು ದೇಶದಲ್ಲಿ ಜಾರಿಗೆ ಬಂದ 21 ತಿಂಗಳ ತುರ್ತು ಪರಿಸ್ಥಿತಿಯನ್ನು ನೆನಪಿಸಿಕೊಂಡ ಪ್ರಧಾನಿ ಮೋದಿ, ದೇಶವನ್ನು ಜೈಲಿನಂತೆ ಪರಿವರ್ತಿಸಿದ ಸಮಯವನ್ನು ಭಾರತದ ಹೊಸ ಪೀಳಿಗೆ ಎಂದಿಗೂ ಮರೆಯುವುದಿಲ್ಲ ಎಂದು ಹೇಳಿದರು.

ರಂಗಶಿಕ್ಷಣ ತರಬೇತಿಗೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು, ಜೂ.24– ಮೈಸೂರಿನಲ್ಲಿ ಸ್ಥಾಪಿತವಾಗಿರುವ ರಂಗಾಯಣದ ಭಾರತೀಯ ರಂಗಶಿಕ್ಷಣ ಕೇಂದ್ರದ ಒಂದು ವರ್ಷದ ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು ಜೂನ್ 29ರವರೆಗೆ ವಿಸ್ತರಿಸಲಾಗಿದ್ದು ಆಸಕ್ತರು ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ರಂಗಾಯಣದ ವೆಬ್‌ಸೈಟ್ www.rangayanamysore.karnataka.gov.in ಅನ್ನು ಸಂಪರ್ಕಿಸಬಹುದು ಎಂದು ರಂಗಾಯಣದ ಉಪನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಚಿವ ಬೋಸ್‌ರಾಜ್, ಡಾ.ಯತೀಂದ್ರ ಸೇರಿ 17 ಮಂದಿ ಪರಿಷತ್ ಸದಸ್ಯರಾಗಿ ಪ್ರಮಾಣ



ಸಚಿವ ಎನ್.ಎಸ್.ಬೋಸ್‌ರಾಜ್, ಡಾ.ಯತೀಂದ್ರ ಸೇರಿದಂತೆ 17 ಮಂದಿ ವಿಧಾನಪರಿಷತ್ ಸದಸ್ಯರಾಗಿ ಸೋಮವಾರ ವಿಧಾನಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ನಡೆದ ಸರಳ ಸಮಾರಂಭದಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಚಿತ್ರದಲ್ಲಿ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾನೂನು ಸಚಿವ ಎಚ್.ಕೆ.ಪಾಟೀಲ್ ಇನ್ನಿತರರನ್ನು ಕಾಣಬಹುದು.

ಬೆಂಗಳೂರು, ಜೂ. 24(ಕೆಎಂಶಿ)– ಸಚಿವ ಎನ್.ಎಸ್.ಬೋಸ್‌ರಾಜ್, ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಸೇರಿದಂತೆ 17 ಸದಸ್ಯರು ವಿಧಾನಪರಿಷತ್ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ನಡೆದ ಸರಳ ಸಮಾರಂಭದಲ್ಲಿ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ನೂತನ ಸದಸ್ಯರಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ವಿಧಾನಸಭೆಯಿಂದ ಪರಿಷತ್ತಿಗೆ ಆಯ್ಕೆಗೊಂಡ ಬೋಸರಾಜ್, ಡಾ.ಯತೀಂದ್ರ ಅಲ್ಲದೆ, ಐವಾನ್ ಡಿಸೋಜ, ಕೆ.ಗೋವಿಂದರಾಜ್, ಜಗದೇವ ಗುತ್ತೇದಾರ್, ಬಿಲ್ಕಿಸ್ ಬಾನು, ಎಸ್.ಎ.ವಸಂತಕುಮಾರ್, ಮುಲೆ ಮಾರುತಿರಾವ್, ಸಿ.ಟಿ.ರವಿ, ಎನ್.ರವಿ ಕುಮಾರ್ ಹಾಗೂ ಜವರಾಯಿಗೌಡ. ಶಿಕ್ಷಕರ ಕ್ಷೇತ್ರದಿಂದ ಕೆ.ವಿವೇಕಾನಂದ, ಡಿ.ಟಿ.ಶ್ರೀನಿವಾಸ್, ಎಸ್.ಎಲ್.ಬೋಜೇಗೌಡ, ಪದವೀಧರ ಶಿಕ್ಷಕರ ಕ್ಷೇತ್ರದಿಂದ ಡಾ.ಚಂದ್ರಶೇಖರ ಬಸವರಾಜ ಪಾಟೀಲ್, ಡಾ.ಧನಂಜಯ್ ಸರ್ಜಿ, ರಾಮೋಜಿಗೌಡ ಪರಿಷತ್ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿದರು. ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾನೂನು ಸಚಿವ ಎಚ್.ಕೆ.ಪಾಟೀಲ್ ಉಪಸ್ಥಿತರಿದ್ದರು.

ಇಂದು ಕಮಲಾ ಹಂಪನಾರಿಗೆ ನುಡಿ ನಮನ



ಮೈಸೂರು, ಜೂ. 24– ಜೈ ಭೀಮ್ ಯುವ ಸ್ಪಂದನಾ ವೇದಿಕೆ ವತಿಯಿಂದ ನಾಡೋಜ ಕಮಲಾ ಹಂಪನಾ ನುಡಿ ನಮನ ಕಾರ್ಯಕ್ರಮವನ್ನು ಮೈಸೂರು ಗಾಂಧಿ ನಗರದಲ್ಲಿರುವ ಉರಿಲಿಂಗಿಪೆದ್ದಿ ಮಠದಲ್ಲಿ ಜೂ.25ರಂದು ಬೆಳಗ್ಗೆ 11 ಗಂಟೆಗೆ ನುಡಿ ನಮನ ಕಾರ್ಯಕ್ರಮ ಆಯೋಜಿಸಲಾಗಿದೆ. ಜ್ಞಾನಪ್ರಕಾಶ್ ಸ್ವಾಮೀಜಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಡಾ.ವೈ.ಡಿ ರಾಜಣ್ಣ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಹಿರಿಯ ಮಹಿಳಾ ಸಾಹಿತಿ ಡಾ.ಲೀಲಾ ಪ್ರಕಾಶ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸಾಮಾಜಿಕ ಕಾರ್ಯಕರ್ತ ವಿಕ್ರಮ್ ಅಯ್ಯಂಗಾರ್ ಇನ್ನಿತರರು ಭಾಗವಹಿಸಲಿದ್ದಾರೆ.

ಕೃಷಿ ನವೋದ್ಯಮಗಳಿಗೆ ಪ್ರೋತ್ಸಾಹ, ಪುನಶ್ಚೇತನಕ್ಕೆ ಸರ್ಕಾರ ಸಿದ್ಧ

ಕೃಷಿ ಸಚಿವ ಚಲುವರಾಯಸ್ವಾಮಿ ಭರವಸೆ

ಬೆಂಗಳೂರು, ಜೂ. 24(ಕೆಎಂಶಿ)– ಕೃಷಿ ನವೋದ್ಯಮಗಳಿಗೆ ಪ್ರೋತ್ಸಾಹ ಮತ್ತು ಪುನಶ್ಚೇತನಕ್ಕೆ ರಾಜ್ಯ ಸರ್ಕಾರ ಸದಾ ಸಿದ್ಧ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಫುಡ್‌ಪಾರ್ಕ್‌ಗಳ ಪುನಶ್ಚೇತನ ಹಾಗೂ ಸಿರಿಧಾನ್ಯ ಸಂಬಂಧಿತ ರೈತರೊಂದಿಗೆ ಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, ಸಿರಿಧಾನ್ಯ ಬೇಡಿಕೆ ಹೆಚ್ಚಿದ್ದರೂ ಪೂರೈಕೆ ಕೊರತೆ ಇದೆ. ಪ್ರೋತ್ಸಾಹ ಧನ ಯೋಜನೆ ಮುಂದುವರೆಸುವ ಜೊತೆಗೆ ಉತ್ಪಾದನೆಯನ್ನು 30 ಸಾವಿರದಿಂದ 50 ಸಾವಿರ ಹೆಕ್ಟೇರ್‌ಗೆ ಹೆಚ್ಚಿಸಲು ಯೋಜನೆ ರೂಪಿಸುವಂತೆ ಸೂಚಿಸಿದರು.

ರೈತರೊಂದಿಗೆ ಉದ್ದಿಮೆದಾರರ ನೇರ ಖರೀದಿ ವ್ಯವಸ್ಥೆ ಬಗ್ಗೆ ಚಿಂತನೆ ನಡೆಸಿ, ರಾಜ್ಯಾದ್ಯಂತ ಇರುವ ಎಫ್‌ಪಿಒಗಳ ಜೊತೆ ಉದ್ದಿಮೆದಾರರ ಸಂಪರ್ಕ ಕಲ್ಪಿಸಿ ಎಂದರು.



ಪ್ರತಿ ಜಿಲ್ಲೆಯಲ್ಲೂ 2 ದಿನಗಳ ಸಿರಿಧಾನ್ಯ ಮೇಳ ಏರ್ಪಡಿಸುವ ಜೊತೆಗೆ ವಿದೇಶದಲ್ಲಿ ನಡೆಯುವ ಆಹಾರ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳಗಳಲ್ಲಿ ರಾಜ್ಯದಿಂದ ಮಳಿಗೆ ಹಾಕಲು ಸಹ ನೆರವು ಒದಗಿಸಲಾಗುವುದು. ಪ್ರಸ್ತ ಮಿಲೆಟ್ ಪೌಡರ್‌ಗಳಿಗೆ ಜಿಎಸ್‌ಟಿ ಶೇ.18ರಿಂದ ಶೇ.5ಕ್ಕೆ ಇಳಿಕೆ ಮಾಡಿರುವಂತೆ ಇತರ ಮೌಲ್ಯವರ್ಧಿತ ಕೃಷಿ ಆಹಾರ ಉತ್ಪನ್ನಗಳಿಗೂ ವಿಸ್ತರಿಸಬೇಕು ಎಂಬ ನವೋದ್ಯಮಿಗಳ ಮನವಿಗೆ, ಕೇಂದ್ರ ಸರ್ಕಾರಕ್ಕೆ ಪೂರಕ ಪ್ರಸ್ತಾವನೆ ಕಳಿಸಲಾಗುವುದು ಎಂದರು.

ಮಿಲೆಟ್ ಆಹಾರ ಉತ್ಪಾದಕರಿಗೆ ತಂತ್ರಜ್ಞಾನ ವಿಸ್ತರಣೆ ಜೊತೆಗೆ ದೀರ್ಘಾವಧಿಗೆ ಆಹಾರ ಪದಾರ್ಥ ಸಂಸ್ಕರಣೆಗೆ ಸಿಎಫ್‌ಟಿಆರ್‌ಐ ಮೂಲಕ ನೆರವು ಒದಗಿಸಲು ಸೂಕ್ತ ಕ್ರಮಕೈಗೊಳ್ಳಲಾಗುವುದು. ಕೃಷಿ ಇಲಾಖೆ ಮೂಲಕ ಶೀಘ್ರವೇ ಕೃಷಿ ನವೋದ್ಯಮಗಳು, ಉತ್ಪಾದಕರು ಮತ್ತು ಪೂರೈಕೆದಾರರ ಸಂಪರ್ಕ ಬೆಸೆಯುವ ಜೊತೆಗೆ ಮಾರುಕಟ್ಟೆ ಉತ್ತೇಜನಕ್ಕೆ ಸರ್ಕಾರ ನೆರವು ನೀಡಲಿದೆ. ಇದರಿಂದ ರೈತರಿಗೂ ಅನುಕೂಲವಾಗಲಿದೆ ಎಂದು ಹೇಳಿದರು.

ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಪುಣ್ಯ ಸ್ಮರಣೆ: ಸಾಧಕರಿಗೆ ಗೌರವ ಸಮರ್ಪಣೆ



ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಪುಣ್ಯಸ್ಮರಣೆಯಂದು ಬಿಜೆಪಿ ಕೃಷ್ಣರಾಜ ಕ್ಷೇತ್ರದ ವತಿಯಿಂದ ಐವರು ವಿವಿಧ ಕ್ಷೇತ್ರದ ಸಾಧಕರನ್ನು ಗೌರವಿಸಲಾಯಿತು.

ಮೈಸೂರು, ಜೂ. 24– ಬಿಜೆಪಿಯ ಮಾತೃಪಕ್ಷ ಭಾರತೀಯ ಜನ ಸಂಘದ ಸಂಸ್ಥಾಪಕರಾದ ಡಾ ಶಾಮ್ ಪ್ರಸಾದ್ ಮುಖರ್ಜಿ ಅವರ ಪುಣ್ಯಸ್ಮರಣೆಯಂದು ಬಿಜೆಪಿ ಕೃಷ್ಣರಾಜ ಕ್ಷೇತ್ರದ ವತಿಯಿಂದ ಐವರು ವಿವಿಧ ಕ್ಷೇತ್ರದ ಸಾಧಕರಿಗೆ ಗೌರವ ಸಮರ್ಪಣೆ ಮಾಡಿ ಅರ್ಥ ಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಅವರು ಡಾ.ಶ್ಯಾಮ ಪ್ರಸಾದ್ ಮುಖರ್ಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಕೆ.ಆರ್. ಕ್ಷೇತ್ರದ ಬಿಜೆಪಿ ಅಧ್ಯಕ್ಷ ಯು.ಜಿ.ಗೋಪಾಲ್‌ರಾಜ್ ಅರಸ್, ಪ್ರಧಾನ ಕಾರ್ಯದರ್ಶಿ ಜಯರಾಮ್, ಜಯಶಂಕರ್, ಕಾರ್ಯಕ್ರಮದ ಮುಖ್ಯ ಭಾಷಣಕಾರ ಪ್ರೊ.ಶಿವಾನಂದ್, ಸನ್ಮಾನಿತರಾದ ಡಾ.ಚಂದ್ರಶೇಖರ್, ಯೋಗಾಪ್ರಕಾಶ್, ಯೋಗಾರಂಗನಾಥ್, ಶಿವಕುಮಾರ್ ಹೆಚ್.ಎನ್, ಕು. ದೀಕ್ಷಿತಾ, ಬಿಜೆಪಿ ಮುಖಂಡರಾದ ಸೋಮಸುಂದರ್, ಯುವಮೋರ್ಚಾ ಅಧ್ಯಕ್ಷ ಕೆ.ಎಂ.ನಿಶಾಂತ್, ಮಾಜಿ ನಗರ ಪಾಲಿಕೆ ಸದಸ್ಯ ಪ್ರಸನ್ನ, ಶೈಲೇಂದ್ರ, ವಿದ್ಯಾಅರಸ್, ಶಾರದ ಈಶ್ವರ್, ಸೌಭಾಗ್ಯ ಮೂರ್ತಿ, ಎಸ್.ಸಿ. ಮೋರ್ಚಾ ಅಧ್ಯಕ್ಷ ರವಿ, ಎಸ್.ಟಿ. ಮೋರ್ಚಾ ಅಧ್ಯಕ್ಷ ನಂದೀಶ್, ಉಪಾಧ್ಯಕ್ಷರಾದ ಓಂ ಶ್ರೀನಿವಾಸ್, ಟಿವಿಎಸ್ ನಾಗರಾಜ್, ಮನೋಜ್, ಕಾರ್ಯದರ್ಶಿ ರೇಖಾ, ಕಾವೇರಿ, ಹರ್ಷ, ಪ್ರದೀಪ್, ಕಿಶೋರ್ ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.



ಸುನಿಲ್ ಬೋಸ್, ಡಾ.ಯತೀಂದ್ರಗೆ ಸನ್ಮಾನ

ಸಂಸದ ಸುನೀಲ್ ಬೋಸ್ ಹಾಗೂ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಅವರನ್ನು ತಿ.ನರಸೀಪುರ ತಾಲೂಕಿನ ಎಡದೊರೆ ಬಳಿ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಮಾಜಿ ಉಪಪ್ರಧಾನ ಡಿ.ಆರ್.ಮೂರ್ತಿ, ತಾಪಂ ಮಾಜಿ ಉಪಾಧ್ಯಕ್ಷ ಪ್ರಕಾಶ್, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಡೈರಿ ಮಾಜಿ ಅಧ್ಯಕ್ಷ ಮರಯ್ಯ, ಗುತ್ತಿಗೆದಾರ ಬಿಳಿಗೆರೆಹುಂಡಿ ಬಸವರಾಜ್, ಮಾಜಿ ಉಪಾಧ್ಯಕ್ಷ ಸಿದ್ದರಾಜು, ಗ್ರಾಪಂ ಸದಸ್ಯರಾದ ಮಹೇಶ್, ಶಿವಣ್ಣ, ಸಿದ್ದಪ್ಪ, ಮಹೇಶ್‌ಕುಮಾರ್, ಸಿದ್ದೇಶ್, ಮರಿಸಿದ್ದಯ್ಯ, ಗವಿ, ರಘು, ಬಸವರಾಜು, ಮುತ್ತತ್ತಿ ಸಿದ್ದಯ್ಯ, ಮಾದಪ್ಪ, ಮಹದೇವನಾಯಕ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ತುರ್ತು ಪರಿಸ್ಥಿತಿ ಸಂವಿಧಾನಕ್ಕೆ ಮಾಡಿದ ಅಪಚಾರ; ಸಂವಾದ

ಮೈಸೂರು, ಜೂ.24(ಬಿಎಲ್‌ಯು)– ಮಾಜಿ ಪ್ರಧಾನಿ ದಿವಂಗತ ಇಂದಿರಾ ಗಾಂಧಿ ಅವರ ಸಂವಿಧಾನ ವಿರೋಧಿ ನಡೆಯನ್ನು ಜನರಿಗೆ ಪರಿಣಾಮಕಾರಿಯಾಗಿ ತಿಳಿಸಲು ಸಾಮಾಜಿಕ ನ್ಯಾಯಕ್ಕಾಗಿ ನಾಗರಿಕರು ಸಂಸ್ಥೆಯಿಂದ ತುರ್ತು ಪರಿಸ್ಥಿತಿ ಸಂವಿಧಾನಕ್ಕೆ ಮಾಡಿದ ಅಪಚಾರ ಕುರಿತ ಸಂವಾದವನ್ನು ನಾಳೆ (ಜೂನ್ 25) ಆಯೋಜಿಸಿದೆ ಎಂದು ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ತಿಳಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ತಿಳಿಸಿದ ಅವರು, ಕಲಾಮಂದಿರದಲ್ಲಿ ನಾಳೆ ಸಂಜೆ 5 ಗಂಟೆಗೆ ಸಂವಾದ ಆಯೋಜಿಸಲಾಗಿದೆ ಎಂದು ಹೇಳಿದರು.

ಶಾಸಕರಾದ ವಿ.ಸುನೀಲ್‌ಕುಮಾರ್, ಭೈರತಿ ಬಸವರಾಜ್, ಮಾಜಿ ಶಾಸಕ ಪಿ.ರಾಜೀವ್, ಪ್ರಾಧ್ಯಾಪಕ ಡಾ.ಕೆ.ಸಿ.ಬಸವರಾಜ್ ಸಂವಾದದಲ್ಲಿ ಭಾಗವಹಿಸುವರು ಎಂದು ನಾಗೇಂದ್ರ ತಿಳಿಸಿದರು.



ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಸಂವಿಧಾನ ವಿರೋಧಿ ನಡೆ ಬಗ್ಗೆ ಜನರಿಗೆ ಮನದಟ್ಟು ಮಾಡುವ ಪೋಸ್ಟರ್ ಅನ್ನು ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸೋಮವಾರ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಹಾಗೂ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಬಿಡುಗಡೆ ಮಾಡಿದರು.

ಬಿಜೆಪಿಯ ಹತ್ತು ವರ್ಷದ ಅಧಿಕಾರಾವಧಿಯಲ್ಲಿ ಸಂವಿಧಾನ ಬದಲಾವಣೆ ಮಾಡುವ ಪ್ರಯತ್ನ ಮಾಡಲಾಯಿತು ಎಂದು ಕಾಂಗ್ರೆಸ್ ಪಕ್ಷ ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಅಪಪ್ರಚಾರ ಮಾಡಿ, ಜನರಿಗೆ ತಪ್ಪು ಮಾಹಿತಿ ನೀಡಿತು ಎಂದರು.

ಈ ಹಿನ್ನೆಲೆಯಲ್ಲಿ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಇಂದಿರಾಗಾಂಧಿ ಅವರು ಯಾವ ರೀತಿ ಸಂವಿಧಾನಕ್ಕೆ ವಿರೋಧವಾಗಿ ನಡೆದುಕೊಂಡರು, ತಿದ್ದುಪಡಿ ಮೂಲಕ ಯಾವ ರೀತಿ ಸಂವಿಧಾನ ಬದಲಾವಣೆಗೆ ಮುಂದಾದರು ಎಂಬ ವಿಚಾರಗಳನ್ನು ನಾಳೆ ನಡೆಯುವ ಸಂವಾದದ ವೇಳೆ ಜನರಿಗೆ ಮನದಟ್ಟು ಮಾಡಿಕೊಡಲಾಗುವುದು ಎಂದು ಹೇಳಿದರು.

ಅಂದು ತುರ್ತು ಪರಿಸ್ಥಿತಿ ವಿರುದ್ಧ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವರು ಹೋರಾಟ ಮಾಡಿದ್ದರು. ಆದರೆ ಇಂದು ಮೌನ ವಹಿಸಿರುವುದೇಕೆ? ಎಂದು ಪ್ರಶ್ನಿಸಿದರು. ಕಾಂಗ್ರೆಸ್ ನಿಜವಾದ ಸಂವಿಧಾನ ವಿರೋಧಿಯೇ ಹೊರತು, ಬಿಜೆಪಿಯಲ್ಲ ಎಂದು ತಿಳಿಸಲು ಇಂತಹ ಕಾರ್ಯಕ್ರಮ ಆಯೋಜಿಸಿದ್ದೇವೆ ಎಂದು ನಾಗೇಂದ್ರ ತಿಳಿಸಿದರು. ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಗಿರಿಧರ್, ರಘು, ಹಿಂದುಳಿದ ಮೋರ್ಚಾ ನಗರಾಧ್ಯಕ್ಷ ಜೋಗಿ ಮಂಜು, ಎಸ್‌ಟಿ ಮೋರ್ಚಾ ನಗರಾಧ್ಯಕ್ಷ ಪಡುವಾರಹಳ್ಳಿ ರಾಮಕೃಷ್ಣ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ತುರ್ತು ಪರಿಸ್ಥಿತಿಗೆ 50 ವರ್ಷ ಕುರಿತು ಕಾರ್ಯಕ್ರಮ

ಮೈಸೂರು, ಜೂ. 24– ಬೆಂಗಳೂರಿನ ಸಾಮಾಜಿಕ ನ್ಯಾಯಕ್ಕಾಗಿ ನಾಗರಿಕರು ವತಿಯಿಂದ ತುರ್ತು ಪರಿಸ್ಥಿತಿಗೆ 50 ವರ್ಷ ಸಂದಿದ ಹಿನ್ನೆಲೆಯಲ್ಲಿ ತುರ್ತು ಪರಿಸ್ಥಿತಿ ಸಂವಿಧಾನಕ್ಕೆ ಮಾಡಿದ ಅಪಚಾರ, ಒಂದಿಷ್ಟು ನೆನಪು, ಒಂದಿಷ್ಟು ಚರ್ಚೆ, ಒಂದಿಷ್ಟು ಪ್ರೇರಣೆ ಕಾರ್ಯಕ್ರಮವನ್ನು ಬೆಂಗಳೂರಿನ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ನಾಳೆ (ಜೂ.25) ಸಂಜೆ 5ಕ್ಕೆ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ ಎಸ್.ಅಣ್ಣಾಮಲೈ, ರಾಜಕೀಯ ಚಿಂತಕ ರವೀಂದ್ರ ರೇಷ್ಮೆ, ತುರ್ತು ಪರಿಸ್ಥಿತಿ ಹೋರಾಟಗಾರರಾದ ಶ್ರೀಮತಿ ಗಾಯತ್ರಿ ಚ.ಸು.ಹನುಮಂತ ರಾವ್, ದಲಿತ ಮುಖಂಡ ಪಟಾಪಟ್ ಶ್ರೀನಿವಾಸ್ ವಿಚಾರ ಮಂಡಿಸಲಿದ್ದಾರೆ.

ಸಾಂಪ್ರದಾಯಿಕ ಚಿನ್ನಾಭರಣಗಳ ಪ್ರದರ್ಶನ, ಮಾರಾಟಕ್ಕೆ ಚಾಲನೆ



ಮೈಸೂರಿನ ಗ್ರ್ಯಾಂಡ್ ಮರ್ಕ್ಯೂರಿ ಹೋಟೆಲ್‌ನ ರೀಜೆಂಟ್ ಹಾಲ್‌ನಲ್ಲಿ ಸಿ.ಕೃಷ್ಣಯ್ಯ ಶೆಟ್ಟಿ ಗ್ರೂಪ್ ಆಫ್ ಜ್ಯುವೆಲರಿ ವತಿಯಿಂದ ಆಯೋಜಿಸಿದ್ದ ಸಾಂಪ್ರದಾಯಿಕ ಚಿನ್ನಾಭರಣಗಳ ಪ್ರದರ್ಶನ–ಮಾರಾಟಕ್ಕೆ ನಟಿ ರಾಧ್ಯ ಚಾಲನೆ ನೀಡಿದರು.

ಮೈಸೂರು, ಜೂ. 24– ಮೈಸೂರಿನ ಗ್ರ್ಯಾಂಡ್ ಮರ್ಕ್ಯೂರಿ ಹೋಟೆಲ್‌ನ ರೀಜೆಂಟ್ ಹಾಲ್‌ನಲ್ಲಿ ಸಿ.ಕೃಷ್ಣಯ್ಯ ಶೆಟ್ಟಿ ಗ್ರೂಪ್ ಆಫ್ ಜ್ಯುವೆಲರಿ ವತಿಯಿಂದ ಆಯೋಜಿಸಿದ್ದ ಸಾಂಪ್ರದಾಯಿಕ ಚಿನ್ನಾಭರಣಗಳ ಪ್ರದರ್ಶನ ಮತ್ತು ಮಾರಾಟಕ್ಕೆ ನಟಿ ರಾಧ್ಯ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು, ಮೈಸೂರು ನನ್ನ ಹುಟ್ಟೂರು ಆಗಿರುವುದರಿಂದ ಇಲ್ಲಿ ಇಂತಹ ಮೇಳ ನಡೆಯುವುದು ಸಂತಸದ ಸಂಗತಿ. ಅದರಲ್ಲೂ ಕೃಷ್ಣಯ್ಯಶೆಟ್ಟಿ ಕಂಪನಿ ಮಹಾರಾಜರಿಗೆ ಚಿನ್ನಾಭರಣ ಸಿದ್ಧ ಮಾಡಿಕೊಡುತ್ತಿದ್ದ ಹಿನ್ನೆಲೆಯುಳ್ಳ ಉತ್ಕೃಷ್ಟ ಕಂಪನಿಯಾಗಿದ್ದು, ಇಲ್ಲಿ ಆಭರಣಗಳನ್ನು ಖರೀದಿಸುವುದೆಂದರೆ ಹೆಮ್ಮೆಯ ಸಂಗತಿ ಎಂದು ಹೇಳಿದರು. ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ತೇಜಸ್ ಇನ್ನಿತರರು ಉಪಸ್ಥಿತರಿದ್ದರು.

ಸಾದನಹಳ್ಳಿ ಆಶ್ರಮದಲ್ಲಿ ಸಾಮೂಹಿಕ ಉಪನಯನ




ಮೈಸೂರಿನ ಸಾದನಹಳ್ಳಿ ಸೇವಾಶ್ರಮದಲ್ಲಿ ಲೋಕ ಕಲ್ಯಾಣಾರ್ಥವಾಗಿ ವಿಶೇಷ ಹೋಮ–ಹವನ, ಸಾಮೂಹಿಕ ಉಪನಯನ ಕಾರ್ಯಕ್ರಮ, ಸಂಸ್ಥಾಪಕ ಅಧ್ಯಕ್ಷ ಅಭಿನವ ರಾಮಾನುಜ ಜೀಯರ್ ನೇತೃತ್ವದಲ್ಲಿ ಜರುಗಿದವು. ನಂತರ ನೂರಾರು ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ನಾಳೆಯಿಂದ ರಾಜ್ಯ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟ

ಮೈಸೂರು, ಜೂ.24–ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮೈಸೂರು ಪ್ರಾದೇಶಿಕ ಕೇಂದ್ರದ ವತಿಯಿಂದ ಜೂ.26ರಿಂದ 29ರವರೆಗೆ 4 ದಿನಗಳ ಕಾಲ ರಾಜ್ಯ ಮಟ್ಟದ ಅಂತರ ಪುರುಷ ಮತ್ತು ಮಹಿಳಾ ಅಥ್ಲೆಟಿಕ್ ಕ್ರೀಡಾಕೂಟವನ್ನು ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ರಾಜ್ಯದ ಎಲ್ಲಾ ಭಾಗಗಳ ಸುಮಾರು 1500ರಿಂದ 2000 ಕ್ರೀಡಾಪಟುಗಳು, 25 ಪುರುಷರು, 25 ಮಹಿಳಾ ವಿವಿಧ ಅಥ್ಲೆಟಿಕ್ ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದಾರೆ. ಜೂ.26ರಂದು ಬೆಳಗ್ಗೆ 10 ಗಂಟೆಗೆ ಆರಂಭವಾಗುವ ಕ್ರೀಡಾಕೂಟದ ಅಧ್ಯಕ್ಷತೆಯನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ ವಹಿಸಲಿದ್ದಾರೆ. ಅಂತರರಾಷ್ಟ್ರೀಯ ಅಥ್ಲೀಟ್, ಅರ್ಜುನ್ ಪ್ರಶಸ್ತಿ ವಿಜೇತರಾದ ಅಶ್ವಿನಿ ನಾಚಪ್ಪ ಕ್ರೀಡಾಕೂಟ ಉದ್ಘಾಟಿಸಲಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.06.2024 ಮಂಗಳವಾರ, ಮಳೆ ನಕ್ಷತ್ರ: ಆರಿದ್ರಾ 22.06.2024ರಿಂದ 05.07.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಶ್ರವಣ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ಸಂಶೋಧನೆ ಮತ್ತು ಪ್ರಕಟಣಾ ನೀತಿಶಾಸ್ತ್ರ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರ, ಅಧ್ಯಕ್ಷತೆ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು: ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊಎನ್.ಕೆ.ಲೋಕನಾಥ್, ಉಪಸ್ಥಿತರು : ಕರಾಮುವಿವಿ ಕುಲಸಚಿವರಾದ ಪ್ರೊ.ಕೆ.ಬಿ.ಪ್ರವೀಣಾ, ಪ್ರಾಸ್ತಾವಿಕ ನುಡಿ: ಕರಾಮುವಿವಿ ಡೀನ್ (ಶೈಕ್ಷಣಿಕ) ಪ್ರೊ. ಎನ್. ಲಕ್ಷ್ಮೀ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10ಕ್ಕೆ.

■ **ಕಾವೇರಿ ಸಮೂಹ ವಿದ್ಯಾಸಂಸ್ಥೆ :** ವೆರಿಕೋಸ್ ವೇನ್ಸ್, ಕಾಲಿನ ರಕ್ತನಾಳಗಳ ದಪ್ಪ ಆಗುವಿಕೆ ಮತ್ತು ಗಂಟು ಕಟ್ಟುವಿಕೆ ಕುರಿತು ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ.


■ **ಕ್ರೆಡಾಯ್ ಮೈಸೂರು:** ರಾಜ್ಯ ಮಟ್ಟದ ಕ್ರೆಡಾಯ್ ಸಮಾವೇಶ–2024, ಸ್ಥಳ: ಸೈಲೆಂಟ್ ಶೋರ್ಸ್ ರೆಸಾರ್ಟ್, ಹೂಟಗಳ್ಳಿ, ಬೆಳಗ್ಗೆ 10.30ಕ್ಕೆ.

■ **ಜೈ ಭೀಮ್ ಜನಸ್ಪಂದನ ವೇದಿಕೆ:** ನಾಡೋಜ ಕಮಲಾ ಹಂಪನಾ ಅವರಿಗೆ ನುಡಿ ನಮನ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಮಹಿಳಾ ಸಾಹಿತಿ ಡಾ.ಲೀಲಾಪ್ರಕಾಶ್, ಜೀವಧಾರ ರಕ್ತನಿಧಿ ಕೇಂದ್ರದ ಗಿರೀಶ್, ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್, ಜೈ ಭೀಮ್ ಜನಸ್ಪಂದನ ವೇದಿಕೆ ಅಧ್ಯಕ್ಷ ಚೇತನ್ ಕಾಂತರಾಜ್, ಸ್ಥಳ: ಉರಿಲಿಂಗಿ ಪೆದ್ದಿ ಮಠದ ಸಭಾಂಗಣ, ಗಾಂಧಿನಗರ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ವಿಶೇಷ ಉಪನ್ಯಾಸ–4, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀಮತಿ ಪಿ.ಎಸ್. ಆಶಾ ಅವರಿಂದ ಬುಡಕಟ್ಟು ಸಮುದಾಯಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಸ್ಥಿತಿಗತಿಗಳು ಕುರಿತು ಉಪನ್ಯಾಸ, ಸಂಜೆ 5.30 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ : ಕಾಲೇಜು ಆವರಣ, ಊಟಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಸಾಮಾಜಿಕ ನ್ಯಾಯಕ್ಕಾಗಿ ನಾಗರಿಕರು :** ತುರ್ತು ಪರಿಸ್ಥಿತಿಗೆ 50 ವರ್ಷ, ಸಂವಿಧಾನಕ್ಕೆ ಮಾಡಿದ ಅಪಚಾರ ಕುರಿತು ಸಂವಾದ ಕಾರ್ಯಕ್ರಮ, ವಕ್ತಾರರು : ಕಾರ್ಕಳ ಶಾಸಕ ವಿ. ಸುನೀಲ್ ಕುಮಾರ್, ಅಧ್ಯಕ್ಷತೆ : ಮೈಸೂರು ವಿವಿ ಅರ್ಥಶಾಸ್ತ್ರ ವಿಭಾಗದ ಡಾ. ಕೆ.ಸಿ. ಬಸವರಾಜ್, ಅತಿಥಿಗಳು : ಕುಡುಚಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಪಿ. ರಾಜೀವ್, ಕೆ.ಆರ್.ಪುರಂ ಶಾಸಕ ಭೈರತಿ ಬಸವರಾಜ್, ಸ್ಥಳ: ಕಲಾಮಂದಿರ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ಸುಖದೇವ್ ಪಾನಬುಡೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಶ್ರದ್ಧೆಯ ಶಿಲ್ಪ' ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್. ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು. 6.40 ಪದಸಂಸ್ಕೃತಿ, ಪ್ರಸ್ತುತಿ– ಡಾ. ಟಿ. ವಿ. ಸತ್ಯನಾರಾಯಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಅ.ನ.ಕೃ ಅವರ "ಉದಯರಾಗ" ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ : ಉಮೇಶ್ ಎಸ್. ಎಸ್., 8.30 ಚಿತ್ರಗೀತೆಗಳು, 9.00 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ :ಕೆ.ಜೆ. ಯೇಸುದಾಸ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳೀಮಠ್

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.20 ಭಾವಗೀತೆಗಳು–ನವನೀತ್ ಕೃಷ್ಣನ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಓ.ಎಸ್. ಅರುಣ್ – ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ–ಕಟೀಲು ಕ್ಷೇತ್ರ ಮಹಾತ್ಮೆ, ಪ್ರಸ್ತುತಿ: ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 5.30 Pashudhan Se Behthar Jeevan, ಪ್ರಾಯೋಜಕರು : ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಸಚಿವಾಲಯ, 6.50 ಕೃಷಿರಂಗ: ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಐಸಿರಿ – ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ರೇಷ್ಮೆ ಹುಳು ಸಾಕಾಣಿಕೆ ಕುರಿತು ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುತ್ತಾರೆ : ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಶಿವಕುಮಾರ್ ಮತ್ತು ಮದ್ದೂರು ತಾಲೂಕು ಅವಸರದಳ್ಳಿಯ ರೇಷ್ಮೆ ಕೃಷಿಕ ಎ. ಎಂ. ಮಹೇಶ್, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್ –ಸಾಪ್ತಾಹಿಕ ಸಂಚಿಕೆ. ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ದೆಹಲಿ. ವಿ.ಮುತ್ತುಕುಮಾರ್ – ಹಾಡುಗಾರಿಕೆ, 10.00 ಚೈತ್ರವನ ಲಕ್ಷೀಶನ ಜೈಮಿನಿ ಭಾರತ ಕಾವ್ಯದ ಸಮಗ್ರ ವಾಚನ ವ್ಯಾಖ್ಯಾನ, ವಾಚನ– ಹೆಚ್.ಎಲ್. ಶ್ರೀ ಕಂಠ, ವ್ಯಾಖ್ಯಾನ: ಹೆಚ್. ಎಸ್. ಗೋಪಾಲ್, ಪ್ರಸ್ತುತಿ: ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು

18ನೇ ಲೋಕಸಭೆಯ ಸದಸ್ಯರಾಗಿ ಮೋದಿ, ಅಮಿತ್ ಶಾ ಸೇರಿ ಹಲವು ಸಚಿವರು, ಸಂಸದರಿಂದ ಪ್ರಮಾಣ ವಚನ ಸ್ವೀಕಾರ





ನವದೆಹಲಿ: 18ನೇ ಲೋಕಸಭೆಯ ಮೊದಲ ಅಧಿವೇಶನ ಸೋಮವಾರ ಆರಂಭವಾಗಿದ್ದು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಸೇರಿದಂತೆ ಹಲವು ಕೇಂದ್ರ ಸಚಿವರು ಸೇರಿದಂತೆ ಹಲವು ನಾಯಕರು ನೂತನ ಸಂಸದರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಮೋದಿ ಅವರು ಸಭಾನಾಯಕರಾಗಿ ಪ್ರಮಾಣವಚನ ಸ್ವೀಕರಿಸಿದ ಮೊದಲಿಗರು. ಸತತ ಮೂರನೇ ಅವಧಿಗೆ ಅಧಿಕಾರಕ್ಕೆ ಮರಳಿದ ಪ್ರಧಾನಿ ಮೋದಿ ಅವರಿಗೆ ಹಂಗಾಮಿ ಸ್ಪೀಕರ್ ಆಗಿ ನೇಮಕಗೊಂಡಿರುವ ಬಿಜೆಪಿಯ ಹಿರಿಯ ನಾಯಕ ಭರ್ತೃಹರಿ ಮಹತಾಬ್ ಅವರು ಪ್ರಮಾಣ ವಚನ ಬೋಧಿಸಿದರು.

ಮೋದಿ ಅವರು ಜೂನ್ 9 ರಂದು ಮೂರನೇ ಬಾರಿಗೆ ದೇಶದ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ನಂತರ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹಾಗೂ ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಸೇರಿದಂತೆ ಹಲವು ನಾಯಕರು 18ನೇ ಲೋಕಸಭೆಯ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ರಾಜ್ಯಸಭೆಯಲ್ಲಿ ಸದನದ ನಾಯಕರಾಗಿ ಜೆಪಿ ನಡ್ಡಾ

ನವದೆಹಲಿ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಮತ್ತು ಕೇಂದ್ರ ಸಚಿವ ಜೆಪಿ ನಡ್ಡಾ ಅವರು ರಾಜ್ಯಸಭೆಯಲ್ಲಿ ಸದನದ ನಾಯಕರಾಗಿ ನೇಮಕಗೊಂಡಿದ್ದಾರೆ. 18ನೇ ಲೋಕಸಭೆಯ ಮೊದಲ ಅಧಿವೇಶನ ಆರಂಭವಾದ ಸೋಮವಾರದಂದು ಬಿಜೆಪಿ ಜೆ.ಪಿ.ನಡ್ಡಾ ಅವರನ್ನು ರಾಜ್ಯಸಭೆಯಲ್ಲಿ ಸದನ ನಾಯಕರಾಗಿ ಆಯ್ಕೆ ಮಾಡಿತು.

ಕರ್ನಾಟಕದ ಸಂಸದರ ಪ್ರಮಾಣವಚನ ಸ್ವೀಕಾರ


ಮತದಾರರ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸಿದ ಡಾ. ಸಿ.ಎನ್. ಮಂಜುನಾಥ್



ಕುಮಾರಸ್ವಾಮಿ



ವಿ.ಸೋಮಣ್ಣ



ಯದುವೀರ್ ಒಡೆಯರ್



ಡಾ. ಸಿ.ಎನ್. ಮಂಜುನಾಥ್



ಸುನಿಲ್ ಬೋಸ್



ಶ್ರೇಯಸ್ ಪಟೇಲ್

ನವದೆಹಲಿ, ಜೂ. 24– ಹದಿನೆಂಟನೇ ಲೋಕಸಭೆಯ ಮೊದಲ ಅಧಿವೇಶನ ಪ್ರಾರಂಭವಾದ ಸೋಮವಾರದಂದು ಕರ್ನಾಟಕದ 28 ಸಂಸದರು ಪ್ರಮಾಣವಚನ ಸ್ವೀಕರಿಸಿದರು.

ಲೋಕಸಭಾಧ್ಯಕ್ಷ ಬಿ. ಮಹತಾಬ್ ಅವರು ನೂತನ ಸಂಸದರಿಗೆ ಪ್ರಮಾಣವಚನ ಬೋಧಿಸಿದರು. ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕೇಂದ್ರ ಸಚಿವರೂ ಆದ ಮಂಡ್ಯ ಸಂಸದ ಹೆಚ್.ಡಿ.ಕುಮಾರಸ್ವಾಮಿ, ಚಾಮರಾಜನಗರ ಸಂಸದ ಸುನೀಲ್ ಬೋಸ್, ಹಾಸನ ಸಂಸದ ಶ್ರೇಯಸ್ ಪಟೇಲ್, ಕೇಂದ್ರ ಸಚಿವರೂ ಆದ ತುಮಕೂರು ಸಂಸದ ವಿ. ಸೋಮಣ್ಣ ಸೇರಿದಂತೆ ಬಹುತೇಕ ಕರ್ನಾಟಕ ಸಂಸದರು ಕನ್ನಡದಲ್ಲೇ ಪ್ರಮಾಣವಚನ ಸ್ವೀಕರಿಸಿದರೆ, ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸಂಸ್ಕೃತದಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಕರ್ನಾಟಕದ ಬಹುತೇಕ ಸಂಸದರು ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಆದರೆ, ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಾ. ಸಿ.ಎನ್. ಮಂಜುನಾಥ್ ಅವರು ಮತದಾರರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿ ಗಮನ ಸೆಳೆದರು.

ಅಂಕಗಳ ಜೊತೆಗೆ ಕೌಶಲವಿದ್ದರೆ ಸಾಧನೆ ಹಾದಿ ಸುಗಮ

● ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ಅಧ್ಯಕ್ಷರೂ ಆದ ಮಾಜಿ ಕಾರ್ಪೊರೇಟರ್ ಕೆ.ವಿ.ಶ್ರೀಧರ್ ವಿದ್ಯಾರ್ಥಿಗಳಿಗೆ ಕಿವಿಮಾತು ● ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ನಂತರ ಮುಂದೇನು?; ಶಿಕ್ಷಣ ತಜ್ಞರಿಂದ ಮಾರ್ಗದರ್ಶನ



ಮೈಸೂರಿನ ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ 'ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ನಂತರ ಮುಂದೇನು?' ಕುರಿತ ಮಾರ್ಗದರ್ಶನ ಕಾರ್ಯಕ್ರಮವನ್ನು ಗಣ್ಯರು ಗಿಡಕ್ಕೆ ನೀರೆರೆದು ಉದ್ಘಾಟಿಸಿದರು.

ಮೈಸೂರು, ಜೂ.24(ಎಸ್‌ಬಿಡಿ)– ಸ್ಪರ್ಧಾತ್ಮಕ ಯುಗದಲ್ಲಿ ಅಂಕಗಳ ಜೊತೆಗೆ ಅಗತ್ಯ ಕೌಶಲಗಳಿದ್ದರೆ ಮಾತ್ರ ಸಾಧನೆ ಸಾಧ್ಯ ಎಂದು ಮೈಸೂರಿನ ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ಅಧ್ಯಕ್ಷರಾದ ಮಾಜಿ ಕಾರ್ಪೊರೇಟರ್ ಕೆ.ವಿ.ಶ್ರೀಧರ್ ಸಲಹೆ ನೀಡಿದರು.

ಮೈಸೂರು ವಿಜಯನಗರದಲ್ಲಿನ ಕೊಡಗು ಗೌಡ ಸಮಾಜದ ಭವನದಲ್ಲಿ ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ನಂತರ ಮುಂದೇನು?' ಕುರಿತು ಶಿಕ್ಷಣ ತಜ್ಞರಿಂದ ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿ, ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದರ ಜೊತೆಗೆ ಮುಂದಿನ ಹಾದಿಯ ಬಗ್ಗೆ ಜಾಗೃತಿ ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶ. ಶಿಕ್ಷಣ ತಜ್ಞರ ಸಲಹೆ ದೊರೆತರೆ ಮಕ್ಕಳ ಭವಿಷ್ಯದ ಬಗ್ಗೆ ಚಿಂತಿಸುವ ಪೋಷಕರಿಗೆ ನಿರ್ಧಾರ ತೆಗೆದುಕೊಳ್ಳಲು ಸಹಕಾರಿಯಾಗುತ್ತದೆ ಎಂದರು.

ಪ್ರಸ್ತುತ ಕಾಲಘಟ್ಟದಲ್ಲಿ ಹೆಚ್ಚು ಅಂಕ ಗಳಿಸಿದ ಮಾತ್ರಕ್ಕೆ ಅವಕಾಶಗಳು ಹುಡುಕಿಕೊಂಡು ಬರುವುದಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ. ಅಂಕಗಳ ಜೊತೆಗೆ ಅಗತ್ಯ ಕೌಶಲಗಳನ್ನೂ ಹೊಂದಿರಬೇಕು. ಹಣ–ಅಧಿಕಾರದ ಬಲದಿಂದ ಎಲ್ಲವೂ ಸಾಧ್ಯ ಎಂಬ ಕಾಲ ಸರಿಯುತ್ತಿದೆ. ಇನ್ನೇನಿದ್ದರೂ ಜ್ಞಾನ ಮತ್ತು ಕೌಶಲ ಬಲಕ್ಕಷ್ಟೇ ಬೆಲೆ. ಇವೆರಡಿದ್ದರೆ ಅವಕಾಶಗಳು ತಮ್ಮ ಬಳಿಗೇ ಬರುತ್ತವೆ. ಹಾಗಾಗಿ ಈ ಬಗ್ಗೆ ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ನಮ್ಮ ಟ್ರಸ್ಟ್ ಮುಂದಾಗಿದೆ ಎಂದು ತಿಳಿಸಿದರು.

ಹಿರಿಯ ಸಾಹಿತಿ ಪ್ರೊ.ಸಿ.ನಾಗಣ್ಣ ಮಾತನಾಡಿ, ವಿದ್ಯಾರ್ಥಿಗಳು ಕೌಶಲದ ಜತೆಗೆ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕು. ಇದರಿಂದ ಮುಂದಿನ ಜೀವನದಲ್ಲಿ ಉತ್ತಮ ನೆಲೆ ಕಂಡುಕೊಳ್ಳಲು ಸಾಧ್ಯ. ಪೋಷಕರು, ಗುರು–ಹಿರಿಯರನ್ನು ಗೌರವದಿಂದ ಕಾಣುವ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಮಾರ್ಗದರ್ಶನ ನೀಡಿದರು.


ಮೈಸೂರಿನ ಮೈ ಕರೀಯರ್ ಲ್ಯಾಬ್ ಸ್ಥಾಪಕ ಶಂಕರ್ ಬೆಳ್ಳೂರು ಮಾತನಾಡಿ, ಪ್ರಸ್ತುತ ಕಾರ್ಪೊರೇಟ್ ಕಂಪನಿಗಳು ನೇಮಕಾತಿ ಮಾನದಂಡದಲ್ಲಿ ಸಾಕಷ್ಟು ಬದಲಾವಣೆ ಮಾಡಿಕೊಂಡಿವೆ. ಹೆಚ್ಚು ಅಂಕಗಳ ಬದಲಿಗೆ ಅಭ್ಯರ್ಥಿಗಳ ಕೌಶಲ, ನೂತನ ತಂತ್ರಜ್ಞಾನ ಅಳವಡಿಸಿಕೊಳ್ಳುವ ಪ್ರತಿಭೆಗಳಿಗೆ ದೊಡ್ಡ ಸಂಸ್ಥೆಗಳು ಮಣೆ ಹಾಕುತ್ತಿವೆ. ಹೀಗಾಗಿ ಪೋಷಕರು ತಮ್ಮ ಮಕ್ಕಳನ್ನು ಅಂಕ ಗಳಿಕೆಗಷ್ಟೇ ಸೀಮಿತಗೊಳಿಸದೆ ಅವರಿಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಅವಕಾಶ ಕಲ್ಪಿಸಿಕೊಡಬೇಕು. ವಿಜ್ಞಾನ, ವಾಣಿಜ್ಯ ವಿಷಯದಲ್ಲಿ ಮಾತ್ರವಲ್ಲದೇ ಕಲಾ ವಿಭಾಗದಲ್ಲೂ ವಿಫುಲ ಅವಕಾಶಗಳಿವೆ ಎಂಬುದನ್ನು ತಿಳಿಯಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಅನಿಕೇತನ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ.ಮಲ್ಲೇಶ್, ಕೊಡಗು ಗೌಡ ಸಮಾಜದ ಅಧ್ಯಕ್ಷ ಕೊಂಬಾರನ ಬಸಪ್ಪ ಮತ್ತಿತರರು ಭಾಗವಹಿಸಿದ್ದರು.



ಮೈಸೂರು ಪಾಲಿಕೆ ವಿವಿ ವಾಟರ್ ವರ್ಕ್ಸ್ ವ್ಯರ್ಥ ನೀರು ಚೆಲುವಾಂಬ ಪಾರ್ಕ್‌ನ ಸಸ್ಯ ಸಮೃದ್ಧಿಗೆ ಬಳಕೆ

ಐದು ಲಕ್ಷ ರೂ.ವೆಚ್ಚದಲ್ಲಿ ಲಕ್ಷ ಲೀಟರ್ ಸಾಮರ್ಥ್ಯದ ಸಂಪ್ ನಿರ್ಮಾಣ





ಮೈಸೂರು, ಜೂ.24(ಎಂಕೆ)– ಮೈಸೂರು ನಗರಪಾಲಿಕೆ ವಾಣಿವಿಲಾಸ ವಾಟರ್ ವರ್ಕ್ಸ್‌ನಿಂದ ವ್ಯರ್ಥವಾಗುತ್ತಿದ್ದ, ಕುಡಿಯಲು ಯೋಗ್ಯವಲ್ಲ(ಬ್ಯಾಕ್ ವಾಷ್ ವಾಟರ್)ದ ನೀರು ಇನ್ನು ಮುಂದೆ ಉಪಯುಕ್ತ...!

ಪ್ರತಿನಿತ್ಯ ವಾಣಿವಿಲಾಸ ವಾಟರ್ ವರ್ಕ್ಸ್‌ನಿಂದ ಕುಕ್ಕರಹಳ್ಳಿ ಕೆರೆಗೆ ಹರಿಯುತ್ತಿದ್ದ ಬ್ಯಾಕ್ ವಾಷ್ ವಾಟರ್ (ಫಿಲ್ಟರ್‌ಗಳನ್ನು ಕ್ಲೀನ್ ಮಾಡಲು ಬಳಸಿದ ನೀರು) ಅನ್ನು ನಗರದಲ್ಲಿ ಸುಂದರ ಹಾಗೂ ಹಚ್ಚ ಹಸಿರಿನಿಂದ ಕೂಡಿರುವ ಉದ್ಯಾನವನಗಳಲ್ಲೊಂದಾದ ವಾರ್ಡ್ 18ರ ವ್ಯಾಪ್ತಿಯ ಯಾದವಗಿರಿ ಚೆಲುವಾಂಬ ಪಾರ್ಕ್‌ನ ಹಸಿರೀಕರಣಕ್ಕೆ ಬಳಕೆ ಮಾಡಲು ಸಿದ್ಧತೆ ನಡೆದಿದೆ.

ನಗರಪಾಲಿಕೆಯು ಯಾವುದೇ ಕಾರ್ಯಕ್ರಮಗಳಿಗೆ, ನಗರದಲ್ಲಿರುವ ಪ್ರಮುಖ ರಸ್ತೆಗಳ ಡಿವೈಡರ್ ಮಧ್ಯದಲ್ಲಿಡಲು ವಿವಿಧ ಬಗೆಯ ಗಿಡಗಳನ್ನು ಚೆಲುವಾಂಬ ಪಾರ್ಕ್‌ನಲ್ಲಿಯೇ ಬೆಳೆಸಲಾಗುತ್ತಿದೆ. ಅಲ್ಲದೆ ವಿಶಾಲವಾದ ಪಾರ್ಕ್‌ನಲ್ಲಿರುವ ಗಿಡ–ಮರಗಳಿಗೆ ನೀರುಣಿಸಲು ಟ್ಯಾಂಕರ್‌ಗಳಿಂದ ಪ್ರತಿನಿತ್ಯ ನೀರು ಪೂರೈಕೆ ಮಾಡಲಾಗುತ್ತಿತ್ತು. ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ವಾಣಿ ವಿಲಾಸ್ ವಾಟರ್ ವರ್ಕ್ಸ್‌ನಿಂದ ಕುಕ್ಕರಹಳ್ಳಿ ಕೆರೆಗೆ ಚೆಲುವಾಂಬ ಪಾರ್ಕ್ ಪಕ್ಕದಲ್ಲಿಯೇ ಪೈಪ್‌ಲೈನ್ ಮೂಲಕ ಹರಿಯುತ್ತಿದ್ದ ಬ್ಯಾಕ್ ವಾಷ್ ವಾಟರ್ ಅನ್ನು ಸಂಗ್ರಹಿಸಿ ಬಳಸಲು ಸಂಪ್(ಟ್ಯಾಂಕ್) ನಿರ್ಮಿಸಲಾಗುತ್ತಿದೆ.

ಚೆಲುವಾಂಬ ಪಾರ್ಕ್ ಆವರಣದಲ್ಲಿ (ಸ್ವಾಮಿ ವಿವೇಕಾನಂದರ ಪ್ರತಿಮೆ ಹಿಂಭಾಗ ಮತ್ತು ಫೌಂಟೆನ್ ಪಕ್ಕ) ಸುಮಾರು 1 ಲಕ್ಷ ಲೀಟರ್ ನೀರು ಸಂಗ್ರಹಣೆಯ ಸಾಮರ್ಥ್ಯವುಳ್ಳ ಸಂಪನ್ನು ನಿರ್ಮಿಸಲಾಗುತ್ತಿದ್ದು, ಪಾರ್ಕ್‌ನ ಹಸಿರೀಕರಣದ ನಿರ್ವಹಣೆ, ನರ್ಸರಿ, ಫೌಂಟೆನ್ ಸೇರಿದಂತೆ ಇನ್ನಿತರೆ ಬಳಕೆಗೆ ಉಪಯೋಗಿಸಲು ನಿರ್ಧರಿಸಲಾಗಿದೆ. ಪ್ರತಿನಿತ್ಯ ವ್ಯರ್ಥವಾಗುತ್ತಿದ್ದ ನೀರನ್ನು ಸದ್ಬಳಕೆ ಹಾಗೂ ನೀರಿನ ಕೊರತೆ ಎದುರಿಸುತ್ತಿದ್ದ ಚೆಲುವಾಂಬ ಪಾರ್ಕ್ ಅನ್ನು ಇನ್ನಷ್ಟು ಹಸಿರೀಕರಣಗೊಳಿಸಲು ಮುಂದಾಗಿರುವುದಕ್ಕೆ ಪರಿಸರ ಪ್ರೇಮಿಗಳು, ಸ್ಥಳೀಯ ನಿವಾಸಿಗಳು, ವಾಯು ವಿಹಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

20–30 ಲಕ್ಷ ಲೀಟರ್: ವಾಣಿ ವಿಲಾಸ ವಾಟರ್ ವರ್ಕ್ಸ್‌ನಲ್ಲಿರುವ ಫಿಲ್ಟರ್‌ಗಳನ್ನು ಕ್ಲೀನ್ ಮಾಡಲು ಬಳಸಿದ ನೀರನ್ನು(ಬ್ಯಾಕ್ ವಾಷ್ ವಾಟರ್) ಕುಕ್ಕರಹಳ್ಳಿ ಕೆರೆಗೆ ಮತ್ತು ರೈಲ್ವೆ ಬಡಾವಣೆಯಲ್ಲಿರುವ ರಾಜಕಾಲುವೆಗೆ ಹರಿಸಲಾಗುತ್ತಿದೆ. ಕುಕ್ಕರಹಳ್ಳಿ ಕೆರೆಗೆ ಹರಿಸುವ ನೀರನ್ನು ಸ್ವಲ್ಪ ಡೈವರ್ಟ್ ಮಾಡಿ, ಚೆಲುವಾಂಬ ಪಾರ್ಕ್‌ನಲ್ಲಿ ಸಂಗ್ರಹಿಸಿ, ಸದ್ಬಳಕೆ ಮಾಡಲು ಮುಂದಾಗಿದ್ದು, ಅದರಂತೆ ಸುಮಾರು 5 ಲಕ್ಷ ರೂ ವೆಚ್ಚದಲ್ಲಿ 1 ಲಕ್ಷ ಲೀಟರ್ ನೀರು ಸಂಗ್ರಹಣ ಸಾಮರ್ಥ್ಯದ ಸಂಪ್ ನಿರ್ಮಿಸಲಾಗುತ್ತಿದೆ. ಸಂಪ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ತಿಂಗಳ ಅವಧಿಯಲ್ಲಿ ಪೂರ್ಣಗೊಳ್ಳಲಿದೆ ಎಂದು ವಾಣಿವಿಲಾಸ ವಾಟರ್ ವರ್ಕ್ಸ್‌ನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮೊಹಮ್ಮದ್ ಮುಸ್ತಾಫ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಚೆಲುವಾಂಬ ಪಾರ್ಕ್‌ಗೆ ಶಾಶ್ವತ ನೀರು...

ನಗರದ ಅತ್ಯಂತ ಹಳೆಯ ಹಾಗೂ ಅಭಿವೃದ್ಧಿಯಾದ ಚೆಲುವಾಂಬ ಪಾರ್ಕ್ ನಿರ್ವಹಣೆಗೆ ನೀರಿನ ಕೊರತೆ ಇದ್ದು, ಪ್ರತಿನಿತ್ಯ ನೀರಿನ ಟ್ಯಾಂಕರ್‌ಗಳಿಂದ ನೀರು ಪೂರೈಕೆ ಮಾಡಲಾಗುತ್ತಿತ್ತು. ನರ್ಸರಿ ನಿರ್ವಹಣೆಗೆ ತೊಂದರೆಯಾಗುತ್ತಿತ್ತು. ಹಾಗಾಗ ಬೋರ್‌ವೆಲ್ ಕೆಟ್ಟು ಹಾಳಾಗುತ್ತಿತ್ತು. ಆದ್ದರಿಂದ ನೀರಿನ ಕೊರತೆ ನೀಗಿಸುವ ಹಾಗೂ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಬೃಹತ್ ಸಂಪ್ ನಿರ್ಮಿಸಲಾಗುತ್ತಿದೆ. ಇದೇ ಸಂಪ್ ನೀರನ್ನು ಬಳಸಿ, ಫೌಂಟೆನ್ ಅನ್ನು ಬೆಳಗಿಸಲಾಗುವುದು.

- ರವೀಂದ್ರ, ನಗರ ಪಾಲಿಕೆ ಮಾಜಿ ಸದಸ್ಯ, ವಾರ್ಡ್ ನಂ.18


ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಸ್ಮರಣೆ



ಮೈಸೂರು ನಗರ ಬಿಜೆಪಿ ಕಚೇರಿಯಲ್ಲಿ ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಬಲಿದಾನ ದಿವಸ ಪ್ರಯುಕ್ತ ಅವರ ಭಾವಚಿತ್ರಕ್ಕೆ ನಗರ ಪ್ರಧಾನ ಕಾರ್ಯದರ್ಶಿಗಳಾದ ಬಿ.ಎಂ.ರಘು, ನೈರುತ್ಯ ರೈಲ್ವೆ ಸಲಹಾ ಸಮಿತಿ ಸದಸ್ಯ ಶಿವರಾಜ್, ನಗರ ಮಾಧ್ಯಮ ಸಂಚಾಲಕ ಸಂತೋಷ್, ಎಸ್ಸಿ ಮೋರ್ಚಾ ಉಪಾಧ್ಯಕ್ಷ ಸೋಮಶೇಖರ್ ಪುಷ್ಪಾರ್ಚನೆ ಮಾಡಿದರು.

ಕಳಚಿ ಬಿದ್ದ ನಾಲ್ವಡಿ ಪ್ರತಿಮೆ ಗೋಪುರದ ಲೋಹದ ತಗಡು

● ಮೂರ್ನಾಲ್ಕು ದಿನಗಳಾದರೂ ಕ್ರಮಕ್ಕೆ ಮುಂದಾಗದ ನಗರಪಾಲಿಕೆ ● ಸ್ಥಳೀಯ ಆಡಳಿತದ ವಿರುದ್ಧ ನಿರ್ಲಕ್ಷ್ಯದ ಆರೋಪ



ಕೆಆರ್ ವೃತ್ತದಲ್ಲಿರುವ ನಾಲ್ವಡಿಯವರ ಪ್ರತಿಮೆ ಆವರಣದಲ್ಲಿ ಗೋಪುರದಿಂದ ಕಳಚಿ ಬಿದ್ದಿರುವ ಲೋಹದ ತಗಡು.

ಮೈಸೂರು,ಜೂ.24(ಪಿಎಂ)– ಮೈಸೂರಿನ ಹೃದಯ ಭಾಗದ ಕೆಆರ್ ವೃತ್ತದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಯ ಗೋಪುರದ ವಿನ್ಯಾಸಕ್ಕಾಗಿ ಬಳಸಿರುವ ಚಿನ್ನದ ಬಣ್ಣ ಲೇಪಿತ ಲೋಹದ ತಗಡುಗಳ ಪೈಕಿ ಒಂದು ಅರ್ಧಕ್ಕೆ ತುಂಡಾಗಿ ಬಿದ್ದಿದೆ.

ಇಲ್ಲಿನ ಸ್ಥಳೀಯ ವ್ಯಾಪಾರಸ್ಥರು ಹೇಳುವ ಪ್ರಕಾರ ಇದು ಬಿದ್ದು ಮೂರ್ನಾಲ್ಕು ದಿನಗಳೇ ಕಳೆದಿವೆ. ಆದಾಗ್ಯೂ ಇದು ಮೈಸೂರು ಮಹಾನಗರ ಪಾಲಿಕೆ ಗಮನಕ್ಕೆ ಬಂದಂತಿಲ್ಲ. ಜೊತೆಗೆ ಗೋಪುರದ ಟೈಲ್ಸ್‌ಗಳಲ್ಲೂ ಬಿರುಕು ಮೂಡಿದೆ.

ಈ ಹಿಂದೆಯೂ ಗೋಪುರದ ಚಾವಣಿಯ ಒಂದು ಭಾಗದಲ್ಲಿ ಗಾರೆಯ ಪ್ಲಾಸ್ಟರಿಂಗ್ ಉದುರಿತ್ತು. ಅಲ್ಲದೆ, ಇದಕ್ಕೂ ಹಿಂದೆ ನಾಲ್ವಡಿಯವರ ಪ್ರತಿಮೆಯಲ್ಲಿಯೇ ಬಿರುಕು ಕಾಣಿಸಿಕೊಂಡಿತ್ತು. ಇದನ್ನು ಗಮನಿಸಿದರೆ ಸೂಕ್ತ ನಿರ್ವಹಣೆಯ ವಿಚಾರದಲ್ಲಿ ಪಾಲಿಕೆ ನಿರ್ಲಕ್ಷ್ಯ ತಾಳಿದೆಯೇ ಎಂಬ ಪ್ರಶ್ನೆ ಮೂಡದಿರದು. ನಿರ್ಮಾಣಗಳಲ್ಲಿ ದಿನ ಕಳೆದಂತೆ ಇದು ಸಹಜ ಎಂದುಕೊಂಡರೂ ಪಾಲಿಕೆ ನಿರ್ವಹಣೆ ಬಗ್ಗೆ ನಾಗರಿಕರು ಅಸಮಾಧಾನ ವ್ಯಕ್ತಪಡಿಸುವುದನ್ನು ನೋಡಿದರೆ ನಿರ್ಲಕ್ಷ್ಯ ಎಂಬ ಮಾತನ್ನು ಹೇಳಲೇಬೇಕಾಗುತ್ತದೆ.


ಇದೀಗ ಗೋಪುರದ ವಿನ್ಯಾಸದ ಲೋಹದ ತಗಡು ಒಂದು ಅರ್ಧಕ್ಕೆ ತುಂಡಾಗಿ ಬಿದ್ದು ಮೂರ್ನಾಲ್ಕು ದಿನಗಳೇ ಕಳೆದಿದ್ದರೂ ಪಾಲಿಕೆ ಯಾವುದೇ ದುರಸ್ತಿಗೆ ಕ್ರಮ ವಹಿಸದೇ ಇರುವುದೂ ನಿರ್ಲಕ್ಷ್ಯ ಮತ್ತು ಸೂಕ್ತ ನಿರ್ವಹಣೆಯಲ್ಲಿನ ಅಸಡ್ಡೆ ಎನ್ನದೇ ಬೇರೆ ವಿಧಿಯಿಲ್ಲ. ಜೊತೆಗೆ ಇಂತಹ ಇನ್ನು ಎರಡು ಲೋಹದ ತಗಡುಗಳು ಕಳಚಿ ಬೀಳುವಂತೆ ಗೋಚರಿಸುತ್ತಿವೆ.

ಲೈಟಿಂಗ್ಸ್‌ಗೆ ಬಳಸುವ ತಂತಿ ಕಾರಣವೇ?: ಗೋಪುರದ ಲೋಹದ ತಗಡು ತುಂಡಾಗಿ ಬೀಳಲು ದಸರಾ, ನಾಲ್ವಡಿ ಜಯಂತಿ ಮೊದಲಾದ ಸಂದರ್ಭದಲ್ಲಿ ಮಾಡುವ ಲೈಟಿಂಗ್ಸ್‌ಗಾಗಿ ಬಳಸುವ ತಂತಿ ಕಾರಣವೇ? ಈ ಪ್ರಶ್ನೆ ಮೂಡಿದ್ದು, ಮೇಲ್ನೋಟಕ್ಕೆ ಅದೇ ಕಾರಣ ಎನ್ನುವಂತೆ ಕಾಣುತ್ತಿದೆ. ಹಾಗಾಗಿ ವಿದ್ಯುತ್ ದೀಪಾಲಂಕಾರ ಮಾಡುವ ಸಂದರ್ಭದಲ್ಲಿ ಅತ್ಯಂತ ಸೂಕ್ಷ್ಮತೆಯಿಂದ ನಿಭಾಯಿಸುವುದು ಅಗತ್ಯವಾಗಿದೆ. ಸೂಕ್ತ ವಿಧಾನಗಳನ್ನು ಕಂಡುಕೊಂಡು ಕೌಶಲಯುತವಾಗಿ ದೀಪಾಲಂಕಾರ ಮಾಡಬೇಕಿದೆ.

ತಲೆ ಮೇಲೆ ಬೀಳುವ ಅಪಾಯ: ಲೋಹದ ತಗಡು ಬಿದ್ದಾಗ ಸಾಕಷ್ಟು ಶಬ್ದವೇ ಕೇಳಿಸಿತು. ಒಂದು ವೇಳೆ ಅದು ವೃತ್ತದಲ್ಲಿ ಸಂಚರಿಸುವವರ ಮೇಲೆ ಬಿದ್ದಿದ್ದರೆ ಅನಾಹುತ ಆಗುವ ಸಂಭವವಿತ್ತು ಇನ್ನು ಎರಡು ಬೀಳುವ ಆತಂಕವಿದೆ. ಪಾಲಿಕೆ ಶೀಘ್ರವೇ ಪರಿಶೀಲಿಸಿ ಕ್ರಮ ವಹಿಸಬೇಕು ಎಂದು ಸ್ಥಳೀಯ ವ್ಯಾಪಾರಿಗಳು ಆಗ್ರಹಿಸಿದ್ದಾರೆ.

ಆಧುನಿಕ ಮೈಸೂರು ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ಅಪಾರ. ಅದಕ್ಕಾಗಿಯೇ ಅವರನ್ನು 'ನಾಡು ಕಟ್ಟಿದ ನಾಲ್ವಡಿ' ಎಂದು ಅಭಿಮಾನದಿಂದ ಕರೆಯಲಾಗುತ್ತದೆ. ಅಂತಹ ಮಹಾನುಭಾವರ ಸ್ಮರಣೆಗಾಗಿ ಮೈಸೂರು ನಗರದ ಹೃದಯ ಭಾಗದಲ್ಲಿ ಅವರ ಪ್ರತಿಮೆ ಸ್ಥಾಪಿಸಲಾಗಿದೆ. ನಾಲ್ವಡಿಯವರ ಪ್ರತಿಮೆ ಒಳಗೊಂಡ ವೃತ್ತಕ್ಕೆ ಕೆಆರ್ ಸರ್ಕಲ್ ಎಂದೇ ನಾಮಕರಣ ಮಾಡಲಾಗಿದೆ

ನಾಲ್ವಡಿಯವರ ಅಮೃತಶಿಲೆಯ ಪ್ರತಿಮೆಯನ್ನು ಈ ವೃತ್ತದಲ್ಲಿ 1952ರ ಅಕ್ಟೋಬರ್ 16ರಂದು ಸರ್ ಎಂ.ವಿಶ್ವೇಶ್ವರಯ್ಯ ಅನಾವರಣಗೊಳಿಸಿದ್ದರು. ಇಂತಹ ಐತಿಹಾಸಿಕ ಮಹತ್ವ ಹೊಂದಿರುವ ನಾಲ್ವಡಿಯವರ ಹೆಸರಿನ ವೃತ್ತವನ್ನು ನಗರಪಾಲಿಕೆ ಅತ್ಯಂತ ಕಾಳಜಿಯಿಂದ ನಿರ್ವಹಿಸುವುದು ಅತ್ಯಗತ್ಯವಾಗಿದೆ.



ಗೋಪುರದಲ್ಲಿ ವಿನ್ಯಾಸದ ಲೋಹದ ತಗಡು ಅರ್ಧಕ್ಕೆ ತುಂಡಾಗಿರುವುದು.

ನಕ್ಕರೆ ಅದೇ ಸ್ವರ್ಗ

ಮಗ : ಅಪ್ಪಾ ಮದುವೆ ಆದರೆ ಎಷ್ಟು ಖರ್ಚಾಗುತ್ತೆ?
ತಂದೆ : ಗೊತ್ತಿಲ್ಲ, ನಾನಂತೂ ಇನ್ನೂ ಖರ್ಚು ಮಾಡ್ತಾನೆ ಇದೀನಿ...

ಮೈಸೂರು ಮಿತ್ರ

ಮಂಗಳವಾರ, 25 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ನಗುವ ಹೃದಯಕ್ಕಿಂತ ನಗಿಸುವ ಹೃದಯ ಮುಖ್ಯ
ದುಃಖ ಪಡುವ ಮನಸ್ಸಿಗಿಂತ ದುಃಖ ಮರೆಸುವ
ಮನಸ್ಸು ಮುಖ್ಯ –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು.

ನಿಮ್ಮ ಪತ್ರಗಳು

ಮೈಸೂರು ನಗರ ಸಾರಿಗೆ ಬಸ್ಸುಗಳ ಸಮಸ್ಯೆ ಬಗೆಹರಿಸಿ

ಮಾನ್ಯರೆ,

ನಾನು ನಗರ ಸಾರಿಗೆ ಬಸ್ಸಿನ ನಿತ್ಯ ಪ್ರಯಾಣಿಕನಾಗಿರುತ್ತೇನೆ. ನಗರ ಸಾರಿಗೆ ಬಸ್ಸುಗಳ ಸಮಸ್ಯೆಯಿಂದಾಗಿ ಪ್ರಯಾಣಿಕರಿಗೆ ತಮ್ಮ ಕಾರ್ಯಸ್ಥಳಗಳಿಗೆ ತಲುಪಲು ಪ್ರತಿನಿತ್ಯ ವಿಳಂಬವಾಗುತ್ತಿದೆ. ಮೈಸೂರು ನಗರದ ಜೆ.ಪಿ. ನಗರದಲ್ಲಿ ಮತ್ತು ಇತರ ಕಡೆಗಳಲ್ಲಿ ಬೆಳಗ್ಗೆ 8.30 ರಿಂದ 9.30 ರವರೆಗೆ ಬಸ್ಸುಗಳ ಅಭಾವವಿರುತ್ತದೆ. ಶಾಲಾ ಕಾಲೇಜು ವಿದ್ಯಾರ್ಥಿಗಳು ಮತ್ತು ನೌಕರರಿಗೆ ಪ್ರತಿದಿನವೂ ಬಹಳ ತೊಂದರೆಯಾಗುತ್ತಿದೆ. ಬಹಳಷ್ಟು ಬಸ್ಸುಗಳು ಹಿಂದಿನ ನಿಲ್ದಾಣದಲ್ಲಿ ಭರ್ತಿಯಾಗಿ ಬರುವ ಕಾರಣ ಗೊಬ್ಬಳಿಮರ ತಂಗುದಾಣದಲ್ಲಿ ನಿಲುಗಡೆ ನೀಡುವುದಿಲ್ಲ. ಇದರಿಂದಾಗಿ ಬಸ್ ಹತ್ತಲು ಪ್ರಯಾಣಿಕರು ಬಸ್ಸಿನ ಹಿಂದೆ ಓಡಬೇಕಾಗಿದ್ದು, ಇದರಿಂದ ಅನಾಹುತಗಳು ಸಂಭವಿಸುವ ಸಾಧ್ಯತೆಗಳಿವೆ.

ಕೊರೊನಾದಿಂದಾಗಿ ನಾಲ್ಕು ವರ್ಷಗಳ ಹಿಂದೆ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದ ಕುವೆಂಪುನಗರ ಘಟಕಕ್ಕೆ ಸೇರಿದ ಮಾರ್ಗಸಂಖ್ಯೆ 10ಎ, 11ಆರ್, 11 ಆರ್‌ಜಿ, 62 ಆರ್‌ಜಿ, 72 ಮತ್ತು 135, 15 ಬಸ್ಸುಗಳು ಈಗ ಕಾರ್ಯಾಚರಣೆಗೊಳ್ಳುತ್ತಿಲ್ಲ. ಮೈಸೂರು ನಗರದಲ್ಲಿ ನಗರ ಸಾರಿಗೆ ಬಸ್ಸುಗಳನ್ನು ತಮ್ಮ ದೈನಂದಿನ ಚಟುವಟಿಕೆಗಳಿಗಾಗಿ ನಂಬಿಕೊಂಡಿರುವ ಬಹಳಷ್ಟು ಸಂಖ್ಯೆಯ ಪ್ರಯಾಣಿಕರು ಮತ್ತು ಮಾಸಿಕ ಬಸ್ ಪಾಸ್ ಹೊಂದಿರುವವರು ಇದ್ದಾರೆ. ನಿಗದಿತ ಸಮಯಕ್ಕೆ ಬಸ್ಸುಗಳು ಬರದಿದ್ದಾಗ ಪ್ರಯಾಣಿಕರು ಅನಿವಾರ್ಯವಾಗಿ ದುಬಾರಿ ಹಣ ತೆತ್ತು ಆಟೋದಲ್ಲಿ ತಮ್ಮ ಕಾರ್ಯಸ್ಥಳಗಳಿಗೆ ತಲುಪಬೇಕಾಗಿದೆ. ಶಾಲಾ ಕಾಲೇಜುಗಳು ಪ್ರಾರಂಭಗೊಂಡಿದ್ದು, ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತದೆ.

ಸಮಸ್ಯೆ ಗಂಭೀರವಾಗಿರುವುದರಿಂದ ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ಇತ್ತ ಗಮನಹರಿಸಿ ಆದಷ್ಟು ಶೀಘ್ರ ಸ್ಥಗಿತವಾಗಿರುವ ಎಲ್ಲಾ ನಗರ ಸಾರಿಗೆ ಬಸ್ಸುಗಳನ್ನು ಕೂಡಲೇ ಮರು ಕಾರ್ಯಾಚರಣೆಗೊಳಿಸಬೇಕು. ಬಸ್ಸುಗಳ ಆಗಮನದ ಬಗ್ಗೆ ಮಾಹಿತಿ ನೀಡುವ ಐಟಿಎಸ್ ಫಲಕವನ್ನು ಮರುಚಾಲನೆಗೊಳಿಸಬೇಕು. ಮತ್ತು ಸಂಖ್ಯೆ 161ಕ್ಕೆ ನಿಲ್ದಾಣದ ಕೋಡ್ ಅನ್ನು ಎಸ್‌ಎಂಎಸ್ ಮಾಡುವ ಮೂಲಕ ಪ್ರಯಾಣಿಕರು ಬಸ್ಸುಗಳ ಆಗಮನದ ಬಗ್ಗೆ ಮಾಹಿತಿ ಪಡೆದುಕೊಳ್ಳುವ ವ್ಯವಸ್ಥೆಯನ್ನು ಮರು ಜಾರಿಗೊಳಿಸಬೇಕು ಎಂದು ಕಳಕಳಿಯ ಮನವಿ.

– ಪರಶಿವಮೂರ್ತಿ, ಜೆ.ಪಿ.ನಗರ, ಮೈಸೂರು.

ನಳಂದ ವೈಭವ ಮರುಕಳಿಸಲಿ

ಮಾನ್ಯರೆ,

ನಳಂದ ಪ್ರಾಂತ್ಯವು ಭಾರತದ ಬಿಹಾರದ ರಾಜಧಾನಿಯಾದ ಪಾಟ್ನಾದ ಆಗ್ನೇಯ ಭಾಗದಲ್ಲಿ ಸುಮಾರು 55 ಮೈಲು ದೂರದಲ್ಲಿದೆ ಮತ್ತು ಇಲ್ಲಿ ಪ್ರಖ್ಯಾತ ನಳಂದ ವಿಶ್ವದ್ಯಾನಿಲಯವು ಕ್ರಿ.ಶ. 427 ರಿಂದ 1197 ವರೆಗೆ ವಿಶ್ವದ ಪ್ರಮುಖ ವಿದ್ಯಾ ಕೇಂದ್ರವಾಗಿತ್ತು. ಇದು ಇತಿಹಾಸದಲ್ಲಿ ನಮೂದಿತವಾದ ಮೊದಲ ಅತೀ ಶ್ರೇಷ್ಠವಾದ ವಿಶ್ವವಿದ್ಯಾನಿಲಯ ಎಂದು ಕರೆಯಲ್ಪಟ್ಟಿದೆ.

ನಳಂದ ವಿಶ್ವವಿದ್ಯಾಲಯವು ಉತ್ತುಂಗ ಸ್ಥಿತಿಯಲ್ಲಿದ್ದಾಗ ಸುಮಾರು 10,000 ವಿದ್ಯಾರ್ಥಿಗಳನ್ನು ಮತ್ತು 2,000 ಅಧ್ಯಾಪಕರನ್ನು ಒಳಗೊಂಡಿತ್ತು. 90 ಲಕ್ಷಕ್ಕೂ ಹೆಚ್ಚು ಅಮೂಲ್ಯ ಹಸ್ತಪ್ರತಿಗಳನ್ನು ಹೊಂದಿತ್ತು ಎಂದು ಇತಿಹಾಸದಲ್ಲಿ ದಾಖಲಾಗಿದೆ.1193ರಲ್ಲಿ ನಳಂದ ವಿಶ್ವವಿದ್ಯಾನಿಲಯವು ಬಖ್ತಿಯಾರ್ ಖಿಲ್ಜಿಯ ದಾಳಿಯಿಂದ ಸಂಪೂರ್ಣವಾಗಿ ನಾಶವಾಯಿತು.

ಪ್ರಸ್ತುತ ಬಿಹಾರದ ರಾಜ್‌ಗೀರ್‌ನಲ್ಲಿ ಹೊಸದಾಗಿ 17 ರಾಷ್ಟ್ರಗಳ ಸಹಭಾಗಿತ್ವದಲ್ಲಿ 455 ಎಕರೆ ಸ್ಥಳದಲ್ಲಿ 1749 ಕೋಟಿ ರೂ ವೆಚ್ಚದಲ್ಲಿ 40 ತರಗತಿ ಕೊಠಡಿಗಳೊಂದಿಗೆ ಎರಡು ಶೈಕ್ಷಣಿಕ ಬ್ಲಾಕ್‌ಗಳು ಸೇರಿ ಒಟ್ಟು 1,900 ಆಸನ ಸಾಮರ್ಥ್ಯವಿರುವ ಮತ್ತು ತಲಾ 300 ಆಸನಗಳ ಸಾಮರ್ಥ್ಯದ 2 ಸಭಾಂಗಣಗಳನ್ನು ಹೊಂದಿದ್ದು, ಸುಮಾರು 550 ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಹೊಂದಿರುವ ಹಾಸ್ಟೆಲ್ ಸಹ ಹೊಂದಿರುವ ನೂತನ ನಳಂದ ವಿಶ್ವವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಕೇಂದ್ರ 2000 ವ್ಯಕ್ತಿಗಳಿಗೆ ಅವಕಾಶ ಕಲ್ಪಿಸುವ ಆ್ಯಂಪಿ ಥಿಯೇಟರ್, ಅಧ್ಯಾಪಕರ ಕ್ಲಬ್ ಮತ್ತು ಕ್ರೀಡಾ ಸಂಕೀರ್ಣ ಸೇರಿದಂತೆ ಹಲವಾರು ಇತರ ಸೌಲಭ್ಯಗಳನ್ನು ಹೊಂದಿದೆ.

ಜೊತೆಗೆ ಸೌರ ಸ್ಥಾವರ, ನೀರಿನ ಸಂಸ್ಕರಣಾ ಘಟಕಗಳು, ತ್ಯಾಜ್ಯ ನೀರು ಮರುಬಳಕೆ ಘಟಕ, 100 ಎಕರೆ ಜಲಮೂಲವನ್ನೂ ಹೊಂದಿರುವ ನಳಂದ ವಿಶ್ವವಿದ್ಯಾಲಯ ಮತ್ತೊಮ್ಮೆ ಜಗತ್ತಿನಲ್ಲಿ ತನ್ನ ಛಾಪು ಮೂಡಿಸಲೆಂದು ಆಶಿಸೋಣ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು,

ಆಗ ನೀಟ್; ಈಗ ನೆಟ್ ಪರೀಕ್ಷೆಗಳಲ್ಲಿ ಅಕ್ರಮ ಕರ್ಮಕಾಂಡ

ಮಾನ್ಯರೆ,

ಪರೀಕ್ಷೆಗಳನ್ನು ನಡೆಸುವವರನ್ನು ಪರೀಕ್ಷೆಗೆ ಒಳಗು ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಏಕೆ ಈ ಮಾತನ್ನು ಮೊದಲಿಗೆ ಇಲ್ಲಿ ಉಲ್ಲೇಖಿಸುತ್ತಿದ್ದೇನೆ ಎಂದರೆ ಪ್ರಸ್ತುತ ಸಾಲಿನಲ್ಲಿ ನಡೆಸಲಾದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್)ಯ ಬಗ್ಗೆ ದೇಶವ್ಯಾಪಿಯಾಗಿ ಕೇಳಿ ಬಂದ ಕೂಗು ಹಗರಣದ ಅವತಾರ ರೂಪತಾಳಿರುವುದು. ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ನೀಡಲು ನಡೆಸುವ ಈ ನೀಟ್ ಪರೀಕ್ಷೆಯಲ್ಲಿ ಸಾಕಷ್ಟು ಅಕ್ರಮಗಳು ನಡೆದಿರುವುದು ಬೆಳಕಿಗೆ ಬಂದು, ಪ್ರಾಮಾಣಿಕ ವಿದ್ಯಾರ್ಥಿಗಳಲ್ಲಿ ಆತಂಕದ ಬೆಳವಣಿಗೆಗೆ ಕಾರಣವಾಗಿತ್ತು. ಸಿಟ್ಟುಗೊಂಡ ಕೆಲವು ವಿದ್ಯಾರ್ಥಿಗಳು ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕೆಂದು ಬಯಸಿದ್ದು ಒಂದು ಕಡೆಯಾದರೆ ಕೃಪಾಂಕ ನೀಡುವ ಆಶಾಗೋಪುರವು ಮತ್ತೊಂದು ಕಡೆ ಎದುರಾಯಿತು. ಸುಪ್ರೀಂಕೋರ್ಟ್ ಸದರಿ ಪರೀಕ್ಷೆಯ ವಿಚಾರವಾಗಿ ತನಿಖೆ ನಡೆಸಿ ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರದ ದುರ್ಬಲತೆಯನ್ನು ಎತ್ತಿ ಹಿಡಿದು ಪರೀಕ್ಷೆಯನ್ನು ರದ್ದು ಮಾಡಿದ ಬೆನ್ನಲ್ಲೆ ಈಗ ಮತ್ತೊಂದು ಆಕ್ರೋಶದ ವಿಚಾರವು ಭುಗಿಲೆದ್ದಿದೆ. ಅದೇನೆಂದರೆ ಯುಜಿಸಿ ನೆಟ್ ಪರೀಕ್ಷೆಯಲ್ಲೂ ಅಕ್ರಮವಾಗಿರುವ ಸಂಗತಿಯು ಹೆಡೆ ಎತ್ತಿ ನಿಂತಿದೆ. ಈಗ ಅಕ್ರಮದ ವಿಚಾರ ಸದ್ದು ಮಾಡಿದಾಗ ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರವು ನೆಟ್ ಪರೀಕ್ಷೆಯನ್ನು ರದ್ದುಪಡಿಸಲಾಗದು ಎಂದು ಮಾರನೇ ದಿನವೇ ಹೇಳಿಕೆಯನ್ನು ನೀಡಿದೆ. ಒಂದು ವಿಚಾರ–ಸಂಗತಿ ಇಲ್ಲಿ ಸ್ಪಷ್ಟವಾಗಬೇಕಿದೆ. ಅದೇನೆಂದರೆ ಅತಿ ಜಾಗರೂಕತೆಯಿಂದ–ಜವಾಬ್ದಾರಿಯುತವಾಗಿ ಅದರಲ್ಲೂ ಗೌಪ್ಯತೆಯಲ್ಲಿ ನಡೆಯಬೇಕಾಗಿರುವ ಇಂತಹ ಪರೀಕ್ಷೆಗಳಲ್ಲಿಯೇ ಹಗರಣಗಳು– ಅಕ್ರಮಗಳು ಮುಖಭಂಗಕ್ಕೆ ಕಾರಣವಾಗಿ ಭಾರಿ ಭರವಸೆಯಲ್ಲಿ ಅತೀ ಅಮೂಲ್ಯವಾದ ಸಮಯವನ್ನು ವ್ಯಯ ಮಾಡಿ ಅಭ್ಯಾಸದಲ್ಲಿ ನಿರತವಾದ ಓದುಗರ, ಬಕ ಪಕ್ಷಿಗಳಾಗಿ ಕಾದು ತಪಸ್ಸಿನ ಬಗೆಯಲ್ಲಿ ಯಾವುದೋ ವೃತ್ತಿಗಾಗಿಯೋ ಅಥವಾ ಮುಂದಿನ ಶಿಕ್ಷಣಕ್ಕಾಗಿಯೋ ಕಠಿಣ ಮನಸ್ಥಿತಿಯಿಂದ ಅಧ್ಯಯನ ಮಾಡುತ್ತಿರುವ ಸಭ್ಯ ಪರೀಕ್ಷಾರ್ಥಿಗಳ ಕತೆ ಏನಾಗಬೇಕಿದೆ. ಈ ಬಗ್ಗೆ ಇನ್ನು ಮುಂದಾದರೂ ಯಾವುದೇ ಇಲಾಖೆಯು ಸ್ಪರ್ಧಾ ಪರೀಕ್ಷೆಯನ್ನು ಅತ್ಯಂತ ಪ್ರಾಮಾಣಿಕವಾಗಿ, ನಿಷ್ಠೆಯಿಂದ, ಹೊಣೆಗಾರಿಕೆಯಿಂದ ನಡೆಸಬೇಕಿದೆ. ಅಲ್ಲದೆ ಅಕ್ರಮಗಳಿಗೆ ಕಾರಣೀಭೂತರಾದವರಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕಾಗಿ ಕಳಕಳಿಯ ಮನವಿ.

–ಪರಮೇಶ ಕೆ.ಉತ್ತನಹಳ್ಳಿ, ಕನ್ನಡ ಉಪನ್ಯಾಸಕ, ಮೈಸೂರು.



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಕೆಂಗಲ್‌ರ ಆ ಮಾತಿಗೆ ಮುಗಿಲು ಮುಟ್ಟಿದ್ದ ದಿಗಿಲು...!

ಯು.ಆರ್.ಅನಂತಮೂರ್ತಿ ಅವರ ಮಾತು ಸೋತ ಭಾರತ ಓದುತ್ತಿದೆ. ಮಾತು ಯಾವತ್ತೂ ಸೋಲಬಾರದು. ಆದರೆ ಇವತ್ತು ಜಗದಗಲದ ತುಂಬಾ ಮಾತಿನದೇ ಗಮ್ಮತ್ತು. ಮಾತೇ ಮುತ್ತು ಮಾತೇ ಮೃತ್ಯು ಎಂಬ ಗಾದೆ ಮಾತೊಂದಿದೆ. 'ಮಾತೆಂಬುದು ಜ್ಯೋತಿರ್ಲಿಂಗ'– ಎಂಬ ಶರಣರ ನುಡಿಮುತ್ತು ನಮಗೆ ಗೊತ್ತಿದೆ. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ ಎಂಬ ಜನಪದರ ನಾಣ್ಣುಡಿಯೂ ಚಾಲ್ತಿಯಲ್ಲಿದೆ. ಇಂದಿನ ಕಾರ್ಪೋರೇಟ್ ಯುಗದಲ್ಲಿ ಬೆಂಗಳೂರಿನಂಥಾ ಮಹಾನಗರದಲ್ಲಿ ವಾಕಿಂಗ್ ಮಾಡುವಾಗಲೂ ಕನ್ನಡ ಮಾತಾಡದ ಜನ ಕನ್ನಡದ ಉಕ್ತಿಗಳು, ನಾಣ್ಣುಡಿಗಳು, ಶರಣರ ಮಾತುಗಳ ಹೃದಯ ಶ್ರೀಮಂತಿಕೆಯನ್ನು, ವಾಸ್ತವದ ಬದುಕಿಗೆ ಬೇಕಾದ ಬಾಳ್ವೆಯ ಬೆಳಕನ್ನು, ತಮ್ಮ ನಾಲಿಗೆಯ ತುದಿಯಲ್ಲಿ ಉಚ್ಚರಿಸಲು ಸಾಧ್ಯವೇ?


ಇವತ್ತಿನ ಜಗತ್ತು ಬದುಕಿಗೆ ಬೇಕಾದ ಸಾಮರಸ್ಯದ ಹೊಂದಾಣಿಕೆಗಿಂತ ಸಂಘರ್ಷಕ್ಕೆ ಬೇಕಾದ ಮಾತಿನ ಕತ್ತಿವರಸೆಗೆ ನಿಂತುಬಿಟ್ಟಿದೆ. ನಾವೆಲ್ಲಾ ಈ ಮಾತಿನ ಅತಿರೇಕಗಳ ಅಪಸವ್ಯಕ್ಕೆ ಬಿದ್ದು ಮೊಬೈಲ್ ವೀರರಾಗಿ ಜಾಗತಿಕ ಮಟ್ಟದಲ್ಲಿ ನಮ್ಮ ಮೆಸೇಜು, ವಾಟ್ಸಾಪು ಇನ್‌ಸ್ಟಾಗ್ರಾಮಿನಲ್ಲಿ ವಾಂತಿ ಮಾಡಿಕೊಳ್ಳುತ್ತಿದ್ದೇವೆ. ನಿಮ್ಮ ಮಾತು ಸೋಲಬಾರದೆಂದರೆ ಎಂಥ ಕಹಿ ಸತ್ಯವನ್ನೂ ನಾವು ಎದುರಿಗಿದ್ದವರಿಗೆ ಜೀರ್ಣವಾಗುವ ಭಾಷೆಯಲ್ಲಿಯೇ ಹೇಳಬೇಕು. 'ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್, ನ ಬ್ರೂಯಾತ್ ಸತ್ಯಮಪ್ರಿಯಂ!"– ಎನ್ನುವ ಮಾತನ್ನು ಪಾಲಿಸದಿದ್ದರೂ ಪರವಾಗಿಲ್ಲ, ಅಂದರೆ ಎದುರಿಗಿದ್ದವರಿಗೆ ಪ್ರಿಯವಾಗುವ ಹಾಗೆ ಸತ್ಯವನ್ನು ಹೇಳಬೇಕು ಎನ್ನುವ ಸಂಸ್ಕೃತದ ಈ ಸುಭಾಷಿತದ ಕಾಲ ಮುಗಿದೇ ಹೋಯ್ತು ಎನ್ನುವಷ್ಟರ ಮಟ್ಟಿಗೆ ಮಾತಿನ ಬಾಣ ಪ್ರಯೋಗಗಳು ನಡೆಯುತ್ತಿವೆ.

ಅದರಲ್ಲೂ ಮನುಷ್ಯ ಜಗತ್ತು ತನ್ನನ್ನು ತಾನು ಗ್ಯಾಜೆಟ್ಟುಗಳ ಸುಪರ್ದಿಗೆ ಬಿಟ್ಟುಕೊಂಡಿದೆ. ಅಲ್ಲಿ ಕೋಟ್ಯಾಂತರ ಜನರಿಗೆ ಜಾಲತಾಣಗಳಲ್ಲಿ ಮಾತನಾಡುವ ಅವಕಾಶವಿದೆ. ಒಂದು ಮನೆಯಲ್ಲಿ ಐದು ಜನ ಸದಸ್ಯರಿದ್ದರೆ ಐದೂ ಜನರ ಭಾವನೆಗಳೂ ಬೇರೆ ತೆರನಾಗಿಯೇ ಇರುತ್ತವೆ ಅಂದಮೇಲೆ ಸಾಮಾಜಿಕ ಜಾಲತಾಣಗಳು ಕೋಟ್ಯಾಂತರ ಜನ ಭಾಗವಹಿಸುವ, ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಜನದನಿಯ ವೇದಿಕೆಯಾಗಿ ರೂಪುಗೊಂಡಿದೆ. ಇಲ್ಲಿನ ಮಾತು ನಮ್ಮ ದೇಶದ ಸ್ಲೋಗನ್ನಾದ unity in diversity ವಿವಿಧತೆಯಲ್ಲಿ ಏಕತೆ ಎನ್ನುವ ಹಾಗೆ ಮಾತಿನ ವೇಗ ಇದ್ದರೆ ಭಾರತ ಭಾವನಾತ್ಮಕವಾಗಿ ಕೂಡ ಒಂದಾಗುತ್ತದೆ.

ವಿವಿಧತೆಯಲ್ಲಿ ಏಕತೆಯಷ್ಟೇ ಅಲ್ಲ ಭಾವೈಕ್ಯತೆ ಕೂಡ ಸೃಷ್ಟಿಯಾಗುತ್ತದೆ. ಆದರೆ ಡಿಜಿಟಲ್ ಇಂಡಿಯಾದ ಸಾಮಾಜಿಕ ಜಾಲತಾಣಗಳಲ್ಲಿ ಮಾತು ಸೋಲುತ್ತಿದೆ. ಒಬ್ಬರ ಸಂದೇಶ ಮತ್ತೊಬ್ಬರಿಗೆ ಕೇಳಿಸಿ ಸುಮ್ಮನಾಗಿದ್ದರೆ ಸರಿಯಿತ್ತು. ಆದರೆ ಕೇಳಿಸುವ ಬದಲಿಗೆ ಕೆರಳಿಸುವ ಸಂದೇಶಗಳೇ ತುಂಬಿ ಹೋಗಿ ಸಾಮಾಜಿಕ ಜಾಲತಾಣಗಳು ಜಗಳತಾಣಗಳಾಗಿ ಮಾರ್ಪಾಡಾಗಿವೆ. ಇವತ್ತಿನ ಚಿತ್ರದುರ್ಗದ ರೇಣುಕಾ ಸ್ವಾಮಿ ಮರ್ಡರ್ ಕೇಸು ಇಂಥದೇ ಬೇಡದ ಉಸಾಬರಿಯೊಂದಕ್ಕೆ ಪ್ರತಿಕ್ರಿಯೆ ಕೊಡಲು ಹೋಗಿ ಎಲ್ಲರ ಬದುಕು ಸುಟ್ಟು ಕರಕಲಾಗಿ ಹೋಗಿದೆ. ಮಾತು ಕೆರಳಿಸುವ ಹಂತಕ್ಕೆ ಹೋಗುತ್ತಿದೆ ಎನ್ನುವಾಗ ಸ್ವಯಂಪ್ರಭೆಯ ಬೆಳಕಲ್ಲಿ ನಮಗೆ ತಾಳ್ಮೆ ಜೊತೆಯಾಗಬೇಕು. ಇಲ್ಲದಿದ್ದರೆ ಸಂಸ್ಕಾರ ನಮ್ಮ ಹಿನ್ನೆಲೆಗಿರಬೇಕು.



ಕೆಂಗಲ್ ಹನುಮಂತಯ್ಯ



ಹೆಚ್.ಕೆ.ವೀರಣ್ಣಗೌಡರು

ಆಡಿದ ಮಾತು ಹೇಗಿರಬೇಕು ಎನ್ನುವುದಕ್ಕೆ ನಮ್ಮ ಹಿರಿಯರು ಹೆಜ್ಜೆಗೊಂದು ನಾಣ್ಣುಡಿ ಕಟ್ಟಿ ಹೋಗಿದ್ದಾರೆ. ಮಲ್ಲಿಗೆಯ ಮಾಲೆಯಂತೆ ಅವುಗಳನ್ನು ಓದಿ, ಬದುಕಿನ ನಿತ್ಯ ಜೀವನಕ್ಕೆ ಅಳವಡಿಸಿಕೊಂಡರೆ, 'ಮಾತೇ ಮುತ್ತು, ಮಾತೇ ಮೃತ್ಯು'– ಇಲ್ಲಿ ಮುತ್ತಾಗಬೇಕಿದ್ದ ಮಾತು ಮೃತ್ಯುವಾಗಿ ಪರಿಣಮಿಸಿ ಎಲ್ಲರೂ ಯು.ಆರ್. ಅನಂತಮೂರ್ತಿಯವರ ಪುಸ್ತಕದ ಟೈಟಲ್ಲಿನಂತೆ 'ಮಾತು ಸೋತ ಭಾರತ'–ದ ಮೂಕ ಪ್ರಜೆಗಳಂತೆ ಅಧ್ವಾನವಾಗಿ ಹೋಗಿದ್ದಾರೆ.

ಇದರ ಮೂಲ ಇರೋದೇ ಆವೇಶದ ದನಿಯಲ್ಲಿ. ಪರಸ್ಪರ ಒಬ್ಬರಿಗೊಬ್ಬರು ಮಾತಿನ ಅಳತೆ ಮೀರಿ ಮಾತಾಡಿರೋದು. ಆವೇಶದ ಜಾಗದಲ್ಲಿ ಕೋಪ ಖಡ್ಗ ಝಳಪಿಸಿಕೊಂಡು, ಆ ಕೋಪದ ಕೈಗೆ ವಿವೇಕ ಕೊಟ್ಟಿದ್ದು ಕಡೆಗೆ ಅಳಿದ ಮೇಲೆ ಉಳಿದುದೇನು ಎಂಬ ಲೆಕ್ಕಾಚಾರದ ಚೌಕಾಬಾರಕ್ಕೆ ಕೈ ಹಾಕಿದರೆ ಫಲಿತಾಂಶ ಮಾತ್ರ ಶೂನ್ಯ ಸಂಪಾದನೆ, ಹೆತ್ತವರ ರೋದನೆ, ಉಳಿದವರ ಆತ್ಮಶೋಧನೆ, ನಿರಂತರ ನಿಂದನೆ, ನೋವು, ದುಃಖ–ದುಮ್ಮಾನ ಇವಿಷ್ಟೆ!

ಗ್ಯಾಜೆಟ್ಟುಗಳ ಲೋಕದಲ್ಲಿ ಸದಾ ಬಿಜಿಯಾಗಿರುವವರು ನಿಮ್ಮ ಮನದೊಂದಿಗೆ ಮಾತುಕತೆ ನಡೆಸಿ ಒಂದು ಅಗ್ರಿಮೆಂಟಿಗೆ ಬನ್ನಿ, ಒಂದು ಅನ್ಯಾಯವನ್ನ, ಅಕ್ರಮವನ್ನ ಅಥವಾ ಮತ್ತ್ಯಾರೋ ಮಾಡಿರುವ ತಪ್ಪನ್ನ ಕಂಡಕೂಡಲೇ ಸಿಡಿದೇಳುವ ಗುಣ ನಿಮ್ಮಲ್ಲಿದ್ದರೆ, ಸಿಡಿಮಿಡಿಗೊಳ್ಳುವ ಮನಃಸ್ಥಿತಿಯವರು ನೀವಾಗಿದ್ದರೆ ಆ ತಪ್ಪನ್ನು ವಿರೋಧಿಸುವ ಅಥವಾ ಸಮರ್ಥಿಸುವ ಸಾಹಸಕ್ಕೆ ಕೈ ಹಾಕಬೇಡಿ. ವಿನಾಕಾರಣ ಎದುರಿಗಿದ್ದವರನ್ನ ಮಾತಿನಲ್ಲಿ ಸೋಲಿಸಲು ಹೋಗಿ ನಾನಾ ತಂತ್ರಗಳನ್ನು ಎದುರಿಗಿರುವವರನ್ನ ಕೆರಳಿಸುವ ಶಬ್ದ ಚಮತ್ಕಾರವನ್ನ ಬಳಸಲೇಬೇಡಿ. ನಿಮ್ಮ ಪ್ರಜ್ಞೆ, ಸಂಯಮ, ತಾಳ್ಮೆ ಸ್ಥಿಮಿತತೆಯನ್ನ ಕಳೆದುಕೊಳ್ಳಲೇಬೇಡಿ. ಅದರಲ್ಲೂ ಚಿತ್ರನಟರು, ರಾಜಕಾರಣಿಗಳು, ಪತ್ರಕರ್ತರು, ಸ್ವಾಮೀಜಿಗಳು ಮುಂತಾದವರ ಪರವಹಿಸಿ ವಾದಕ್ಕೆ ನಿಲ್ಲಬೇಡಿ. ಅವರ ಬಗ್ಗೆ ನಿಮಗೆ ಮೆಚ್ಚುಗೆ ಮಾತ್ರವಿರಲಿ, ಅಭಿಮಾನ ನಿಮ್ಮ ಮನದಲ್ಲಿರಲಿ, ಮಾತಿನಲ್ಲಿ ಮಾತ್ರ ಅತಿರೇಕದ ಅಂಶ ಬಾರದಿರಲಿ. ಜಗತ್ತಿನಲ್ಲಿ ಇರುವ ಜನಸಂಖ್ಯೆಯಷ್ಟೇ ವಾದ ವಿವಾದಗಳಿವೆ. ನಮ್ಮ ಬದುಕೇ ದುಸ್ತರವಾಗಿದೆ, ಯಾರದೋ ಪರವಾಗಿ ಕತ್ತಿ ಗುರಾಣಿ ಹಿಡಿದು ಉಗ್ರಾಭಿಮಾನಿಯಾಗಲು ಹೋಗಿ ಆವೇಶಕ್ಕೆ ಬಿದ್ದು ನಮ್ಮನ್ನೇ ನಂಬಿದ ಕುಟುಂಬ ವರ್ಗವನ್ನು ಆತಂಕಕ್ಕೀಡು ಮಾಡುವುದು ಬೇಡ. ಕಾನೂನಿನ ಶಿಕ್ಷೆ, ಕಠಿಣ ಕ್ರಮ, ಇತ್ಯಾದಿಗಳಿಂದ ಮನಸ್ಸಿಗೆ ಸಮಾಧಾನವಾಗಬಹುದೇ ವಿನಃ ಹೋದ ಜೀವ ಬರುವುದಿಲ್ಲ. ದ.ರಾ. ಬೇಂದ್ರೆಯವರ ಸಾಲೊಂದಿದೆ;

ಜಾಣ ಜಾಣ ಗುದ್ದಾಡಿದ್ರ
ಲೋಕಕ್ಕೊಳ್ಳೇದಾಗ್ತೈತಿ
ಕೋಣ ಕೋಣ ಗುದ್ದಾಡಿದ್ರ
ಲೋಕಕ್ಕಜ ಸಿಕ್ತೈತಿ
ಜಾಣ ಮತ್ತ ಕೋಣ ಗುದ್ದಾಡಿದ್ರ
ಲೋಕಂತ್ತೈತಿ
ಇಂವ ಯಾಕಲೇ ಅಲ್ಲೋದ ಅಂತ!

–ಹೀಗೆ ಸಾಮಾಜಿಕ ಜಾಲತಾಣಗಳಲ್ಲಿ ಒಬ್ಬರ ಮಾತಿಂದ ಇನ್ನೊಬ್ಬರು ಏನನ್ನಾದರೂ ಕಲಿಯುವಂತಿದ್ದರೆ ಅವರೊಂದಿಗೆ ವಾದಕ್ಕೆ ನಿಲ್ಲಿ, ನಮ್ಮಿಂದ ಅವರೇನಾದರೂ ಕಲಿಯುವಂತಿದ್ದರೆ ನಿಮ್ಮ ಮಾತನ್ನು ಹಂಚಿಕೊಳ್ಳಿ, ವಿತಂಡ ವಾದ ಶುರುವಾಗುತ್ತಿದ್ದಂತೆ ತಕ್ಷಣ ಮಾತು ನಿಲ್ಲಿಸಿ; ಇದರಿಂದ ನಮಗೇನು ನಷ್ಟವಾಗುವುದಿಲ್ಲ.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ
ದೀಪ್ತಿಯಂತಿರಬೇಕು!
ನುಡಿದರೆ ಸ್ಫಟಿಕದ
ಸಲಾಕೆಯಂತಿರಬೇಕು
ನುಡಿದರೆ ಲಿಂಗಮೆಚ್ಚಿ
ಅಹುದಹುದೆನ್ನಬೇಕು!
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮದೇವನೆಂತೊಲಿವನಯ್ಯಾ!

–ಎನ್ನುವ ಮಾತಿನ ಬಗೆಗೆ ಬಸವಣ್ಣನವರು ಬರೆದ ವಚನದ ಕಾಲದಲ್ಲಿ ನಾವಿಲ್ಲ. ಆದರೆ ಅಣ್ಣನ ವಚನದ ತೀರ್ಪು ಏನು ಗೊತ್ತ !

ಎಲ್ಲರ ಮಾತು ಮುತ್ತಾಗಲ್ಲ ಎಲ್ಲ ನಕ್ಷತ್ರಗಳೂ ಧ್ರುವತಾರೆಗಳಲ್ಲ ನಾವು ಮಾತ್ರ ಈ ಮರ್ತ್ಯ ಲೋಕವೆಂಬ ಕರ್ತಾರನ ಕಮ್ಮಟದಲ್ಲಿ ಎಲ್ಲರಿಗೂ ಸಲ್ಲುವಂತಾಗಬೇಕು. ನಮ್ಮ ಮಾತು ಎದುರಿಗಿದ್ದವರು ಜೀರ್ಣಿಸಿಕೊಳ್ಳುವಂತಿರಬೇಕು. ಸತ್ಯವೇ ಅದರ ಜೀವಾಳವಾಗಿದ್ದು ಎದುರಿಗಿದ್ದವರಿಗೆ ಮನಮುಟ್ಟುವಂತೆ ಹೇಳುವ ಮಾತುಗಾರಿಕೆ ಗ್ಯಾಜೆಟ್ಟುಗಳ ಲೋಕದಲ್ಲಿ ಪರಮ ನೀತಿಯಾಗಬೇಕು.

ಟಿಬೆಟ್‌ನಲ್ಲಿ ಮದುವೆ ಪದ್ಧತಿ ವಿಭಿನ್ನವಾಗಿದೆ. ಈ ವಿಷಯವಾಗಿ ಅಲ್ಲಿ ಅಸೂಯೆಯೂ ಇಲ್ಲ. ಆದರೆ ನಮ್ಮಲ್ಲಿ ಮದುವೆ ಇದೆ, ಸಂಗಾತಿತನದ ಆತ್ಮಸುಖ ಇದೆ, ವಿಚ್ಛೇದನಗಳ ಉಷ್ಣೋದಕವಿದೆ, ಅನುಮಾನಗಳ ಅಪನಂಬಿಕೆಯಿದೆ. ಇದೆಲ್ಲದರ ಬಗ್ಗೆ ನಮಗೆ ಸಂಬಂಧವಿದೆಯೋ ಇಲ್ಲವೋ ಮಾತಾಡಿ ತೀಟೆ ತೀರಿಸಿಕೊಳ್ಳುವ ಚಾಳಿಯಿದೆ. ಇದು ಕೇವಲ ಗ್ಯಾಜೆಟ್ಟುಗಳ ಲೋಕದ ಸಂದೇಶ ಸೂತ್ರಗಳಲ್ಲಿಯಷ್ಟೇ ಇಲ್ಲ. ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲೂ ಈಗ ಮಾತಿನ ಮೋಡಿ ನ್ಯಾಯಕ್ಕಾಗಿ, ಸತ್ಯಕ್ಕಾಗಿ ಸಂಚರಿಸುತ್ತದೆ. ಈ ದೇಶದ ಚುನಾವಣಾ ಮೊಗಸಾಲೆಗಳಲ್ಲಿ ಪ್ರಚಾರದ ಭರಾಟೆಗಳಲ್ಲಿ ಈ ಮಾತೆಂಬ ಸಮ್ಮೋಹನಾಸ್ತ್ರ 'ಜನ ಮರುಳೋ ಜಾತ್ರೆ ಮರುಳೋ'– ಎಂಬ ಭ್ರಮೆ ಸೃಷ್ಟಿಸಲಿಕ್ಕೆ ಪ್ರಯೋಗಗೊಳ್ಳುತ್ತಲೇ ಇರುತ್ತದೆ. ಅಲ್ಲೂ ಪ್ರಬುದ್ಧರು, ನಿಷ್ಣಾತರು, ಹಿರಿಯರು, ಕಿರಿಯರು, ಮೇಧಾವಿಗಳು ತಮ್ಮ ಮಾತಿನ ವರಸೆಯಲ್ಲಿ ಆಯ ತಪ್ಪುತ್ತಾರೆ, ಎದುರಿಗಿದ್ದವರು ಕೆರಳುತ್ತಾರೆ. ಬಹಿರಂಗವಾಗಿಯೇ ಅವರವರ ಅಭಿಮಾನಿಗಳು ಮಾತಿಗೆ ಸಂಬಂಧಿಸಿದಂತೆ ಗ್ಯಾಜೆಟ್ಟುಗಳ ಲೋಕದಲ್ಲಿ ಒಬ್ಬರ ಪರವಾಗಿ ಒಬ್ಬರು ವಾದಕ್ಕೆ ಬಿದ್ದು ರೊಳ್ಳೆ ತೆಗೆದು ಜಗಳಕ್ಕೇ ನಿಂತುಬಿಡುತ್ತಾರೆ. ಇದೂ ಒಂಥರಾ ಸಾಮಾಜಿಕ ಜಗಳತಾಣ, ಕ್ರಿಕೆಟ್ ಮ್ಯಾಚು, ರಾಜಕಾರಣ ಅದರ ಪಿಚ್ಚು, ಮಾತಾಡಿದವರೇ ಬ್ಯಾಟ್ಸ್‌ಮನ್ನು, ಅಭಿಮಾನಿಗಳೇ ಕಾಮೆಂಟರ್ರು, ಸೋಲು–ಗೆಲುವು ಗಾಳಿಗೋಪುರ. ಅದಕ್ಕೇ ಅಣ್ಣ ಬಸವಣ್ಣ ಹೇಳಿದ್ದು;

ಲೋಕದ ಡೊಂಕ ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ನಮ್ಮ ಕೂಡಲ ಸಂಗಮದೇವ

ಅದು ಸರ್ವೋದಯದ ಕಾಲ. ಮಾತಿಗೆ, ಮೌನಕ್ಕೆ, ರೀತಿ–ರಿವಾಜುಗಳಿಗೆ ಬೆಲೆ ಇದ್ದ ಕಾಲ. ಕೆಂಗಲ್ ಹನುಮಂತಯ್ಯನವರು ಕರ್ನಾಟಕದ ಮುಖ್ಯಮಂತ್ರಿ. ಆಗ ಮಂಡ್ಯ ಜಿಲ್ಲೆಯ ಮದ್ದೂರಿನ ಶಾಸಕರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಸಂಸ್ಥಾ ಕಾಂಗ್ರೆಸ್ಸಿನ ಹಿರಿಯ ಧುರೀಣರು ಹೆಚ್.ಕೆ.ವೀರಣ್ಣಗೌಡರು. ಒಮ್ಮೆ ಕರ್ನಾಟಕದ ಅಸೆಂಬ್ಲಿಯಲ್ಲಿ ಈಗಿನಂತೆ ವಿಷಯಾಧಾರಿತ ಚರ್ಚೆ ನಡೆಯುತ್ತಿತ್ತು. ಈಗಿನಂತೆಯೇ ಆಗಲೂ ಎಂ.ಎಲ್.ಎ.ಗಳು ಮೇಜು ಕುಟ್ಟಿ ಮಾತನಾಡುತ್ತಿದ್ದರು. ಇದ್ದುದರಲ್ಲಿ ನಮ್ಮ ಮಂಡ್ಯ ಜಿಲ್ಲೆಯ ಹೆಚ್.ಕೆ.ವೀರಣ್ಣಗೌಡರು ಮಾತಿನಲ್ಲಿ ವಿಷಯ ಮಂಡನೆಯಲ್ಲಿ ಸ್ವಲ್ಪ ಜೋರೇ!. ಹೇಳಿ ಕೇಳಿ ಮಂಡ್ಯದವರು! ಸ್ವಲ್ಪ ಜೋರು ಧ್ವನಿ. ಹಾಗೆ ದನಿ ಎತ್ತರಿಸಿಕೊಂಡು ಗೌಡರು ಆವೇಶದಲ್ಲೇ ಮಾತಾಡುತ್ತಿದ್ದರು, ಇಡೀ ವಿಧಾನಸಭೆ ಮಾತಿನ ಗದ್ದಲದಲ್ಲಿ ಮುಳುಗಿಹೋಗಿತ್ತು. ಇಂಥ ಹೊತ್ತಿನಲ್ಲಿ ಸ್ಪೀಕರ್ ರೂಲಿಂಗ್ ಕೊಟ್ಟರೂ ಪ್ರಯೋಜನವಾಗಲಿಲ್ಲ. ಎಲ್ಲರೂ ಕುಳಿತುಕೊಂಡರೂ ನಮ್ಮ ಹೆಚ್.ಕೆ. ವೀರಣ್ಣಗೌಡರು ಮಾತ್ರ ಕುಳಿತುಕೊಳ್ಳಲೇ ಇಲ್ಲ, ಅವರ ಧ್ವನಿ ಇಳಿಯಲೇ ಇಲ್ಲ. ಮುಖ್ಯಮಂತ್ರಿ ಕೆಂಗಲ್ಲರಿಗೆ ರೇಗಿಹೋಯ್ತು, ಸಿಟ್ಟು ಅದೆಲ್ಲಿತ್ತೋ ಗೊತ್ತಿಲ್ಲ, ಸ್ಪೀಕರ್ ರೂಲಿಂಗ್‌ನ್ನು ನೀವಾಳಿಸಿ ಸ್ವತಃ ಮುಖ್ಯಮಂತ್ರಿಗಳೇ ಅಖಾಡಕ್ಕೆ ಇಳಿದೇಬಿಟ್ಟರು. ಮೂಗಿನ ತುದಿಯಲ್ಲಿದ್ದ ಕೋಪ ನಾಲಿಗೆಯ ತುದಿಗೆ ಬಂತು. ಆವೇಶದಿಂದಲೇ ಮಾತಾಡುತ್ತಿದ್ದ ಹೆಚ್.ಕೆ.ವೀರಣ್ಣಗೌಡರನ್ನು ಕುರಿತು, ಮುಖ್ಯಮಂತ್ರಿಗಳು ಸದನದಲ್ಲಿ 'ಮಾತಾಡಿದ್ದು ಸಾಕು ಬಾಯ್ಮುಚ್ಚಿಕೊಳ್ಳಪ್ಪ ತಾಯಿಗಂಡ' ಎಂದುಬಿಟ್ಟರು. ಮುಖ್ಯಮಂತ್ರಿಗಳ ಬಾಯಿಂದ ಬಂದ ಆ ಮಾತು ಇಡೀ ಸದನವನ್ನೇ ಬೆಚ್ಚಿಬೀಳಿಸಿತು. ಸದನ ಒಮ್ಮೆಲೇ ಸ್ತಬ್ಧವಾಗಿ ಹೋಯಿತು. ಉಳಿದ ಶಾಸಕರೆಲ್ಲರ ಚಿತ್ತ ಹೆಚ್.ಕೆ.ವೀರಣ್ಣ ಗೌಡರತ್ತ ತಿರುಗಿತು! ಮೊದಲೇ ಆವೇಶದಲ್ಲಿದ್ದ ವೀರಣ್ಣಗೌಡರು ಮುಖ್ಯಮಂತ್ರಿಗಳಿಗೆ ತಿರುಗಿ ಏನನ್ನಬಹುದು ಎಂಬ ನಿರೀಕ್ಷೆಯಲ್ಲಿ ಶಾಸಕರು ಗಲಿಬಿಲಿಗೆ ಒಳಗಾದರು. ಆದರೆ ಇಡೀ ಸದನ ನಿರೀಕ್ಷಿಸದ ರೀತಿಯಲ್ಲಿ ಹೆಚ್.ಕೆ.ವೀರಣ್ಣಗೌಡರು ಒಂದೂ ಮಾತನಾಡದೆ ತಮ್ಮ ಮಾತು ನಿಲ್ಲಿಸಿ ಮೌನವಾಗಿ ಸದನದಿಂದ ಹೊರನಡೆದರು. ಅದಾದ ಬಳಿಕ ಇವತ್ತಿನ ಹಾಗೆ ಎಲೆಕ್ಟ್ರಾನಿಕ್ ಮೀಡಿಯಾಗಳು ಆವತ್ತು ಆಕ್ಟೀವ್ ಆಗಿರಲಿಲ್ಲ. ಪ್ರಿಂಟ್ ಮೀಡಿಯಾ ತುಂಬಾ ಸ್ಟ್ರಾಂಗಾಗಿತ್ತು. ಪತ್ರಿಕೆಯವರು ವೀರಣ್ಣಗೌಡರನ್ನ ಪ್ರತಿಕ್ರಿಯೆ ಕೇಳಿದರೂ ವೀರಣ್ಣಗೌಡರು ಪ್ರತಿಕ್ರಿಯೆ ನೀಡದೆ ಹೊರಟುಹೋದರು. ಮಾರನೆಯ ದಿನದ ಬೆಳಗಿನ ಎಲ್ಲಾ ಪತ್ರಿಕೆಗಳು ಮುಖ್ಯಮಂತ್ರಿಗಳು ಸದನದಲ್ಲಿ ಹೆಚ್.ಕೆ.ವೀರಣ್ಣಗೌಡರನ್ನು ಕುರಿತು ಆಡಿದ ಮಾತುಗಳ ಬಗ್ಗೆ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬರೆದು ಮುಖ್ಯಮಂತ್ರಿಗಳನ್ನು ಮತ್ತು ಅವರು ಬಳಸಿದ 'ತಾಯಿಗಂಡ'–ಎಂಬ ಬೈಗುಳದ ಪದವನ್ನು ಹೈಲೈಟ್ ಮಾಡಿ ಬರೆದವು. ಸದನದ ಒಳಗಿನ ಈ ಮಾತು ಸದನದ ಹೊರಗೆ ಚರ್ಚೆಗೆ ನಾಂದಿ ಹಾಡಿತು. ಇವತ್ತಿನ ಹಾಗೆ ಗ್ಯಾಜೆಟ್ಟುಗಳು ಆಗಿನ್ನೂ ಜೀವಂತವಾಗಿರಲಿಲ್ಲ. ಮುಖ್ಯಮಂತ್ರಿಗಳು ಶಾಸಕರಿಗೆ ಬಳಸಿದ ತಾಯಿಗಂಡ ಎಂಬ ಪದ ಪತ್ರಕರ್ತರನ್ನು, ಮದ್ದೂರಿನ ಕ್ಷೇತ್ರದ ಜನರನ್ನೂ, ಜನಸಾಮಾನ್ಯರನ್ನೂ ಕೆರಳಿಸಿದ್ದವು. ಸಮಯದ ಸೂಕ್ಷ್ಮತೆಯನ್ನರಿತ ಮುಖ್ಯಮಂತ್ರಿಗಳು ಅಂದೇ ಪತ್ರಿಕಾಗೋಷ್ಠಿ ಕರೆದು ವಿಷಯದ ಗಂಭೀರತೆ ಕುರಿತು ಮಾತಾಡಿದರು. ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು. 'ನೋಡಪ್ಪಾ ನಿಮ್ಮೆಲ್ಲರ ಅನುಮಾನಕ್ಕೆ ಕಾರಣ ಏನು? ನಾನು ಹಿರಿಯ ಶಾಸಕರಾದ ಹೆಚ್.ಕೆ.ವೀರಣ್ಣಗೌಡರನ್ನು ಕುರಿತು 'ತಾಯಿಗಂಡ' ಎಂಬ ಪದ ಪ್ರಯೋಗ ಮಾಡಿದ್ದಕ್ಕೆ ಅವರು ತಿರುಗಿ ನನಗೆ ಏನನ್ನೂ ಮಾತನಾಡದೇ ಎದ್ದು ಹೋದುದಕ್ಕೆ ಕಾರಣ ಹುಡುಕುತ್ತಾ ತಲೆ ಕೆಡಿಸಿಕೊಂಡಿದ್ದೀರಲ್ಲವೇ? ಈಗ ಕೇಳಿ ಹೇಳುತ್ತೇನೆ, ನಾನು ಒಬ್ಬ ಮುಖ್ಯಮಂತ್ರಿಯಾಗಿ ಸದನದಲ್ಲಿ ಆ ರೀತಿಯ ಪದಬಳಕೆ ಮಾಡಿದ್ದು ಯಾಕೆ ಅಂತ!

ಸದನದ ಒಳಗೆ ಅವರು ಶಾಸಕರು –ನಾನು ಮುಖ್ಯಮಂತ್ರಿ ಸದನದ ಹೊರಗೆ ಅವರು ನನಗೆ ಸೋದರ ಸಂಬಂಧಿ, ಅವರ ಹೆಂಡತಿ ಈ ಸೋದರ ಸಂಬಂಧದಲ್ಲಿ ನನಗೆ ತಂಗಿ. ಆಕೆಯ ಹೆಸರು ತಾಯಮ್ಮ ಅಂತ. ಮನೆಯಲ್ಲಿದ್ದಾಗ ನಾವೆಲ್ಲ ವೀರಣ್ಣಗೌಡರ ಪತ್ನಿಯನ್ನ ಬಹಳ ಅಕ್ಕರೆಯಿಂದ ತಾಯಮ್ಮ, ತಾಯಮ್ಮಾ ಎಂದು ಕರೆಯುತ್ತೇವೆ. ಒಮ್ಮೊಮ್ಮೆ ಹೋಗು ತಾಯಿ–ಬಾ ತಾಯಿ ಅಂತಾನೇ ಕರೀತೀವಿ. ಅಂದಮೇಲೆ ನಮ್ಮ ಹೆಚ್.ಕೆ.ವೀರಣ್ಣಗೌಡ ನಮ್ಮ ತಾಯಿಗಂಡ ಅಲ್ಲದೆ ಮತ್ತಿನ್ನೇನು! ಎನ್ನುತ್ತಾ ತುಟಿಬಿಚ್ಚಿ ನಕ್ಕರು. ಅಲ್ಲಿಯವರೆಗೂ ಒಂದು ಮಾತಿನ ಅರ್ಥ ವ್ಯತ್ಯಾಸದ ಆತಂಕದಲ್ಲಿದ್ದ ಪತ್ರಕರ್ತರು, ವೀರಣ್ಣಗೌಡರ ಮುಖ ನೋಡಿ ಅದೇ ಅಕ್ಕರೆಯ ನಗು ನಕ್ಕರು. ಇಡೀ ಕರುನಾಡು ಸದನದಲ್ಲೂ ಸೋದರರ ಸಂಬಂಧದ ಸವಿಯನ್ನುಂಡು ನಗೆಗಡಲಿನಲ್ಲಿ ತೇಲಿತು. ಅದಕ್ಕೆ ವರಕವಿ ದ.ರಾ.ಬೇಂದ್ರೆಯವರು ಹೇಳಿದ್ದ ಮಾತೆಂದರೆ;

'ಮಾತು ಮಾತು ಮಥಿಸಿ ಬಂದ ಭಾವದ ನವನೀತ'– ಅಂತ.

ದಿನಕರ ದೇಸಾಯಿಯವರ
ಚುಟುಕೊಂದಿದೆ;
ಅವರವರು ಸರಿಯಾಗಿ
ಅವರವರ ಪಾತ್ರ
ವಹಿಸಿಕೊಂಡರೆ ಸಾಕು,
ಎಲ್ಲಾ ಸುಸೂತ್ರ
ರಣರಂಗದಲ್ಲಿ ಬೇಕು
ಅಪ್ರತಿಮ ವೀರ
ಲೋಕಸಭೆಯಲ್ಲಿ
ಸಾಕು ವ್ಯಾಖ್ಯಾನಕಾರ

ಈ ಹಿನ್ನೆಲೆಯಲ್ಲಿ ನಮ್ಮ ಗ್ಯಾಜೆಟ್ ಲೋಕದ ವೀರರು ಇನ್‌ಸ್ಟಾಗ್ರಾಂ, ಫೇಸ್ ಬುಕ್ ಬಳಕೆದಾರರು ಪರಸ್ಪರ ಪ್ರೀತಿಯಿಂದಲೇ ಗೆಲ್ಲಿಕೊಳ್ಳಿ, ಜಗಳವಾಡಿಕೊಳ್ಳಿ, ಪ್ರೀತಿಸಿಕೊಳ್ಳಿ, ಪರಸ್ಪರ ವಿರೋಧವಿದ್ದರೂ ಗೌರವವಿರಲಿ, ಒಬ್ಬರಿಗೊಬ್ಬರು ಜೀರ್ಣಿಸಿಕೊಳ್ಳುವ ಮಾತುಗಳು ಬರಲಿ, ಆಗ ಮಾತುಸೋತ ಭಾರತ ಆಗುವುದಿಲ್ಲ. ಮಾತಿನಲ್ಲೇ ಗೆದ್ದು ಬೀಗಿದ ಭಾರತವಾಗುತ್ತದೆ. ನಾವದರ ವಾರಸುದಾರರಾಗುತ್ತೇವೆ. ಬಸವಣ್ಣನ ಮಾತಿನಂತೆ 'ಮಾತೆಂಬುದು ಜ್ಯೋತಿರ್ಲಿಂಗವಾಗುತ್ತದೆ'– ಏನಂತೀರೀ?

ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ನರ್ಸರಿ ಶಾಲೆಯಲ್ಲಿ ಅಕ್ಷರಾಭ್ಯಾಸ ಕಾರ್ಯಕ್ರಮ



ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯ ನರ್ಸರಿ ವಿಭಾಗದಲ್ಲಿ 2024–25ನೇ ಸಾಲಿನ ಎಲ್‌ಕೆಜಿ ವಿದ್ಯಾರ್ಥಿಗಳಿಗೆ 'ಅಕ್ಷರಾಭ್ಯಾಸ ಕಾರ್ಯಕ್ರಮ' ಆಯೋಜಿಸಲಾಗಿತ್ತು. ಅರ್ಚಕ ಮಂಜೇಶ್ ಸಾನ್ನಿಧ್ಯದಲ್ಲಿ ವೇದ ಮಂತ್ರಗಳ ಪಠಣದೊಂದಿಗೆ ಎಲ್‌ಕೆಜಿ ತರಗತಿಯ ಮಕ್ಕಳಿಗೆ ಅವರವರ ಪೋಷಕರ ಮುಖಾಂತರ ಅಕ್ಷರಾಭ್ಯಾಸ ನಡೆಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಮುಖ್ಯೋಪಾಧ್ಯಾಯ ಎನ್.ಪಿ. ಸತೀಶ್ ವಹಿಸಿದ್ದರು. ಸಂಗೀತ ಶಿಕ್ಷಕಿ ಶ್ರೀಮತಿ ಸುಮಂಗಲ ಜಂಗಮ ಶೆಟ್ಟಿ ಪ್ರಾರ್ಥಿಸಿದರು. ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀಮತಿ ದೀಪ ಪ್ರಶಾಂತ್ ಸ್ವಾಗತಿಸಿದರು. ನರ್ಸರಿ ಶಿಕ್ಷಕಿ ಶ್ರೀಮತಿ ಬಿ.ಮಂಜುಳಾ ನಿರೂಪಿಸಿದರು. ನರ್ಸರಿ ಶಿಕ್ಷಕಿ ಶ್ರೀಮತಿ ಮಂಜುಳಾ .ಬಿ.ಎನ್ ವಂದಿಸಿದರು. ಕಾರ್ಯಕ್ರಮದಲ್ಲಿ ಎಲ್‌ಕೆಜಿ ವಿದ್ಯಾರ್ಥಿಗಳು, ಪೋಷಕರು ಮತ್ತು ಶಾಲಾ ಸಿಬ್ಬಂದಿವರ್ಗ ಉಪಸ್ಥಿತರಿದ್ದರು.

ಜೂ.27, ನಾಡಪ್ರಭು ಶ್ರೀ ಕೆಂಪೇಗೌಡ ಜಯಂತಿ



ಮೈಸೂರು.ಜೂ.24– ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಜೂನ್ 27 ರಂದು ಬೆಳಗ್ಗೆ 10:30 ಗಂಟೆಗೆ ಕಲಾಮಂದಿರದಲ್ಲಿ ನಾಡಪ್ರಭು ಶ್ರೀ ಕೆಂಪೇಗೌಡ ಜಯಂತಿಯನ್ನು ಆಯೋಜಿಸಲಾಗಿದೆ. ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಉಪಸ್ಥಿತರಿರುವರು. ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ ಮಹದೇವಪ್ಪ ಕಾರ್ಯಕ್ರಮದ ಉದ್ಘಾಟನೆ ಮಾಡಲಿದ್ದು, ಶಾಸಕ ಕೆ. ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷರು ಹಾಗೂ ಹೆಚ್.ಡಿ ಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಅನಿಲ್‌ಕುಮಾರ್ ಸಿ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಹಾಗೂ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನಿಲ್ ಬೋಸ್ ಆಗಮಿಸಲಿದ್ದಾರೆ. ಶಾಸಕರಾದ ತನ್ವೀರ್‌ಸೇಠ್, ಜಿ.ಟಿ ದೇವೇಗೌಡ, ರವಿಶಂಕರ್ ಡಿ, ಟಿ.ಎಸ್ ಶ್ರೀವತ್ಸ, ಜಿ.ಡಿ ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್ ಹಾಗೂ ವಿಧಾನ ಪರಿಷತ್‌ನ ಸದಸ್ಯರುಗಳಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಯತೀಂದ್ರ ಮತ್ತು ವಿವೇಕಾನಂದ.ಎಸ್ ಸಮಾರಂಭದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ನಾಳೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ

ಮಾದಕ ವಸ್ತುಗಳ ದುರುಪಯೋಗ, ಅಕ್ರಮ ಸಾಗಣೆ ಜಾಗೃತಿ ಮೂಡಿಸಲು ಮಾನವ ಸರಪಳಿ



ಅಂತರರಾಷ್ಟ್ರೀಯ ಮಾದಕ ದ್ರವ್ಯ ಸೇವನೆ ಮತ್ತು ಅಕ್ರಮ ಮಾದಕ ವಸ್ತು ಕಳ್ಳ ಸಾಗಾಣೆ ವಿರೋಧಿ ದಿನದ ಜಾಗೃತಿಯ ಕರಪತ್ರ ಬಿಡುಗಡೆಗೊಳಿಸಲಾಯಿತು.

ಮೈಸೂರು, ಜೂ. 24– ಪ್ರತಿ ವರ್ಷ ಜೂನ್ 26ರಂದು ಮಾದಕ ವಸ್ತುಗಳ ದುರುಪಯೋಗ ಮತ್ತು ಅಕ್ರಮ ಕಳ್ಳ ಸಾಗಣೆ ವಿರುದ್ಧದ ಅಂತರರಾಷ್ಟ್ರೀಯ ದಿನ ಆಚರಿಸಲಾಗುತ್ತದೆ.

ಜೂ.26ರ ಬೆಳಗ್ಗೆ 10 ಗಂಟೆಗೆ ಮೈಸೂರಿನ ಕೋಟೆ ಆಂಜನೇಯ ದೇವಸ್ಥಾನದ ಮುಂಭಾಗದಲ್ಲಿ ಡಾ.ಎಸ್.ಕೆ.ಮಿಠಲ್ ನೇತೃತ್ವದಲ್ಲಿ ಪುಷ್ಪಾಂಜಲಿ ಸೇವಾ ಸಂಸ್ಥೆ ಮತ್ತು ಅಗರ್ವಾಲ್ ಸಮಾಜದ ಸಂಯುಕ್ತ ಆಶಯದಲ್ಲಿ ಯುವ ಜನರಿಗೆ ಪ್ರಮಾಣ ವಚನ ಹಾಗೂ ಮಾನವ ಸರಪಳಿ ನಿರ್ಮಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಈ ಸಂಸ್ಥೆಗಳ ಮುಖ್ಯಸ್ಥರಾದ ಡಾ.ವಿಟ್ಟಲ್, ಪತ್ರಿಕಾ ಅಂಕಣಕಾರ ಡಾ.ವಿ. ರಂಗನಾಥ್ ಹಾಗೂ ಗೋಪಾಲಸ್ವಾಮಿ ಸಂಸ್ಥೆಯ ಮುಖ್ಯಸ್ಥ ಮಂಜುನಾಥ, ಸಾಮಾಜಿಕ ಕಾರ್ಯಕರ್ತ ವಿಕ್ರಮ ಅಯ್ಯಂಗಾರ್ ಹಾಗೂ ಪ್ರಭಾಕರ್ ಸಿಂಧೆ ಮೈಸೂರು ಪತ್ರಕರ್ತರ ಭವನದಲ್ಲಿ ಪೋಸ್ಟರ್ ಬಿಡುಗಡೆಗೊಳಿಸಿ ಮಾಹಿತಿ ನೀಡಿದರು.

ಅಂದು ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂದೆ ನಡೆಯುವ ಕಾರ್ಯಕ್ರಮದಲ್ಲಿ ಯುವಜನರಿಗೆ ಮಾದಕ ವಸ್ತುಗಳ ದುರುಪಯೋಗಕ್ಕೆ ಸಂಬಂಧಿಸಿದಂತೆ ಹಾಗೂ ಅದನ್ನು ನಿವಾರಿಸುವ ದೃಷ್ಟಿಯಲ್ಲಿ ಪ್ರಮಾಣವಚನವನ್ನು ಬೋಧಿಸಲಾಗುತ್ತದೆ. ಆ ದಿನದಂದೇ ಮೈಸೂರಿನ ಅನೇಕ ಶಾಲಾ ಕಾಲೇಜುಗಳ ಮಕ್ಕಳಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಗುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಎಲ್ಲರೂ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಡಾ.ಎಸ್.ಕೆ.ವಿಟ್ಟಲ್ ಸಾರ್ವಜನಿಕರನ್ನು ಕೋರಿದ್ದಾರೆ. ಇದೇ ವೇಳೆ ಅಂತರರಾಷ್ಟ್ರೀಯ ಮಾದಕ ದ್ರವ್ಯ ಸೇವನೆ ಮತ್ತು ಅಕ್ರಮ ಮಾದಕ ವಸ್ತು ಕಳ್ಳ ಸಾಗಾಣೆ ವಿರೋಧಿ ದಿನದ ಜಾಗೃತಿಯ ಕರಪತ್ರ ಬಿಡುಗಡೆಗೊಳಿಸಲಾಯಿತು.

ಪೋಕ್ಸೊ ಪ್ರಕರಣ: ಜೀವಾವಧಿ ಶಿಕ್ಷೆ ಇಳಿಕೆ

ಬೆಂಗಳೂರು: ಪೋಕ್ಸೊ ಕಾಯ್ದೆಯಡಿ (POCSO Act) ಆರೋಪಿಯ ಶಿಕ್ಷೆಯನ್ನು ಜೀವಾವಧಿ ಶಿಕ್ಷೆಯಿಂದ 10 ವರ್ಷಕ್ಕೆ ಇಳಿಸಿದ ಕರ್ನಾಟಕ ಹೈಕೋರ್ಟ್, ಪ್ರಕರಣದಲ್ಲಿ ಗರಿಷ್ಠ ದಂಡವನ್ನು ವಿಧಿಸುವಾಗ ಸರಿಯಾದ ಕಾರಣಗಳ ಅಗತ್ಯವನ್ನು ಒತ್ತಿಹೇಳಿದೆ.

ನ್ಯಾಯಮೂರ್ತಿಗಳಾದ ಶ್ರೀನಿವಾಸ್ ಹರೀಶ್‌ಕುಮಾರ್ ಮತ್ತು ಸಿ.ಎಂ.ಜೋಶಿ ಅವರನ್ನೊಳಗೊಂಡ ವಿಭಾಗೀಯ ಪೀಠ ಚಿಕ್ಕಮಗಳೂರಿನ ಆರೋಪಿ 27 ವರ್ಷದ ಯುವಕನ ಮನವಿಯನ್ನು ಭಾಗಶಃ ಅಂಗೀಕರಿಸಿತು. ಆದರೆ, ನ್ಯಾಯಾಲಯ ದಂಡದ ಮೊತ್ತವನ್ನು 5,000 ರೂಪಾಯಿಯಿಂದ 25,000 ರೂಪಾಯಿಗೆ ಏರಿಕೆ ಮಾಡಿದೆ.

ಏನಿದು ಪ್ರಕರಣ: ಪ್ರಕರಣದಲ್ಲಿ ಆರೋಪಿ ಜೂನ್ 2016ರಲ್ಲಿ ತನ್ನ ನೆರೆಹೊರೆಯಲ್ಲಿದ್ದ ಅಪ್ರಾಪ್ತ ಬಾಲಕಿ ಜೊತೆ ಸ್ನೇಹ ಬೆಳೆಸಿ ಪದೇ ಪದೇ ಲೈಂಗಿಕ ದೌರ್ಜನ್ಯ ಎಸಗಿದ್ದ. ತನ್ನ ಮಗಳು ಗರ್ಭಿಣಿಯಾಗಿರುವುದನ್ನು ಕಂಡು ಬಾಲಕಿಯ ತಾಯಿ ಡಿಸೆಂಬರ್ 2016ರಲ್ಲಿ ದೂರು ದಾಖಲಿಸಿದ್ದರು. ಡಿಎನ್‌ಎ ಪರೀಕ್ಷೆಯಲ್ಲಿ ಆರೋಪಿ ಜೈವಿಕ ತಂದೆ ಎಂದು ದೃಢಪಟ್ಟಿತ್ತು. ಪೊಲೀಸರು ತಮ್ಮ ತನಿಖೆಯ ನಂತರ ಎಫ್‌ಐಆರ್ ದಾಖಲಿಸಿ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಜೂನ್ 11, 2018 ರಂದು, ಜಿಲ್ಲಾ ಕೇಂದ್ರ ಪಟ್ಟಣದ ಚಿಕ್ಕಮಗಳೂರಿನ ವಿಶೇಷ ನ್ಯಾಯಾಲಯವು ಆರೋಪಿಗೆ ಪೋಕ್ಸೊ ಕಾಯ್ದೆಯ ಸೆಕ್ಷನ್ 6ರ ಅಡಿಯಲ್ಲಿ ಜೀವಾವಧಿ ಶಿಕ್ಷೆ ಮತ್ತು ಕ್ರಿಮಿನಲ್ ಬೆದರಿಕೆ ಆರೋಪದ ಮೇಲೆ ಆರೋಪಿಗೆ 5,000 ರೂ ದಂಡ ಹೇರಿತ್ತು. ಈ ತೀರ್ಪನ್ನು ಆರೋಪಿಗಳು ಹೈಕೋರ್ಟ್‌ನಲ್ಲಿ ಪ್ರಶ್ನಿಸಿ, ಸೂಕ್ತ ದಾಖಲೆಗಳೊಂದಿಗೆ ಬಾಲಕಿಯ ವಯಸ್ಸು ಸಾಬೀತಾಗಿಲ್ಲ ಎಂದು ವಾದಿಸಿದರು.

ಘಟನೆ ಸಮಯದಲ್ಲಿ ಬಾಲಕಿ ವಯಸ್ಸು 12 ಎಂದು ನೀಡಿದ್ದು ಅಪ್ರಸ್ತುತವಾಗಿದ್ದರೂ ಕೂಡ ಪ್ರಕರಣ ಪರಿಶೀಲಿಸಿದ ವಿಭಾಗೀಯ ಪೀಠವು, ಮೌಖಿಕ ಸಾಕ್ಷ್ಯವು ಬಾಲಕಿಯ ಒಪ್ಪಿಗೆಯನ್ನು ಸೂಚಿಸಿದೆ ಎಂದು ಗಮನಿಸಿತು.

ಈ ಒಪ್ಪಿಗೆಯು POCSO ಕಾಯಿದೆ ಸೆಕ್ಷನ್ 6ರ ಅಡಿಯಲ್ಲಿ ಗರಿಷ್ಠ ಶಿಕ್ಷೆಯನ್ನು ವಿಧಿಸುವುದನ್ನು ವಿರೋಧಿಸುತ್ತದೆ ಎಂದು ಪೀಠ ಹೇಳಿತು. ವಿಶೇಷ ನ್ಯಾಯಾಲಯವು ಗರಿಷ್ಠ ಜೀವಾವಧಿ ಶಿಕ್ಷೆಯನ್ನು ವಿಧಿಸಲು ಸಾಕಷ್ಟು ಕಾರಣಗಳನ್ನು ಒದಗಿಸಿಲ್ಲ ಎಂದು ತೀರ್ಮಾನಿಸಿತು.

ಕಾನೂನಿನ ಪ್ರಕಾರ, POCSO ಕಾಯಿದೆಯ ಸೆಕ್ಷನ್ 6 ಕನಿಷ್ಠ 10 ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ಗರಿಷ್ಠ ಜೀವಾವಧಿ ಶಿಕ್ಷೆಗೆ ಅವಕಾಶ ನೀಡುತ್ತದೆ. ವಿಶೇಷ ನ್ಯಾಯಾಲಯದ ತೀರ್ಪಿನಲ್ಲಿ ಗರಿಷ್ಠ ಶಿಕ್ಷೆಯನ್ನು ವಿಧಿಸಲು ಕಾರಣಗಳ ಅಗತ್ಯವಿದೆ ಎಂದು ನ್ಯಾಯಾಲಯವು ತೀರ್ಪು ನೀಡಿದೆ. ಪರಿಣಾಮವಾಗಿ, ನ್ಯಾಯಾಲಯವು ತನ್ನ ಇತ್ತೀಚಿನ ಆದೇಶದಲ್ಲಿ, ಶಿಕ್ಷೆಯನ್ನು 10 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಅಂತರರಾಷ್ಟ್ರೀಯ ಯೋಗ ದಿನಾಚರಣೆ



ಮೈಸೂರಿನ ಶಿವಶ್ರೀ ವಿದ್ಯಾರ್ಥಿನಿಯರ ನಿಲಯದಲ್ಲಿ ಯೋಗ ದಿನಾಚರಣೆ ಅಂಗವಾಗಿ ಎಸ್.ಪ್ರಕಾಶ್ ಪ್ರಿಯದರ್ಶನ ಸ್ನೇಹ ಬಳಗದ ವತಿಯಿಂದ ವಿದ್ಯಾರ್ಥಿಗಳಿಗೆ ಯೋಗ ಪ್ರದರ್ಶನ ಏರ್ಪಡಿಸಲಾಗಿತ್ತು. ಈ ವೇಳೆ ನಿಲಯದ ಮುಖ್ಯಸ್ಥರಾದ ಪ್ರಭಾಮಣಿ, ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವ್, ಹೊಯ್ಸಳ ಕರ್ನಾಟಕ ಸಂಘದ ಕಾರ್ಯದರ್ಶಿ ರಂಗನಾಥ್, ಯಶ್ವಂತ್‌ಕುಮಾರ್, ಛಾಯ, ಮಹದೇವ್, ಮಹೇಶ್, ಎಸ್.ಪಿ.ಅಕ್ಷಯ್ ಪ್ರಿಯದರ್ಶನ್, ಶ್ರೀಧರ್, ಹರ್ಷಿತ್ ಇನ್ನಿತರರಿದ್ದರು.

ವ್ಯಕ್ತಿತ್ವ ವಿಕಸನ ಶಿಬಿರಕ್ಕೆ ಚಾಲನೆ



ಮೌಂಟ್ ಅಬುವಿನಿಂದ ಮೈಸೂರಿಗೆ ಆಗಮಿಸಿರುವ ಲಲಿತ ಬಾಯಿ ಇನಾನಿ ಅವರು ರಾಜಯೋಗ ರಿಟ್ರೀಟ್ ಸೆಂಟರ್‌ನಲ್ಲಿ 3ನೇ ತಂಡದ ವ್ಯಕ್ತಿತ್ವ ವಿಕಸನ ಶಿಬಿರಕ್ಕೆ ಚಾಲನೆ ನೀಡಿದರು. ರಿಟ್ರೀಟ್ ಸೆಂಟರ್‌ನ ಸಂಚಾಲಕಿ ಬಿಕೆ ಶಾರದಾಜೀ, ಮೈಸೂರು ಉಪ ವಿಭಾಗದ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ, ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜಿ ಬ್ರಹ್ಮಾಕುಮಾರ ರಂಗನಾಥ್ ಇದ್ದರು.

ಎಲ್ಲೆಡೆ ಕಾಡುತ್ತಿದೆ ಡೆಂಗ್ಯೂ.... ಜ್ವರ ಬಂದರೆ ಬೇಡ ನಿರ್ಲಕ್ಷ್ಯ



ಮೈಸೂರು, ಜೂ.24(ಪಿಎಂ)– ತೀವ್ರ ಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗ ನೋವು, ಮಾಂಸ ಖಂಡ ಮತ್ತು ಕೀಲುಗಳಲ್ಲಿ ನೋವು, ಚರ್ಮದ ಮೇಲೆ ಗಂಧೆಗಳು ಹಾಗೂ ವಸಡು ಮತ್ತು ಮೂಗಿನಲ್ಲಿ ರಕ್ತಸ್ರಾವ ಇವು ಡೆಂಗ್ಯೂ ಜ್ವರದ ರೋಗ ಲಕ್ಷಣಗಳು. ಈಡಿಸ್ ಈಜಿಪ್ಟೈ ಸೊಳ್ಳೆಗಳ ಕಚ್ಚುವಿಕೆಯಿಂದ ತಪ್ಪಿಸಿಕೊಂಡರೆ ಈ ರೋಗ ಲಕ್ಷಣಗಳು ಸೋಂಕು ಬಾಧಿಸದು. ಒಂದು ವೇಳೆ ಈ ಲಕ್ಷಣಗಳು ಕಂಡು ಬಂದರೆ ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ತಾಳದೇ ಚಿಕಿತ್ಸೆ ಪಡೆಯಬೇಕು.

ಹೌದು, ರಾಜ್ಯದಲ್ಲಿ ಈಗ ಡೆಂಗ್ಯೂ ಜ್ವರದ ಆತಂಕ ಕಾಡಲಾರಂಭಿಸಿದೆ. ಅಂತೆಯೇ ಇದಕ್ಕೆ ಮೈಸೂರು ಜಿಲ್ಲೆಯೂ ಹೊರತಲ್ಲ. ಯಾವುದೇ ಗಂಭೀರ ಪ್ರಕರಣಗಳು ಈವರೆಗೆ ಕಂಡುಬಂದಿಲ್ಲ ಎಂಬುದು ಸಮಾಧಾನಕರ ಸಂಗತಿಯಾದರೂ ಮೈಸೂರು ಜಿಲ್ಲೆಯಲ್ಲಿ ಈ ವರ್ಷದ ಜನವರಿಯಿಂದ ಈವರೆಗೆ (ಜೂನ್) 2,395 ಮಂದಿಯ ರಕ್ತ ಮಾದರಿ ಪರೀಕ್ಷೆ ಪೈಕಿ 358 ಮಂದಿಗೆ ಡೆಂಗ್ಯೂ ದೃಢಪಟ್ಟಿದೆ.

ಮೈಸೂರು ನಗರದಲ್ಲಿ 743 ಮಂದಿಯ ರಕ್ತ ಮಾದರಿ ಪರೀಕ್ಷೆಯಲ್ಲಿ 146 ಮಂದಿಗೆ ಡೆಂಗ್ಯೂ ದೃಢಪಟ್ಟಿದೆ. ಅದೇ ರೀತಿ ಮೈಸೂರು ಗ್ರಾಮಾಂತರದಲ್ಲಿ 272 ಮಂದಿಯ ರಕ್ತ ಮಾದರಿ ಪರೀಕ್ಷೆಯಲ್ಲಿ 47 ಮಂದಿಗೆ ಡೆಂಗ್ಯೂ ಸೋಂಕು ಪತ್ತೆಯಾಗಿದೆ. ತಿ.ನರಸೀಪುರ ತಾಲೂಕಿನಲ್ಲಿ 106 ಮಂದಿ ಪೈಕಿ 6 ಮಂದಿ, ನಂಜನಗೂಡು ತಾಲೂಕಿನಲ್ಲಿ 173ರ ಪೈಕಿ 18, ಹೆಚ್‌ಡಿ ಕೋಟೆ ತಾಲೂಕಿನಲ್ಲಿ 87 ಮಂದಿ ಪೈಕಿ 14, ಹುಣಸೂರು ತಾಲೂಕಿನಲ್ಲಿ 652 ಮಂದಿ ಪೈಕಿ 72, ಪಿರಿಯಾಪಟ್ಟಣ ತಾಲೂಕಿನಲ್ಲಿ 201 ಮಂದಿ ಪೈಕಿ 29 ಹಾಗೂ ಕೆಆರ್ ನಗರ ತಾಲೂಕಿನಲ್ಲಿ 122 ಮಂದಿ ಪೈಕಿ 22 ಮಂದಿಯಲ್ಲಿ ಡೆಂಗ್ಯೂ ಕಾಣಿಸಿಕೊಂಡಿದೆ. ಒಟ್ಟಾರೆ 2,395 ಮಂದಿಯ ರಕ್ತ ಮಾದರಿ ಪರೀಕ್ಷೆಯಲ್ಲಿ 358 ಮಂದಿಯಲ್ಲಿ ಡೆಂಗ್ಯೂ ಪತ್ತೆಯಾಗಿದೆ.

ಜಿಲ್ಲೆಗೆ ಸಂಬಂಧಿಸಿದಂತೆ ಇದೇ ಅಂಕಿ ಅಂಶವನ್ನು ಒಟ್ಟಾರೆಯಾಗಿ ತಿಂಗಳುವಾರು ನೋಡುವುದಾದರೆ, ಜನವರಿಯಲ್ಲಿ 391 ಮಂದಿಯ ರಕ್ತ ಮಾದರಿ ಪರೀಕ್ಷೆಯಲ್ಲಿ 39 ಮಂದಿಗೆ ಡೆಂಗ್ಯೂ ದೃಢಪಟ್ಟಿದೆ. ಅದೇ ರೀತಿ ಫೆಬ್ರವರಿಯಲ್ಲಿ 436 ಮಂದಿ ಪೈಕಿ 80, ಮಾರ್ಚ್‌ನಲ್ಲಿ 321 ಮಂದಿ ಪೈಕಿ 55, ಏಪ್ರಿಲ್‌ನಲ್ಲಿ 439 ಮಂದಿ ಪೈಕಿ 78, ಮೇನಲ್ಲಿ 640 ಮಂದಿ ಪೈಕಿ 89, ಜೂನ್‌ನಲ್ಲಿ 168 ಮಂದಿ ಪೈಕಿ 17 ಮಂದಿಯಲ್ಲಿ ಡೆಂಗ್ಯೂ ದೃಢಪಟ್ಟಿದೆ.

ಎಲ್ಲರೂ ಗುಣಮುಖ: ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಡೆಂಗ್ಯೂ ನಿಯಂತ್ರಣ ಸಂಬಂಧ ಇಲಾಖೆಯಿಂದ ಎಲ್ಲಾ ಚಟುವಟಿಕೆ ಮಾಡುತ್ತಿದ್ದು, ಪೇಷಂಟ್‌ವೈಸ್ ಫಾಲೋ ಅಪ್ ಮಾಡುತ್ತಿದ್ದೇವೆ. ಈವರೆಗೆ ಯಾವುದೇ ಗಂಭೀರ ಪ್ರಕರಣಗಳು ಇಲ್ಲ. ಈ ವರ್ಷದ ಜನವರಿಯಿಂದ ಈವರೆಗೆ ಪತ್ತೆಯಾದ ಒಟ್ಟು 358 ಡೆಂಗ್ಯೂ ಪ್ರಕರಣಗಳಲ್ಲಿ ಎಲ್ಲರೂ ಗುಣಮುಖರಾಗಿದ್ದಾರೆ. ಎಲ್ಲಾ ಸೋಂಕಿತರು ಕೇವಲ 2ರಿಂದ 3 ದಿನಗಳಲ್ಲೇ ಚೇತರಿಸಿಕೊಂಡಿದ್ದಾರೆ. ಇಂದಿಗೆ (ಜೂ.23ರ ಭಾನುವಾರಕ್ಕೆ) ಯಾವುದೇ ಸಕ್ರಿಯ ಪ್ರಕರಣಗಳು ಇಲ್ಲ ಎಂದು ತಿಳಿಸಿದರು.

ಈಡಿಸ್ ಈಜಿಪ್ಟೈ ಸೊಳ್ಳೆ ಕಚ್ಚುವಿಕೆಯಿಂದ ಮಾತ್ರವೇ ಡೆಂಗ್ಯೂ ವೈರಾಣು ಮನುಷ್ಯನ ದೇಹಕ್ಕೆ ಬರಲಿದ್ದು, ಇದರ ಹೊರತಾಗಿ ಬೇರೆ ಯಾವುದೇ ವಿಧದಲ್ಲಿ ಬರುವುದಿಲ್ಲ. ಡೆಂಗ್ಯೂ ಸೋಂಕು ಹೊಂದಿರುವ ವ್ಯಕ್ತಿಯಿಂದ ಅದು ಮತ್ತೊಬ್ಬರಿಗೆ ಹರಡುವುದಿಲ್ಲ. ಸೋಂಕಿನ ನಿಯಂತ್ರಣಕ್ಕೆ ಹಲವು ಕ್ರಮ ವಹಿಸಲಾಗಿದೆ. ಲಾರ್ವಾ ಸಮೀಕ್ಷೆ ಮಾಡಿಸಿ ಲಾರ್ವಾ ನಿರ್ಮೂಲನೆ ಮಾಡಲಾಗುತ್ತಿದೆ. ಆಶಾ ಕಾರ್ಯಕರ್ತೆಯರು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿ ಜಾಗೃತಿ ಮೂಡಿಸುತ್ತಿದ್ದಾರೆ ಎಂದು ಹೇಳಿದರು.

ಡೆಂಗ್ಯೂ ಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ತಲಾ 5 ಹಾಸಿಗೆ ಮೀಸಲು...



"ಶೀಘ್ರ ಪತ್ತೆ ಮತ್ತು ತ್ವರಿತ ಚಿಕಿತ್ಸೆಗೆ ಒತ್ತು ನೀಡಲಾಗಿದೆ. ಹೀಗಾಗಿ ಹೆಚ್ಚಿನ ಪ್ರಮಾಣದಲ್ಲಿ ಪರೀಕ್ಷೆ ನಡೆಸುತ್ತಿದ್ದೇವೆ. ತಲೆನೋವು, ಮೈಕೈ ನೋವು ಹಾಗೂ ಜ್ವರವೆಂದು ಆಸ್ಪತ್ರೆಗೆ ಬರುವವರಿಗೆ ರಕ್ತ ಪರೀಕ್ಷೆ ಮಾಡಿಸಲಾಗುತ್ತಿದೆ. ಪ್ರತಿಯೊಂದು ಪ್ರಾಥಮಿಕ ಕೇಂದ್ರದಲ್ಲೂ ರಕ್ತ ಪರೀಕ್ಷೆ ಸೌಲಭ್ಯ ಇದೆ. ಜೊತೆಗೆ ಉಚಿತ ಕೂಡ. ಸರ್ಕಾರಿ ಆಸ್ಪತ್ರೆಗಳಲ್ಲಿ ಇದರ ಪರೀಕ್ಷೆ ಹಾಗೂ ಚಿಕಿತ್ಸೆ ಎರಡೂ ಉಚಿತವಿದೆ. ಆಸ್ಪತ್ರೆಗೆ ದಾಖಲಾದರೂ ಉಚಿತ ಸೇವೆ ಲಭ್ಯವಿದೆ. ಮೈಸೂರು ಜಿಲ್ಲಾಸ್ಪತ್ರೆ ಹಾಗೂ ಎಲ್ಲಾ ತಾಲೂಕು ಆಸ್ಪತ್ರೆಗಳಲ್ಲಿ ತಲಾ ಐದು ಹಾಸಿಗೆ ವ್ಯವಸ್ಥೆಯನ್ನು ಡೆಂಗ್ಯೂ ಜ್ವರದ ಚಿಕಿತ್ಸೆಗಾಗಿ ಕಾಯ್ದಿರಿಸಲಾಗಿದೆ.

–ಡಾ.ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ಆರೋಗ್ಯಾಧಿಕಾರಿ, ಮೈಸೂರು.

ಸ್ವಚ್ಛ ನೀರಿನಲ್ಲಿ ಸಂತಾನಾಭಿವೃದ್ಧಿ

ಡೆಂಗ್ಯೂ ವೈರಾಣು ಹರಡುವ ಈಡಿಸ್ ಈಜಿಪ್ಟೈ ಸೊಳ್ಳೆಯು ಸಾಮಾನ್ಯವಾಗಿ ಸ್ವಚ್ಛ ನೀರಿನಲ್ಲಿ ಸಂತಾನಾಭಿವೃದ್ಧಿ ಮಾಡುತ್ತದೆ. ನೀರನ್ನು ಶೇಖರಿಸಿಡುವ ಸಿಮೆಂಟ್ ತೊಟ್ಟಿ, ಕಲ್ಲು ಚಪ್ಪಡಿಯಿಂದ ನಿರ್ಮಿಸಿದ ತೊಟ್ಟಿ, ಡ್ರಮ್, ಬ್ಯಾರೆಲ್, ಮಣ್ಣಿನ ಮಡಿಕೆ, ಎಳನೀರು ಬುರಡೆ, ಬಾಟಲಿಗಳ ಮುಚ್ಚಳಗಳು ಮೊದಲಾದವುಗಳಲ್ಲಿ ನಿಲ್ಲುವ ನೀರಿನಲ್ಲಿ ಇವು ಬೆಳವಣಿಗೆ ಕಾಣುತ್ತವೆ. ಹಾಗಾಗಿ ಈ ರೀತಿಯಲ್ಲಿ ನೀರು ನಿಲ್ಲದಂತೆ ಎಚ್ಚರ ವಹಿಸಬೇಕಾಗುತ್ತದೆ. ಈ ಸೊಳ್ಳೆಗಳು ಹೆಚ್ಚಾಗಿ ಬೆಳಗ್ಗೆ ಹಾಗೂ ಸಂಜೆ ವೇಳೆಯಲ್ಲಿ ಕಚ್ಚುತ್ತವೆ. ಡೆಂಗ್ಯೂ ಜ್ವರಕ್ಕೆ ನಿರ್ದಿಷ್ಟ ಔಷಧ ಅಥವಾ ಲಸಿಕೆ ಇಲ್ಲ. ರೋಗದ ಲಕ್ಷಣಗಳಿಗೆ ಅನುಗುಣವಾಗಿ ವೈದ್ಯರು ಸೂಕ್ತ ಚಿಕಿತ್ಸೆ ನೀಡುತ್ತಾರೆ. ಸೋಂಕು ಉಲ್ಬಣಗೊಂಡರೆ ಪ್ಲೇಟ್‌ಲೆಟ್‌ಗಳು ಲಭ್ಯವಾಗುವಂತೆ ಚಿಕಿತ್ಸೆ ಮಾಡಲಾಗುತ್ತದೆ. ಮೈಸೂರು ಜಿಲ್ಲೆಯಲ್ಲಿ 2022ರಲ್ಲಿ 789, 2023ರಲ್ಲಿ 702 ಡೆಂಗ್ಯೂ ಪ್ರಕರಣಗಳು ಪತ್ತೆಯಾಗಿವೆ.

ಮೈಸೂರು ಯಾದವಗಿರಿ ಪವಿತ್ರ ಹೃದಯದ ದೇವಾಲಯದಲ್ಲಿ ಧರ್ಮ ಕೇಂದ್ರದ ವಾರ್ಷಿಕ ಮಹೋತ್ಸವ








ಮೈಸೂರು ಯಾದವಗಿರಿಯ ಪವಿತ್ರ ಹೃದಯದ ದೇವಾಲಯದಲ್ಲಿ ಧರ್ಮ ಕೇಂದ್ರದ ವಾರ್ಷಿಕ ಮಹೋತ್ಸವ ಡಾ. ಬರ್ನಾಡ್ ಮೊರಸ್ ನೇತೃತ್ವದಲ್ಲಿ ಮೂರು ದಿನಗಳ ಕಾಲ ವಿಜೃಂಭಣೆಯಿಂದ ನಡೆಯಿತು. ಜೂನ್ 20 ರಂದು ಫಾ. ಜಯರಾಜ್ .ಡಿ ನೇತೃತ್ವದಲ್ಲಿ ಜಪಸರ, ಧ್ವಜಾರೋಹಣ ದಿವ್ಯ ಬಲಿಅರ್ಪಣೆ. ಜೂನ್ 21 ರಂದು ಫಾ. ಅಂತೋಣಿ ರಾಜ್ .ಜೆ ಅವರ ನೇತೃತ್ವದಲ್ಲಿ ಜಪಸರ, ದಿವ್ಯ ಬಲಿಅರ್ಪಣೆ. ಜೂನ್ 22 ರಂದು ಫಾ. ಜೋಸೆಫ್ ಮರಿ .ಜೆ ನೇತೃತ್ವದಲ್ಲಿ ಜಪಸರ, ದಿವ್ಯ ಬಲಿಅರ್ಪಣೆ ಹಾಗೂ ಕೊನೆ ದಿನ ಜೂನ್ 23 ರಂದು ದಿವ್ಯ ಬಲಿಅರ್ಪಣೆ, ನಂತರ ಅಲಂಕೃತ ತೇರಿನ ಮೆರವಣಿಗೆ ನೆರವೇರಿತು.

ಮೈಸೂರಲ್ಲಿ ಅಪರೂಪದ ರೀಸಸ್ ಮಂಕಿ ಪತ್ತೆ

- ಗೂಡ್ಸ್ ರೈಲು ಅಥವಾ ತರಕಾರಿ ಲಾರಿಯಲ್ಲಿ ಆಗಮಿಸಿರುವ ಸಾಧ್ಯತೆ
- ಗದ್ದಲದ ನಗರ ಜೀವನದ ಹೊಸ ಪರಿಸರಕ್ಕೆ ಗಾಬರಿ

● ಎಂ.ಟಿ.ಯೋಗೇಶ್‌ಕುಮಾರ್



ಮೈಸೂರಿನ ಮಹಾರಾಜ ಪದವಿ ಪೂರ್ವ ಕಾಲೇಜು ಕಾಂಪೌಂಡ್ ಮೇಲೆ ಕುಳಿತಿರುವ ರೀಸಸ್ ಮಂಕಿ.

ಮೈಸೂರು,ಜೂ.24 –ಉತ್ತರ ಭಾರತದಲ್ಲಿ ಕಾಣಸಿಗುವ ಆಕ್ರಮಣಕಾರಿ ಸ್ವಭಾವದ ರೀಸಸ್(ರೇಸ್ಸಸ್) ಮಂಕಿಯೊಂದು ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಪ್ರತ್ಯಕ್ಷವಾಗಿದೆ. ಅಬ್ಬರ, ಸದ್ದು ಗದ್ದಲದ ನಗರ ಜನ ಜೀವನದಿಂದ ಅದು ಕಂಗೆಟ್ಟಿದೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಜ ಪದವಿ ಪೂರ್ವ ಕಾಲೇಜಿನ ಕಾಂಪೌಂಡ್ ಮೇಲೆ ಸೋಮವಾರ ಮಧ್ಯಾಹ್ನ 12.35ರಲ್ಲಿ ಓಡಾಡಿದ ಈ ಮಂಕಿ ನೋಡುಗರ ಗಮನ ಸೆಳೆಯಿತು. ಅತ್ತಿಂದಿತ್ತ ಓಡಾಡಿ, ಪಾದಚಾರಿ ಮಾರ್ಗದಲ್ಲಿ ಓಡಾಡುತ್ತಿದ್ದವರ ಮೇಲೆ ದಾಳಿ ಆತಂಕ ಮೂಡಿಸಿತು. ಕೊನೆಗೆ ಮಹಾರಾಜ ಪ್ರೌಢಶಾಲೆಯ ಕಟ್ಟಡವೇರಿ ವಿರಮಿಸಿತು. ನಂತರ ಹಳೆ ಜಿಲ್ಲಾಧಿಕಾರಿ ಕಚೇರಿ ಪಕ್ಕದ ಮೈದಾನದ ಮರವೇರಿತು.

ಉತ್ತರ ಭಾರತವಲ್ಲದೇ ನೇಪಾಳ, ದಕ್ಷಿಣ ಚೀನಾ, ಆಗ್ನೇಯ ಏಷ್ಯಾದಲ್ಲಿ ರೀಸಸ್(ರೇಸ್ಸಸ್) ಮಂಕಿ ಸಂತತಿ ಹೆಚ್ಚಾಗಿ ಕಂಡುಬರುತ್ತದೆ. ಉತ್ತರ ಭಾರತದಲ್ಲಿ ರೀಸಸ್ ಮಂಕಿಗಳ ಸಂತತಿ ಹೆಚ್ಚಾಗುತ್ತಿದ್ದು, ಕ್ರಮೇಣ ದಕ್ಷಿಣ ಭಾರತದತ್ತ ವಲಸೆ ಬಂದು ನೆಲೆ ಕಂಡುಕೊಳ್ಳುವ ಪ್ರಯತ್ನದಲ್ಲಿವೆ. ಈಗಾಗಲೇ ಆಂಧ್ರ ಪ್ರದೇಶ ಹಾಗೂ ತೆಲಂಗಾಣದಲ್ಲೂ ಗುಂಪು ಗುಂಪಾಗಿ ಕಾಣಿಸಿಕೊಳ್ಳುತ್ತಿವೆ.

ಸ್ಥಳೀಯ ಕೋತಿಗಳಿಗೂ ಈ ರೀಸಸ್ ಮಂಕಿಗೂ ಸಾಕಷ್ಟು ವ್ಯತ್ಯಾಸವಿದೆ. ಇದರ ಹಿಂಭಾಗ ಕೆಂಪು ಬಣ್ಣದಿಂದ ಕೂಡಿರುತ್ತದೆ. ಹೆಚ್ಚು ಕೂದಲು ಹೊಂದಿರುವ ಈ ಕೋತಿ ತಲೆ ಮೇಲಿನ ಕೂದಲು ಕ್ಯಾಪ್‌ನಂತೆ ಕಾಣುತ್ತದೆ. ಬಾಲವೂ ಸ್ವಲ್ಪ ಚಿಕ್ಕದಾಗಿರುತ್ತದೆ. ಇವುಗಳು ಆಕ್ರಮಣ ಸ್ವಭಾವ ಹೊಂದಿರುತ್ತವೆ. ಸಾಮಾನ್ಯ ಕೋತಿಗಳೊಂದಿಗೆ ಕಾಳಗಕ್ಕೆ ಇಳಿದು, ತಮ್ಮ ಆವಾಸ ಸ್ಥಾನ ಭದ್ರಪಡಿಸಿಕೊಳ್ಳುವಲ್ಲಿ ರೀಸಸ್ ಮಂಕಿ ಮುಂದಾಗುತ್ತಿವೆ ಎಂದು ಪ್ರಾಣಿ ಪ್ರಿಯರು ವಿಶ್ಲೇಷಿಸಿದ್ದಾರೆ.

ಎಲ್ಲಿಂದ ಬಂದವೋ... : ಮೈಸೂರಲ್ಲಿ ರೀಸಸ್ ಮಂಕಿ ಪ್ರತ್ಯಕ್ಷವಾಗಿರುವುದು ಅಚ್ಚರಿಯುಂಟು ಮಾಡಿದೆ. ಆಂಧ್ರ, ತೆಲಂಗಾಣ, ಮಹಾರಾಷ್ಟ್ರದ ಕಡೆಯಿಂದ ಮೈಸೂರಿಗೆ ಬಂದ ಹಣ್ಣು–ತರಕಾರಿ ಸಾಗಿಸುವ ಲಾರಿ, ಗೂಡ್ಸ್ ರೈಲಿನಲ್ಲಿ ರೀಸಸ್ ಮಂಕಿ ಮೈಸೂರಿಗೆ ಬಂದಿರಬಹುದು ಎಂಬ ಅನುಮಾನವಿದೆ. ರೀಸಸ್ ಮಂಕಿಗಳು ಹೆಚ್ಚು ಬುದ್ಧಿವಂತ, ಉತ್ಸಾಹಭರಿತ ಪ್ರಾಣಿ. ಗಂಡು ಕೋತಿ ಬೆಳೆಯುತ್ತಾ ಗುಂಪು ತೊರೆದರೆ, ಹೆಣ್ಣು ಕೋತಿ ಇರುವ ಗುಂಪಿನಲ್ಲಿ ಇರಲು ಇಷ್ಟಪಡುತ್ತದೆ. ಸಾಮಾನ್ಯವಾಗಿ 20ರಿಂದ 200 ಸಂಖ್ಯೆಯ ಗುಂಪಿನಲ್ಲಿ ರೀಸಸ್ ಮಂಕಿ ಇರುತ್ತವೆ.

"ಮೈಸೂರಲ್ಲಿ ಇದೇ ಮೊದಲ ಬಾರಿಗೆ ರೀಸಸ್ ಮಂಕಿ ಕಾಣಿಸಿಕೊಂಡಿದೆ. 2022ರ ಫೆ.3ರಂದು ನಾಗರಹೊಳೆ ಅಭಯಾರಣ್ಯದ ನಡುವೆ ಹಾದು ಹೋಗಿರುವ ಕುಟ್ಟ ರಸ್ತೆಯಲ್ಲೊಂದು ರೀಸಸ್ ಮಂಕಿ ಕಂಡುಬಂದಿತ್ತು. ಇದೀಗ ಮೈಸೂರು ನಗರದಲ್ಲೇ ಕಾಣಿಸಿಕೊಂಡಿರುವುದು ಅಚ್ಚರಿಯುಂಟು ಮಾಡಿದೆ. ಯಾವುದೋ ವಾಹನ ಅಥವಾ ಗೂಡ್ಸ್ ರೈಲಿನ ಮೂಲಕ ಅಕಸ್ಮಾತ್ ಬಂದಿರುವ ಸಾಧ್ಯತೆ ಇದೆ. ಇಲ್ಲಿ ಹೊಸ ಪರಿಸರ, ಸಂಗಾತಿಗಳನ್ನು ಹುಡುಕುವ ಬರದಲ್ಲಿ ಅದು ಜನರ ಮೇಲೆ ದಾಳಿ ಮಾಡುವ ಆತಂಕ ಸೃಷ್ಟಿಸಿರಬಹುದು. ಇದು ಸಾಮಾನ್ಯ ಕೋತಿಗಳ ಗುಂಪಿಗೆ ಸೇರಿ, ಅವುಗಳ ಮೇಲೆ ದಾಳಿ ಮಾಡುವ ಸಾಧ್ಯತೆ ಹೆಚ್ಚಾಗಿದೆ. **–ಪ್ರದೀಪ್, ವನ್ಯಜೀವಿ ಸಂರಕ್ಷಕ**

ಹಣ ಪಣಕಿಟ್ಟು ಕೇರಂ ಆಡುತ್ತಿದ್ದ 25 ಮಂದಿ ಬಂಧನ

ಮೈಸೂರು, ಜೂ.24(ಎಸ್‌ಪಿಎನ್)– ಹಣ ಪಣಕಿಟ್ಟು ಕೇರಂ ಆಡುತ್ತಿದ್ದ 25 ಮಂದಿಯನ್ನು ಬಂಧಿಸಿರುವ ಸಿಸಿಬಿ ಪೊಲೀಸರು 24970 ರೂ. ವಶಕ್ಕೆ ಪಡಿಸಿಕೊಂಡಿದ್ದಾರೆ.

ಮೈಸೂರು ನರಸಿಂಹರಾಜ ಠಾಣಾ ವ್ಯಾಪ್ತಿಯ ಬಡಮಕಾನ್ ರಸ್ತೆಯಲ್ಲಿರುವ ಎಪಿಜೆ ಅಬ್ದುಲ್ ಕಲಾಂ ಯೂತ್ ಕೇರಂ ಕ್ಲಬ್‌ನಲ್ಲಿ ಜೂ.19ರಂದು ಮನರಂಜನೆ ಹೆಸರಿನಲ್ಲಿ ಕಾನೂನು ಬಾಹಿರವಾಗಿ ಹಣವನ್ನು ಪಣವಾಗಿಟ್ಟು ಕೇರಂ ಆಟವನ್ನು ಜೂಜಾಟದಂತೆ ಆಡುತ್ತಿದ್ದ ಬಗ್ಗೆ ಮೈಸೂರು ನಗರ ಸಿಸಿಬಿ ಘಟಕದ ಪೊಲೀಸರಿಗೆ ಬಂದ ಖಚಿತ ಮಾಹಿತಿ ಮೇರೆಗೆ ಈ ಅಡ್ಡೆ ಮೇಲೆ ಕಾರ್ಯಾಚರಣೆ ನಡೆಸಿ, ಸ್ಥಳದಲ್ಲಿದ್ದ ಒಟ್ಟು 25 ಮಂದಿ ಖದೀಮರನ್ನು ವಶಕ್ಕೆ ಪಡೆದಿದ್ದಾರೆ.

ಪಣಕಿಟ್ಟಿದ್ದ 24,970 ನಗದು, 9 ಕೇರಂ ಬೋರ್ಡ್ ಹಾಗೂ ಇತರೆ ಪರಿಕರಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಎನ್.ಆರ್.ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಪತ್ತೆ ಕಾರ್ಯವನ್ನು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಪ್ರಶಂಸಿಸಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳ ಸ್ವೇಚ್ಛಾಚಾರಕ್ಕೆ ಬ್ರೇಕ್

ಶೇ.50ರ ಅನುಪಾತ ನಿವೇಶನ ಹಂಚಿಕೆ ಸ್ಥಗಿತಗೊಳಿಸಲು ಆಯುಕ್ತರಿಗೆ ಅಧ್ಯಕ್ಷರ ಸೂಚನೆ



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯ ಹೊರ ನೋಟ.



ಮುಡಾ ಅಧ್ಯಕ್ಷ ಕೆ.ಮರೀಗೌಡ

ಮೈಸೂರು,ಜೂ.24(ಆರ್‌ಕೆ)–ಶೇಕಡಾ 50:50ರ ಅನುಪಾತದಡಿ ನಿವೇಶನ ಹಂಚಿಕೆ ಮಾಡುತ್ತಿರುವ ಪ್ರಕ್ರಿಯೆಯನ್ನು ತಕ್ಷಣದಿಂದಲೇ ಸ್ಥಗಿತಗೊಳಿಸುವಂತೆ ಆಯುಕ್ತರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧ್ಯಕ್ಷ ಕೆ.ಮರೀಗೌಡ ಸೂಚಿಸಿದ್ದಾರೆ. ಈ ಕುರಿತು ಕಚೇರಿ ಟಿಪ್ಪಣಿ ಹೊರಡಿಸಿರುವ ಅಧ್ಯಕ್ಷರು, ಪ್ರಾಧಿಕಾರದಿಂದ ಶೇ.50:50ರ ಅನುಪಾತದಡಿ ನಿವೇಶನ ಮಂಜೂರು ಮಾಡುತ್ತಿರುವುದು ಕಾನೂನು ಬಾಹಿರ ಎಂದು ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ಈ ಪ್ರಕ್ರಿಯೆ ಸ್ಥಗಿತಗೊಳಿಸುವಂತೆ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಅವರಿಗೆ ನಿರ್ದೇಶನ ನೀಡಿದ್ದಾರೆ.

2021ರಿಂದ ಈವರೆಗೆ ಶೇ.50:50ರ ಅನುಪಾತದಡಿ ಹಂಚಿಕೆ ಮಾಡಿರುವ ನಿವೇಶನಗಳ ಪೂರ್ಣ ಮಾಹಿತಿಯನ್ನು ಮುಂದಿನ ಪ್ರಾಧಿಕಾರದ ಸಭೆಗೆ ವಿಷಯ ಮಂಡಿಸಿ ಸದಸ್ಯರ ಅನುಮೋದನೆ ಪಡೆಯಬೇಕು. ಈ ಸಂಬಂಧ ಸ್ವೀಕೃತವಾಗಿರುವ ಅರ್ಜಿಗಳನ್ನು, ವಿಶೇಷ ಭೂಸ್ವಾಧೀನಾಧಿಕಾರಿ, ತಾಂತ್ರಿಕ ಶಾಖೆಯ ಇಂಜಿನಿಯರ್‌ಗಳು ಹಾಗೂ ಸರ್ವೇಯರ್‌ಗಳು ಕೂಲಂಕಶವಾಗಿ ಪರಿಶೀಲಿಸಿ ನಿಖರ ಮಾಹಿತಿಯೊಂದಿಗೆ ಸಭೆಗೆ ಮಂಡಿಸಿ ಕೈಗೊಂಡ ನಿರ್ಣಯವನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮತಿ ಪಡೆದ ನಂತರವಷ್ಟೇ ಕ್ರಮ ವಹಿಸಬೇಕು ಎಂದು ಸೂಚಿಸಿದ್ದಾರೆ. ಈ ಟಿಪ್ಪಣಿಯ ಪ್ರತಿಯನ್ನು ಕಾರ್ಯದರ್ಶಿ, ವಿಶೇಷ ಭೂಸ್ವಾಧೀನಾಧಿಕಾರಿ, ಎಲ್ಲಾ ವಲಯಾಧಿಕಾರಿಗಳು, ವಿಶೇಷ ತಹಸೀಲ್ದಾರರು ಹಾಗೂ ಮುಡಾ ಕಚೇರಿಯಲ್ಲಿರುವ ಉಪನೋಂದಣಾಧಿಕಾರಿಗಳಿಗೂ ರವಾನಿಸಲಾಗಿದೆ.

ನಿಯಮ ಉಲ್ಲಂಘಿಸಿ ಭೂಮಾಲೀಕರಿಗೆ ಪ್ರೋತ್ಸಾಹಕ ನಿವೇಶನ ಮಂಜೂರಿಗೆ ಬ್ರೇಕ್

ಮೈಸೂರು, ಜೂ.24 (ಆರ್‌ಕೆ)– ವಸತಿ ಬಡಾವಣೆಗಾಗಿ ಪರಸ್ಪರ ಒಪ್ಪಂದದಡಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಈ ಹಿಂದೆಯೇ ಭೂಮಾಲೀಕರಿಗೆ ಪ್ರೋತ್ಸಾಹದಾಯಕ ನಿವೇಶನ ನೀಡಿದ್ದರೂ ನಿಯಮ ಉಲ್ಲಂಘಿಸಿ ಮತ್ತೆ ನಿವೇಶನ ಮಂಜೂರು ಮಾಡಲಾಗುತ್ತಿದೆ ಎಂದು ಮುಡಾ ಅಧ್ಯಕ್ಷ ಕೆ.ಮರೀಗೌಡ ತಿಳಿಸಿದ್ದಾರೆ.

ಈ ಸಂಬಂಧ ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಅವರಿಗೆ ಟಿಪ್ಪಣಿ ಮೂಲಕ ಸೂಚನೆ ನೀಡಿರುವ ಅವರು, ಪ್ರಾಧಿಕಾರದಿಂದ ಪರಸ್ಪರ ಒಪ್ಪಂದದಡಿ ಭೂಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಪ್ರೋತ್ಸಾಹದಾಯಕ ನಿವೇಶನಗಳನ್ನು ಸಂಬಂಧಪಟ್ಟ ಭೂಮಾಲೀಕರಿಗೆ ಮಂಜೂರು ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಆದರೆ, ಈಗಲೂ ಅಂತಹ ಭೂಮಾಲೀಕರಿಗೆ ಕಾನೂನು ಉಲ್ಲಂಘಿಸಿ ಮತ್ತೆ ಪ್ರೋತ್ಸಾಹದಾಯಕ ನಿವೇಶನಗಳನ್ನು ನೀಡಲಾಗುತ್ತಿದೆ ಎಂದು ದೂರುಗಳು ಬಂದ ಹಿನ್ನೆಲೆಯಲ್ಲಿ ಈಗಾಗಲೇ 2024ರ ಮಾರ್ಚ್16ರಂದು ಟಿಪ್ಪಣಿಯಲ್ಲಿ ಮಾಹಿತಿ ನೀಡುವಂತೆ ಸೂಚಿಸಲಾಗಿತ್ತಾದರೂ ಉತ್ತರಿಸಲಿಲ್ಲ ಎಂದು ಮುಡಾ ಅಧ್ಯಕ್ಷರು ದೂರಿದ್ದಾರೆ.

ಪ್ರಾಧಿಕಾರದ ಸಭೆಯ ಅನುಮೋದನೆ ಪಡೆಯದೇ 2021ರಿಂದ ಈವರೆಗೆ ಮಂಜೂರು ಮಾಡಿರುವ ಪ್ರೋತ್ಸಾಹಕ ನಿವೇಶನಗಳ ಪೂರ್ಣ ವಿವರಗಳನ್ನು ಮುಂದಿನ ಪ್ರಾಧಿಕಾರದ ಸಭೆಗೆ ಮಂಡಿಸಬೇಕು. ಈ ಹಿಂದೆ ಪರಸ್ಪರ ಒಪ್ಪಂದದಡಿ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ನಿವೇಶನ ನೀಡಿದ್ದರೂ, ಹೆಚ್ಚುವರಿಯಾಗಿ ಪ್ರೋತ್ಸಾಹದ ನಿವೇಶನ ಹಂಚಿಕೆ ಮಾಡುವ ಮುನ್ನ ವಿಶೇಷ ಭೂಸ್ವಾಧೀನಾಧಿಕಾರಿ, ತಾಂತ್ರಿಕ ಶಾಖೆ ಇಂಜಿನಿಯರ್‌ಗಳು, ಸರ್ವೇಯರ್‌ಗಳಿಂದ ವರದಿ ತರಿಸಿಕೊಂಡು ಕೂಲಂಕಷವಾಗಿ ಪರಿಶೀಲಿಸಿ ಸಭೆಗೆ ಮಂಡಿಸಬೇಕು ಎಂದು ಆಯುಕ್ತರಿಗೆ ಅಧ್ಯಕ್ಷರು ಟಿಪ್ಪಣಿಯಲ್ಲಿ ತಾಕೀತು ಮಾಡಿದ್ದಾರೆ.

ಸಭೆಯಲ್ಲಿ ಚರ್ಚಿಸಿ ಅನುಮೋದನೆ ಪಡೆಯುವವರೆಗೆ ಯಾವುದೇ ಪ್ರೋತ್ಸಾಹಕ ನಿವೇಶನಗಳನ್ನು ಹಂಚಿಕೆ ಮಾಡಬಾರದು ಎಂದು ಮರೀಗೌಡರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಶಿಕ್ಷಣ ತಾರತಮ್ಯ ನಿವಾರಿಸಲು 'ಒಂದು ದೇಶ ಒಂದು ಶಿಕ್ಷಣ' ಅತ್ಯವಶ್ಯಕ

ವಿಚಾರವಾದಿ ಪ್ರೊ.ಕೃಷ್ಣರಾಜ್ ಅಭಿಮತ



ಮಳವಳ್ಳಿಯ ಡಾ.ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಡಾ.ರಾಮಮನೋಹರ ಲೋಹಿಯಾ ವಿಚಾರ ವೇದಿಕೆ ವತಿಯಿಂದ ಪ್ರತಿಭಾ ಪುರಸ್ಕಾರ ಹಾಗೂ ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಸಾಧಕರನ್ನು ಅಭಿನಂದಿಸಲಾಯಿತು

ಮಳವಳ್ಳಿ,ಜೂ.24– ಶಿಕ್ಷಣದಲ್ಲಿ ತಾರತಮ್ಯ ನಿವಾರಿಸಲು ರಾಷ್ಟ್ರದಲ್ಲಿ ಒಂದು ದೇಶ ಒಂದು ಶಿಕ್ಷಣ ಅತ್ಯವಶ್ಯಕವಾಗಿದ್ದು, ಕೇಂದ್ರ ಸರ್ಕಾರ ಜಾರಿ ಮಾಡಬೇಕಿದೆ ಎಂದು ವಿಚಾರವಾದಿ ಪ್ರೊ.ಕೃಷ್ಣರಾಜ್ ಅಭಿಪ್ರಾಯಪಟ್ಟರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಡಾ.ರಾಮಮನೋಹರ ಲೋಹಿಯಾ ವಿಚಾರ ವೇದಿಕೆ ವತಿಯಿಂದ ನಡೆದ 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿರುವ ಮಳವಳ್ಳಿ ತಾಲ್ಲೂಕಿನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾಪುರಸ್ಕಾರ, ವಿಚಾರ ಸಂಕಿರಣ ಹಾಗೂ ಐಎಎಸ್ ಸಾಧಕರಿಗೆ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಗ್ರಾಮೀಣ ಮಕ್ಕಳು ಇಂದಿಗೂ ಬೋರ್ಡ್‌ನಲ್ಲಿ ಅಕ್ಷರ ಕಲಿತರೇ, ಖಾಸಗಿ ಶಾಲೆಗಳಲ್ಲಿ ತಂತ್ರಜ್ಞಾನದ ಮೂಲಕ ಶಿಕ್ಷಣ ಕಲಿಸುತ್ತಿದ್ದಾರೆ, ಸ್ಪರ್ಧಾತ್ಮಕ ಜಗತ್ತಿನಲ್ಲಿ ಉದ್ಯೋಗ ಪಡೆಯಲು ಗ್ರಾಮೀಣ ಮಕ್ಕಳು ಹರಸಾಹಸ ಪಡುವಂತಹ ಸನ್ನಿವೇಷ ಎದುರಾಗಿದ್ದು, ಏಕ ಶಿಕ್ಷಣ ಜಾರಿಯಾದರೇ ಪ್ರತಿಯೊಬ್ಬ ರಿಗೂ ಸಮಾನ ಶಿಕ್ಷಣ ಸಿಗುವಂತಾಗುತ್ತದೆ ಎಂದು ಹೇಳಿದರು.

ದೇಶದಲ್ಲಿ ಅರ್ಥಿಕತೆ, ಶಿಕ್ಷಣ ಅಸಮಾನತೆ ಇರುವುದರಿಂದ ಇಂದಿಗೂ ಕೂಡ ಭಾರತ ದೇಶ ಅಭಿವೃದ್ಧಿಯಲ್ಲಿ ಮುಂದುವರೆಯುತ್ತಿರುವ ರಾಷ್ಟ್ರವಾಗಿದೆ. ದೇಶದ ಬಹುಪಾಲು ಸಂಪತ್ತು ಕೆಲವೇ ಜನರಲ್ಲಿ ಅಡಗಿರುವುದರಿಂದ ದೇಶ ಅಭಿವೃದ್ಧಿಯಲ್ಲಿ ಕುಂಠಿತ ಕಂಡಿದೆ ಎಂದರು.

ಯುಪಿಎಸ್‌ಸಿ ಸಾಧಕ ಬಿ.ಎಸ್.ಚಂದನ್ ಮಾತನಾಡಿ, ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಕಷ್ಟಪಟ್ಟು ಓದಬೇಕು. ಓದಿಗೆ ಅಡೆತಡೆಗಳು ಹೆಚ್ಚಾಗುತ್ತಿರುವುದರಿಂದ ಮೊಬೈಲ್ ಬಳಕೆಯಿಂದ ದೂರವಾಗಬೇಕು. ಕೇವಲ ಅಂಕಗಳಿಸಿ ಉದ್ಯೋಗ ಪಡೆದು ನೆಮ್ಮದಿ ಜೀವನ ಸಾಗಿಸುವುದಕ್ಕೆ ಸೀಮಿತಗೊಳಿಸಬಾರದು, ದೇಶಕ್ಕೆ ತನ್ನದೇ ಆದ ಕೊಡುಗೆಯನ್ನು ಕೊಟ್ಟು ಸಾರ್ಥಕರಾಗಬೇಕೆಂದು ಸಲಹೆ ನೀಡಿದರು.

ಡಾ.ರಾಮ ಮನೋಹರ ಲೋಹಿಯಾ ವಿಚಾರ ವೇದಿಕೆ ರಾಜ್ಯಾಧ್ಯಕ್ಷ ಬಿ.ಎಸ್.ಶಿವಣ್ಣ ಮಾತನಾಡಿ, ಕೂಲಿ ಮಾಡುವವರ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದರೇ ಶ್ರೀಮಂತರ ಮಕ್ಕಳು ಪ್ರತಿಷ್ಠಿತ ಖಾಸಗಿ ಶಾಲೆಗಳಲ್ಲಿ ಓದುತ್ತಿದ್ದು, ಇದರಿಂದಾಗಿ ಶಿಕ್ಷಣದಲ್ಲಿ ತಾರತಮ್ಯ ಹೆಚ್ಚಾಗುತ್ತಿರುವುದರಿಂದ ಬಡವ ಶ್ರೀಮಂತರ ಮಕ್ಕಳಿಗೆ ಸಮಾನ ಶಿಕ್ಷಣ ಸಿಗಬೇಕು, ಶಿಕ್ಷಣವನ್ನು ರಾಷ್ಟ್ರೀಕರಣ ಮಾಡಬೇಕು, ಎಲ್ಲಾ ವಿಷಯ ಪಠ್ಯ ಪುಸ್ತಕಗಳನ್ನು ಆಯಾ ಪ್ರಾದೇಶಕ ಭಾಷೆಯಲ್ಲಿಯೇ ನೀಡಬೇಕೆಂದು ಒತ್ತಾಯಿಸಿದರು.

ಯುಪಿಎಸ್‌ಸಿ ಸಾಧಕ ಚಂದನ್ ಅವರನ್ನು ಅಭಿನಂದಿಸಲಾಯಿತು ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾಪುರಸ್ಕಾರ ನೀಡಿ ಗೌರವಿಸಲಾಯಿತು. ವೇದಿಕೆಯಲ್ಲಿ ಡಿವೈಎಸ್‌ಪಿ ಕೃಷ್ಣಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಚಂದ್ರಪಾಟೀಲ್, ಕುರುಬರ ಸಂಘದ ರಾಜ್ಯ ನಿರ್ದೇಶಕ ಪುಟ್ಟಬಸವಯ್ಯ, ಕ್ಷೇತ್ರ ಸಮನ್ವಯಾಧಿಕಾರಿ ಎಂ.ಕೆ ಶ್ರೀನಿವಾಸ್, ಚಿತ್ರಕಲೆ ನಿರ್ದೇಶಕ ಮಳವಳ್ಳಿ ಶ್ರೀನಿವಾಸ್, ಸಮಾಜ ಸೇವಕ ತಳಗವಾದಿ ಪ್ರಕಾಶ್ ಸೇರಿದಂತೆ ಇತರರು ಇದ್ದರು.

ನೆಟ್ಟ ಗಿಡಗಳನ್ನು ಪೋಷಣೆ ಮಾಡಿದಾಗ ಮಾತ್ರ ಪರಿಸರ ದಿನಾಚರಣೆ ಅರ್ಥಪೂರ್ಣ

ಆರ್‌ಟಿಓ ಅಧಿಕಾರಿಗಳ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ್ ಅಭಿಮತ

ಕೆ.ಆರ್.ಪೇಟೆ,ಜೂ.24– ಕೇವಲ ಗಿಡ ನೆಟ್ಟು ಪರಿಸರ ದಿನಾಚರಣೆ ಮಾಡುವುದಷ್ಟೇ ಅಲ್ಲ. ಜೊತೆಗೆ ನೆಟ್ಟ ಗಿಡಗಳನ್ನು ಪೋಷಣೆ ಮಾಡಬೇಕು. ಆಗಷ್ಟೇ ಅದಕ್ಕೊಂದು ಪರಿಪೂರ್ಣತೆ ಸಿಗುತ್ತದೆ. ಇದರಿಂದ ಮುಂದಿನ ಪೀಳಿಗೆಗೆ ಉತ್ತಮ ವಾತಾವರಣ ಹಾಗೂ ಪರಿಸರವನ್ನು ಕೊಡುಗೆಯಾಗಿ ನೀಡಬಹುದು ಎಂದು ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ್ ಅವರು ಸಲಹೆ ನೀಡಿದರು.

ಕೆ.ಆರ್.ಪೇಟೆ ತಾಲೂಕಿನ ಶೀಳನೆರೆ ಹೋಬಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಪ್ರೌಢ ಶಾಲೆಯಲ್ಲಿ ಸಮಾಗಮ ವೆಲ್‌ಫೇರ್ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಸಿ ನೆಡುವ ಮೂಲಕ ಪರಿಸರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ಹಿಂದಿನಿಂದಲೂ ಪರಿಸರ ಸಂರಕ್ಷಣೆ ಬಗ್ಗೆ ವಿಷಯಗಳು ಚರ್ಚೆಯಾಗುತ್ತಿವೆ ಆದರೆ ಪ್ರಸ್ತುತದಲ್ಲಿ ಆರೋಗ್ಯಕರ ಜೀವನಕ್ಕಾಗಿ ಮರ ಬೆಳೆಸಿ ನಾಡು ಉಳಿಸಿ ಇಲ್ಲದಿದ್ದರೆ ಉತ್ತಮ ಪರಿಸರವಿಲ್ಲದೆ ಬದುಕಲು ಸಾಧ್ಯವಿಲ್ಲ ಎಂದು ಮಲ್ಲಿಕಾರ್ಜುನ್ ಹೇಳಿದರು.

ಕರ್ನಾಟಕ ರಾಜ್ಯ ಮಾರಾಟ ಮಹಾಮಂಡಳಿ ನಿರ್ದೇಶಕ ಎಲ್.ಎಲ್.ಮೋಹನ್ ಮಾತನಾಡಿ, ಹಿಂದೆ ಹಳ್ಳಿಗಳಲ್ಲಿ ತೊಪ್ಪೇ ಸಗಣಿ ತುಂಬುತಿದ್ದ ತಿಪ್ಪೆಗಳು, ಇಂದು ಪ್ಲಾಸ್ಟಿಕ್ ಹಾಕುವ ಗುಂಡಿಗಳಾಗಿವೆ ಹಾಗೆಯೇ ಪ್ರಸ್ತುತ ವರ್ಷಗಳಲ್ಲಿ ಅತೀ ಹೆಚ್ಚು ಉಷ್ಣಾಂಶವನ್ನ ಕಾಣಬೇಕಾಯಿತು, ಇದೆ ರೀತಿ ಮುಂದುವರೆದರೆ ಬದುಕುವ ಆಸೆಯನ್ನೇ ಕಳೆದುಕೊಳ್ಳಬೇಕಾಗುತ್ತದೆ ಆದ್ದರಿಂದ ಆರೋಗ್ಯಕರ ಜೀವನ ನಡೆಸಲು ಪರಿಸರ ಸಂರಕ್ಷಿ ಎಂದು ನುಡಿದರು.

ಶೀಳನೆರೆ ಗ್ರಾಮ ಪಂಚಾಯತಿ ಅಧ್ಯಕ್ಷ ಯುವರಾಜ್ ಮಾತನಾಡಿ, ಗಿಡಗಳ ಸಂರಕ್ಷಣೆಗೆ ಪೂರಕವಾದ ವಾತಾವರಣನ್ನು ಪಂಚಾಯತಿ ವ್ಯಾಪ್ತಿಯಡಿಯಲ್ಲಿ ಕಲ್ಪಿ ಸಲು ಸಂಪೂರ್ಣವಾಗಿ ಪ್ರಯತ್ನಿಸುತ್ತೇನೆಂದು ತಿಳಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಸಮಾಗಮ ವೆಲ್‌ಫೇರ್ ಫೌಂಡೇಶನ್ ನಿರ್ದೇಶಕ ಎಸ್.ಪಾಂಡು, ಗ್ರಾಮೀಣ ಪ್ರದೇಶಗಳಲ್ಲಿಯೂ ಸಹ ಪರಿಸರ ಸಂರಕ್ಷಣೆ ಬಗ್ಗೆ ಅರಿವು ಮೂಡಿಸುವಂತ ಕಾಲಗಟ್ಟಕ್ಕೆ ಬಂದು ತಲುಪಿದ್ದೇವೆ ಹಳ್ಳಿಗಳ ಪರಿಸ್ಥಿಯೇ ಹೀಗಾದರೆ ಪಟ್ಟಣಗಳ ಸ್ಥಿತಿ ಗತಿ ಹೇಗೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾಲೇಜಿನ ಪ್ರಾಂಶುಪಾಲ ಕೆ.ಎಂ.ವಾಸು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಇದೆ ಸಂದರ್ಭದಲ್ಲಿ ಶಾಲಾ, ಕಾಲೇಜು ಮಕ್ಕಳಿಗೆ ಪ್ರಬಂಧ ಹಾಗೂ ಭಾಷಣ ಏರ್ಪಡಿಸಿ ವಿಜೇತರಿಗೆ ಪುಸ್ತಕ ಹಾಗೂ ಟ್ರೋಫಿಗಳನ್ನು ನೀಡಿ ಪ್ರೋತ್ಸಾಯಿಸಲಾಯಿತು

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮಾರಾಟ ಮಹಾಮಂಡಳಿ ನಿರ್ದೇಶಕ ಎಲ್.ಎಲ್.ಮೋಹನ್, ಗ್ರಾ.ಪಂ. ಸದಸ್ಯ ಎಸ್.ಕೆ.ಪ್ರಕಾಶ್, ಮುಖ್ಯ ಶಿಕ್ಷಕಿ ನೀಲಮ್ಮ, ಸಮಾಗಮ ವೆಲ್‌ಫೇರ್ ಫೌಂಡೇಶನ್ ನಿರ್ದೇಶಕಿ ಸುಮಿತ್ರ, ಎಚ್.ವಿ.ವಕೀಲರಾದ ಎಸ್.ರಘು, ಆರ್ಥಿಕ ಸಲಹೆಗರರಾದ ಪ್ರಮೋದ್ ಕೆ.ಆರ್.ಪೇಟೆ, ಕಿರಣ್ ಹಾಗೂ ಕಾಲೇಜಿನ ಉಪನ್ಯಾಸಕರು ಹಾಗೂ ಶಾಲಾ ಶಿಕ್ಷಕರು ಉಪಸ್ಥಿತರಿದ್ದರು.

ಪಿ.ಬಿ.ಯೋಗನಾಥೇಗೌಡ ನಿಧನ



ಪಾಂಡವಪುರ: ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಪಿ.ಬಿ.ಯೋಗನಾಥೇಗೌಡ (70)ಅವರು ಭಾನುವಾರ ರಾತ್ರಿ ನಿಧನರಾದರು.

ಮೃತರು ತಾಲೂಕಿನ ಪಟ್ಟಸೋಮನಹಳ್ಳಿ ಗ್ರಾಮದವರಾಗಿದ್ದು, ಹಲವಾರು ವರ್ಷಗಳ ಕಾಲ ಸಹಕಾರಿ ಕ್ಷೇತ್ರದಲ್ಲಿ ಅನನ್ಯ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಪಟ್ಟಸೋಮನಹಳ್ಳಿ ಗ್ರಾಮದ ಸ್ವಂತ ಜಮೀನಿನಲ್ಲಿ ಸೋಮವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಶರ್ವಾಣಿ



ಭಾರತೀನಗರ, ಜೂ.24– ಭಾರತೀನಗರದ ಓಂಶಾಂತಿ ಮಾರ್ಗದಲ್ಲಿ ವಾಸವಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟ ದಿ.ನಗರಕೆರೆ ನೀಲಕಂಠಯ್ಯನವರ ಪುತ್ರಿ ಬಿಜೆಪಿ ಮಾಜಿ ರಾಜ್ಯ ಕಾರ್ಯದರ್ಶಿ ಶರ್ವಾಣಿ (55) ಸೋಮವಾರ ಮಧ್ಯಾಹ್ನ 3 ಗಂಟೆಯಲ್ಲಿ ಮೃತಪಟ್ಟಿದ್ದಾರೆ.

ಮೃತರಿಗೆ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಮಿತ್ರರನ್ನು ಹೊಂದಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮವಾದ ನಗರಕೆರೆ ಗ್ರಾಮದ ಜಮೀನಿನಲ್ಲಿ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಜರುಗಲಿದೆ ಎಂದು ನಗರಕೆರೆ ಪಟೇಲ್ ಕುಟುಂಬ ವರ್ಗದವರು ತಿಳಿಸಿದ್ದಾರೆ.

ಚಟ್ಟಂಗೆರೆ ಬೈರೇಗೌಡ



ಕೆ.ಆರ್.ಪೇಟೆ,ಜೂ.24–ತಾಲೂಕಿನ ಚಟ್ಟಂಗೆರೆ ಗ್ರಾಮದ ನಿವಾಸಿ, ಕೋರಮಂಡಲ್ ಸಕ್ಕರೆ ಕಾರ್ಖಾನೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಚಟ್ಟಂಗೆರೆ ನಾಗೇಶ್ ಅವರ ತಂದೆ ಬೈರೇಗೌಡ(95) ಅವರು ನಿಧನರಾದರು.

ಅಂತ್ಯಕ್ರಿಯೆ ಸೋಮವಾರ ಸಂಜೆ ಚಟ್ಟಂಗೆರೆ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕನಗನಮರಡಿ ಗ್ರಾಪಂ ಅಧ್ಯಕ್ಷೆಯಾಗಿ ಪ್ರಮೀಳಾ ಹೇಮಣ್ಣ



ಪಾಂಡವಪುರ ತಾಲೂಕಿನ ಕನಗನಮರಡಿ ಗ್ರಾಪಂನ ನೂತನ ಅಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾದ ಪ್ರಮೀಳ ಹೇಮಣ್ಣ ಅವರನ್ನು ಶಾಸಕ ದರ್ಶನ್‌ಪುಟ್ಟಣ್ಣಯ್ಯ ಸೇರಿದಂತೆ ಮುಖಂಡರು ಅಭಿನಂಧಿಸಿದರು.

ಪಾಂಡವಪುರ: ತಾಲೂಕಿನ ಕನಗನಮರಡಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷೆಯಾಗಿ ರೈತಸಂಘ ಬೆಂಬಲಿತ ಅಭ್ಯರ್ಥಿ ಪ್ರಮೀಳ ಹೇಮಣ್ಣ ಅವರು ಸೋಮವಾರ ಅವಿರೋಧವಾಗಿ ಆಯ್ಕೆಯಾದರು.

ಗ್ರಾಪಂನ ಹಿಂದಿನ ಅಧ್ಯಕ್ಷೆ ಭಾಗ್ಯಮ್ಮ ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಸೋಮವಾರ ಚುನಾವಣೆ ನಿಗಧಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಬಯಸಿ ಪ್ರಮೀಳ ನಾಮಪತ್ರ ಸಲ್ಲಿಸಿದರು. ಈ ಹಿನ್ನೆಲೆಯಲ್ಲಿ ಗ್ರಾಪಂನ ಅಧ್ಯಕ್ಷೆಯಾಗಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿ ಕಾರಿಯಾದ ತಾಪಂ ನರೇಗ ಸಹಾಯಕ ನಿರ್ದೇಶಕ ಸುರೇಂದ್ರ ಅವರು ಘೋಷಿಸಿದರು.

ಈ ವೇಳೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಕನಗಮರಡಿ ಗ್ರಾಪಂ ಅಧ್ಯಕ್ಷೆಯಾಗಿ ಪ್ರಮೀಳ ಹೇಮಣ್ಣ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅವರು ಮುಂದಿನ ದಿನಗಳಲ್ಲಿ ಗ್ರಾಮಗಳ ಅಭಿವೃದ್ಧಿಗೆ ಸದಸ್ಯರು ಜತೆಗೂಡಿ ಕೆಲಸ ಮಾಡಬೇಕು, ಸರಕಾರದ ಯೋಜನೆ, ಸವಲತ್ತುಗಳನ್ನು ಜನರಿಗೆ ತಲುಪಿಸುವ ಪ್ರಾಮಾಣಿಕ ಕೆಲಸವನ್ನು ನಾವೆಲ್ಲರು ಜತೆಗೂಡಿ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಸಂದರ್ಭದಲ್ಲಿ ಗ್ರಾಪಂ ಉಪಾಧ್ಯಕ್ಷ ರಂಗಸ್ವಾಮಿ, ಸದಸ್ಯರಾದ ಸಿ.ಬಿ.ತಮ್ಮಣ್ಣ, ಎಂ.ಕೆ.ಸ್ವಾಮೀಗೌಡ, ಸುದರ್ಶನ್, ಈರಾಚಾರಿ, ಅಭಿ, ವಸಂತ, ಜಯಲಕ್ಷ್ಮೀ, ಪಿಡಿಓ ಪುರುಷೋತ್ತಮ್, ಕಾರ್ಯದರ್ಶಿ ಜಯರಾಮು, ಮುಖಂಡರಾದ ಧರ್ಮ ರತ್ನಾಕರ, ಬಲರಾಮು, ಸೋಮಣ್ಣ, ಕೆ.ಜೆ.ಚನ್ನೇಗೌಡ, ಹೇಮಣ್ಣ, ಸಿ.ಸ್ವಾಮೀಗೌಡ ಸೇರಿದಂತೆ ಹಲವರು ಇದ್ದರು.

ಬಂಡಿಹೊಳೆ ಗ್ರಾಮದಲ್ಲಿ ಸರಣಿ ಕಳ್ಳತನ

ಕೆ.ಆರ್.ಪೇಟೆ, ಜೂ.24: ತಾಲೂಕಿನ ಬಂಡಿಹೊಳೆ ಗ್ರಾಮದಲ್ಲಿ ದುಷ್ಕರ್ಮಿಗಳು ಅಂಗಡಿ ಮಳಿಗೆಗಳ ರೋಲಿಂಗ್ ಶೆಲ್ಟರ್‌ಗಳನ್ನು ಮೀಟಿ ಹಾಗೂ ಶಾಲೆ, ಹೋಟೆಲ್‌ಗಳ ಬಾಗಿಲು ಮುರಿದು ಸರಣಿ ಕಳ್ಳತನ ಮಾಡಿ ದ್ದಾರೆ. ಕಂಪ್ಯೂಟರ್, ಲ್ಯಾಪ್‌ಟಾಪ್, ಮೊಬೈಲ್‌ಗಳು ಸೇರಿದಂತೆ ಲಕ್ಷಾಂತರ ರೂ ಮೌಲ್ಯದ ವಿವಿಧ ಮಾರಾಟ ವಸ್ತುಗಳನ್ನು ಕಳವು ಮಾಡಲಾಗಿದೆ.

ಬಂಡಿಹೊಳೆ ಗ್ರಾಮದ ಮಂಟೈ ಮಂಜುನಾಥ್ ಕಾಂಪ್ಲೆಕ್ಸ್‌ನಲ್ಲಿರುವ ಐಯ್ಯಂಗಾರ್ಸ್ ಬೇಕರಿಯ ರೋಲಿಂಗ್ ಶೆಲ್ಟರ್ ಮುರಿದು ಒಳನುಗ್ಗಿ 15ಸಾವಿರ ರೂ ನಗದು, ಬೇಕರಿ ಐಟಂಗಳನ್ನು ಕಳವು ಮಾಡಿದ್ದಾರೆ. ಶಿವರಾಂ ಎಂಬುವವರ ಮೊಬೈಲ್ ಅಂಗಡಿಗೆ ನುಗ್ಗಿ ಲಕ್ಷಾಂತರ ರೂ ಮೌಲ್ಯದ ಏಳೆಂಟು ಮೊಬೈಲ್‌ಗಳನ್ನು ಕಳ್ಳತನ ಮಾಡಿದ್ದಾರೆ. ನಾಗೇಶ್ ಎಂಬುವವರ ಚಿಲ್ಲರೆ ಅಂಗಡಿಗೆ ನುಗ್ಗಿ 15 ಸಾವಿರ ರೂ ನಗದು, ಸಿಗರೇಟ್ ಪ್ಯಾಕ್‌ಗಳು, ಮಸಾಲೆ ಪದಾರ್ಥಗಳ ಪ್ಯಾಕ್‌ಗಳನ್ನು ಕಳವು ಮಾಡಿದ್ದಾರೆ. ಪ್ರಸನ್ನ ಎಂಬುವವರ ಹೋಟೆಲ್‌ಗೆ ನುಗ್ಗಿ 8ಸಾವಿರ ರೂ ನಗದು ಹಾಗೂ ಅಡುಗೆ ಪದಾರ್ಥಗಳನ್ನು ಕಳವು ಮಾಡಿದ್ದಾರೆ. ಬಂಡಿಹೊಳೆ ಸುಮೇಧ ಕಾನ್ವೆಂಟ್ ಬಾಗಿಲು ಬೀಗ ಮುರಿದು ಒಳ ನುಗ್ಗಿರುವ ದುಷ್ಕರ್ಮಿಗಳು ಶಾಲೆಯಲ್ಲಿದ್ದ ಕಂಪ್ಯೂಟರ್‌ಗಳು ಹಾಗೂ ಲ್ಯಾಪ್‌ಟಾಪ್‌ಗಳನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದಾರೆ.

ದುಷ್ಕರ್ಮಿಗಳು ಕಳ್ಳತನ ಮಾಡುತ್ತಿರುವ ದೃಶ್ಯವು ಮಂಜುನಾಥ್ ಕಾಂಪ್ಲೆಕ್ಸ್‌ನಲ್ಲಿರುವ ಸಿಸಿ ಕ್ಯಾಮರಾಗಳಲ್ಲಿ ಸೆರೆಯಾಗಿದ್ದು ಕೂಡಲೇ ಆರೋಪಿಗಳನ್ನು ಬಂಧಿಸಬೇಕು ಎಂದು ಬಂಡಿಹೊಳೆ ಗ್ರಾಮಸ್ಥರು ಪೊಲೀಸ್ ಅಧಿಕಾರಿಗಳನ್ನು ಒತ್ತಾಯ ಮಾಡಿದ್ದಾರೆ. ಘಟನೆ ಕುರಿತು ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಐವರು ಸರಗಳ್ಳರ ಬಂಧನ; 15.50 ಲಕ್ಷದ ಚಿನ್ನಾಭರಣ ವಶಕ್ಕೆ

ಸಿಸಿಬಿ, ಅಶೋಕಪುರಂ ಠಾಣೆ ಪೊಲೀಸರ ಪ್ರತ್ಯೇಕ ಕಾರ್ಯಾಚರಣೆ



ಮೈಸೂರು, ಜೂ.24(ಎಸ್‌ಬಿಡಿ)– ಮೈಸೂರು ಪೊಲೀಸರು ಐವರು ಸರಗಳ್ಳರನ್ನು ಬಂಧಿಸಿ, 15.50 ಲಕ್ಷ ರೂ. ಬೆಲೆಬಾಳುವ ಚಿನ್ನಾಭರಣವನ್ನು ವಶಪಡಿಸಿಕೊಂಡಿದ್ದಾರೆ.

ಸಿಸಿಬಿ ಪೊಲೀಸರು ಇಬ್ಬರು ಖದೀಮರನ್ನು ಬಂಧಿಸಿ, 10 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ 2 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡರೆ, ಅಶೋಕಪುರಂ ಠಾಣೆ ಪೊಲೀಸರನ್ನೊಳಗೊಂಡ ವಿಶೇಷ ತಂಡ ಮೂವರನ್ನು ಬಂಧಿಸಿ, 5.50 ಲಕ್ಷ ರೂ. ಮೌಲ್ಯದ ಎರಡು ಚಿನ್ನದ ಸರಗಳನ್ನು ವಶಕ್ಕೆ ಪಡೆದಿದೆ.

ಕಾರ್ಯಾಚರಣೆ–1: ನಗರದ ಸಿಸಿಬಿ ಘಟಕದ ಅಧಿಕಾರಿ ಮತ್ತು ಸಿಬ್ಬಂದಿ ಖಚಿತ ಮಾಹಿತಿ ಮೇರೆಗೆ ಜೈಲಿನಿಂದ ಹೊರಬಂದಿದ್ದ ಇಬ್ಬರು ಹಳೆಯ ಖದೀಮರನ್ನು ಅಶೋಕ ರಸ್ತೆಯಲ್ಲಿ ಜೂ.22ರಂದು ವಶಕ್ಕೆ ಪಡೆದು, ವಿಚಾರಣೆಗೆ ಒಳಪಡಿಸಿದ್ದಾರೆ. ಆ ವೇಳೆ ಸರಗಳ್ಳತನ ಮತ್ತು ದ್ವಿಚಕ್ರ ವಾಹನ ಕಳ್ಳತನ ಮಾಡಿದ್ದಾಗಿ ತಿಳಿಸಿದ್ದು, ಅವರಿಂದ ಸುಮಾರು 10 ಲಕ್ಷ ರೂ. ಬೆಲೆಯ 117 ಗ್ರಾಂ ಚಿನ್ನಾಭರಣ ಹಾಗೂ 2 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಈ ಮೂಲಕ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯ 2, ಆಲನಹಳ್ಳಿ ಠಾಣೆಯ 1 ಸರಗಳ್ಳತನ ಪ್ರಕರಣಗಳು, ಮೇಟಗಳ್ಳಿ ಠಾಣೆಯ 1 ದ್ವಿಚಕ್ರ ವಾಹನ ಕಳ್ಳತನ ಹಾಗೂ ರಾಮನಗರ ಜಿಲ್ಲೆ, ಹಾರೋಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ 1 ದೇವಸ್ಥಾನ ಕಳ್ಳತನ ಪ್ರಕರಣ ಸೇರಿದಂತೆ ಒಟ್ಟು 5 ಪ್ರಕರಣಗಳು ಪತ್ತೆಯಾಗಿವೆ.

ಡಿಸಿಪಿಗಳಾದ ಮುತ್ತುರಾಜ್ ಮತ್ತು ಎಸ್.ಜಾಹ್ನವಿ ಮಾರ್ಗದರ್ಶನ, ಸಿಸಿಬಿ ಎಸಿಪಿ ಎಸ್.ಎನ್. ಸಂದೇಶ್ ಕುಮಾರ್ ಉಸ್ತುವಾರಿಯಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಎಂ.ಮೋಹನ್‌ಕುಮಾರ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ, ಜೈಲಿನಿಂದ ಹೊರಬಂದು ಕಳ್ಳತನ ಚಾಳಿಯನ್ನು ಮುಂದುವರೆಸಿದ್ದ ಖದೀಮರನ್ನು ಮತ್ತೆ ಜೈಲಿಗಟ್ಟಿದೆ.

ಕಾರ್ಯಾಚರಣೆ–2: ಮೈಸೂರಿನ ಅಶೋಕಪುರಂ ಠಾಣೆ ಪೊಲೀಸರನ್ನೊಳಗೊಂಡ ವಿಶೇಷ ತಂಡ, ಮೂವರು ಸರಗಳ್ಳರನ್ನು ಬಂಧಿಸಿ, ಸುಮಾರು 5.50 ಲಕ್ಷ ಮೌಲ್ಯದ ಎರಡು ಚಿನ್ನದ ಸರಗಳನ್ನು ವಶಪಡಿಸಿಕೊಂಡಿದೆ.

ಶ್ರೀರಂಗಪಟ್ಟಣ ಮೂಲದ ಈ ಮೂವರೂ 20ರಿಂದ 22 ವಯಸ್ಸಿನವರು. ವಿದ್ಯಾಭ್ಯಾಸ ಮೊಟಕುಗೊಳಿಸಿ, ಕೂಲಿ ಕೆಲಸ ಮಾಡಿಕೊಂಡಿದ್ದ ಇವರು, ಬೈಕ್‌ನಲ್ಲಿ ಮೈಸೂರಿಗೆ ಬಂದು ಅಶೋಕಪುರಂ ಹಾಗೂ ವಿವಿ ಪುರಂ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸರಗಳವು ಮಾಡಿದ್ದರು ಎಂದು ಪೊಲೀಸರ ವಿಚಾರಣೆಯಲ್ಲಿ ತಿಳಿಸಿದ್ದಾರೆ.

ಸರಗಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಅಶೋಕಪುರಂ, ಕೃಷ್ಣರಾಜ ಪೊಲೀಸ್ ಠಾಣೆ ಹಾಗೂ ಕೃಷ್ಣರಾಜ ಉಪವಿಭಾಗ ಅಪರಾಧ ವಿಭಾಗದ ಪೊಲೀಸರ ವಿಶೇಷ ತಂಡ ಜೂ.21ರಂದು ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಅಶೋಕಪುರಂನಲ್ಲಿ ಅನುಮಾನಾಸ್ಪದವಾಗಿ ಬೈಕ್‌ನಲ್ಲಿ ಓಡಾಡುತ್ತಿದ್ದ ಯುವಕನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಆತ ಸರಗಳ್ಳ ಎಂಬುದು ತಿಳಿದು ಬಂದಿದೆ. ಅವನನ್ನು ಬಂಧಿಸಿ, ವಿಚಾರಣೆ ಮುಂದುವರೆಸಿದ ಸಂದರ್ಭದಲ್ಲಿ ನೀಡಿದ ಮಾಹಿತಿ ಮೇರೆಗೆ ಮರುದಿನ ಮತ್ತಿಬ್ಬರು ಸಹಚರರನ್ನು ಬಂಧಿಸಲಾಗಿದೆ. ಈ ಮೂಲಕ ಅಶೋಕಪುರಂ ಹಾಗೂ ವಿವಿ ಪುರಂ ಠಾಣೆ ವ್ಯಾಪ್ತಿಯ ತಲಾ ಒಂದು ಪ್ರಕರಣಗಳನ್ನು ಭೇದಿಸಿದಂತಾಗಿದೆ.

ನಗರದ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ ಮಾರ್ಗದರ್ಶನ, ಕೃಷ್ಣರಾಜ ಉಪವಿಭಾಗದ ಎಸಿಪಿ ಹೆಚ್.ಬಿ.ರಮೇಶ್‌ಕುಮಾರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಅಶೋಕಪುರಂ ಠಾಣೆ ಇನ್ಸ್‌ಪೆಕ್ಟರ್ ಸಿ.ಈ.ರೋಹಿತ್, ಕೃಷ್ಣರಾಜ ಠಾಣೆ ಇನ್ಸ್‌ಪೆಕ್ಟರ್ ಎನ್.ಸಿ.ನಾಗೇಗೌಡ, ಸಬ್‌ಇನ್ಸ್‌ಪೆಕ್ಟರ್‌ಗಳಾದ ಹರೀಶ್, ಲಕ್ಕಪ್ಪ ಕುಕ್ಕಡಿ, ಪ್ರತಿಭಾ ಜಂಗವಾಡ, ಸಿಬ್ಬಂದಿ ರಾಜು, ಶ್ರೀನಿವಾಸ್ ಪ್ರಸಾದ್, ಲೋಕೇಶ್, ಗಿರೀಶ್, ಸುಹಾಸ್, ವರುಣ್, ಬಸವರಾಜು ಮುನ್ಯಾಳ್, ಗಂಗರಾಜು, ಸಚಿನ್, ಪ್ರಸನ್ನಕುಮಾರ್, ಪ್ರಸನ್ನಕುಮಾರ್ ಭಗತ್, ಮೊಕದ್ದರ್ ಶರೀಫ್, ಸಿದ್ದರಾಮಪ್ಪ ಪೂಜಾರಿ, ಕಾರ್ತಿಕ್, ಪ್ರದೀಪ್, ಭೀಮಶಂಕರ್ ಭಾಗವಹಿಸಿದ್ದರು.

ಗುಂಡ್ಲುಪೇಟೆಯಲ್ಲಿ ಅದ್ದೂರಿ ಬಸವ ಜಯಂತಿ



ಗುಂಡ್ಲುಪೇಟೆಯಲ್ಲಿ ನಡೆದ ಬಸವೇಶ್ವರರ ಮೆರವಣಿಗೆಯಲ್ಲಿ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ಭಾಗವಹಿಸಿದ್ದರು.

ಗುಂಡ್ಲುಪೇಟೆ, ಜೂ.24–ವೀರಶೈವ–ಲಿಂಗಾಯತ ಮಹಾಸಭಾ ಹಾಗೂ ಸಮುದಾಯದ ವಿವಿಧ ಸಂಘಟನೆಗಳ ವತಿಯಿಂದ ಪಟ್ಟಣದಲ್ಲಿ ಸೋಮವಾರ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಪಟ್ಟಣದ ಜೆಎಸ್‌ಎಸ್ ಕಾಲೇಜು ಆವರಣದಲ್ಲಿ ಬೆಳ್ಳಿ ರಥದಲ್ಲಿ ಬಸವೇಶ್ವರ ಉತ್ಸವ ಮೂರ್ತಿಗೆ ಸೋಮಹಳ್ಳಿ ವೀರಸಿಂಹಾಸನ ಶಿಲಾ ಮಠಾಧ್ಯಕ್ಷರಾದ ಶ್ರೀ ಸಿದ್ದಮಲ್ಲಪ್ಪಸ್ವಾಮೀಜಿ, ಚಿಕ್ಕತುಪ್ಪರು ಮಠದ ಶ್ರೀ ಚನ್ನವೀ ರಸ್ವಾಮೀಜಿ, ಗೋಪಾಲಪುರ ಮಠದ ಶ್ರೀಗಳು ಪುಷ್ಪಾರ್ಚನೆ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ನಂತರ ಬಸವಣ್ಣನವರ ಭಾವಚಿತ್ರವುಳ್ಳ ಭಾವುಟ, ಅಲಂಕೃತ ಎತ್ತಿನ ಗಾಡಿಗಳು, ನಂದಿಧ್ವಜ, ವೀರಗಾಸೆ, ಗೊರವರ ಕುಣಿತ, ಜನಪದ ಕಲಾತಂಡಗಳೊದಿಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಇದೇ ವೇಳೆ ವೀರಶೈವ ಸಂಘಟನೆಯ ಸಹಸ್ರಾರು ಯುವಕರು ಹಾಗೂ ಮುಖಂಡರು ವಾದ್ಯನಾದಕ್ಕೆ ಹೆಜ್ಜೆ ಹಾಕಿದರು. ಕನಕದಾಸ ವೃತ್ತ, ವಿಶ್ವಗುರು ಬಸವೇಶ್ವರ ವೃತ್ತ, ಹಳೇ ಬಸ್ ನಿಲ್ದಾಣ, ಕಿತ್ತೂರು ರಾಣಿ ಚೆನ್ನಮ್ಮ ರಸ್ತೆ, ಕೋಡಹಳ್ಳಿ ಸರ್ಕಲ್, ಚಾಮರಾಜನಗರ ಜೋಡಿ ರಸ್ತೆ ಮೂಲಕ ಮೆರವಣಿಗೆ ಸಾಗಿತು. ಸೋಮೇಶ್ವರ ವಿದ್ಯಾರ್ಥಿನಿಲಯದಲ್ಲಿ ಪ್ರಸಾದ ವಿನಿಯೋ ಗಿಸಲಾಯಿತು.

ಮೆರವಣಿಗೆಯಲ್ಲಿ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಮಾಜಿ ಶಾಸಕ ಸಿ.ಎಸ್.ನಿರಂಜನ ಕುಮಾರ್, ಚಾಮುಲ್ ನಿರ್ದೇಶಕ ಹೆಚ್.ಎಸ್. ನಂಜುಂಡ ಪ್ರಸಾದ್, ಮಹಾಸಭಾ ಜಿಲ್ಲಾಧ್ಯಕ್ಷ ನಂದೀಶ್, ತಾಪಂ ಮಾಜಿ ಅಧ್ಯಕ್ಷ ರಾದ ನಟೇಶ್, ಮಧುಶಂಕರ್, ಬಸವ ಕೇಂದ್ರದ ಗೌರವಾಧ್ಯಕ್ಷ ಕೊಡಸೋಗೆ ಶಿವಬಸಪ್ಪ, ಯುವ ಘಟಕದ ಜಿಲ್ಲಾಧ್ಯಕ್ಷ ಮನು ಶ್ಯಾನುಭೋಗ್, ತಾಲೂಕು ಅಧ್ಯಕ್ಷ ಬಸವಣ್ಣ, ತಾಲೂಕು ಬಸವ ಕೇಂದ್ರದ ಅಧ್ಯಕ್ಷ ಲಕ್ಕೂರು ಚಂದ್ರು, ಮುಖಂ ಡರಾದ ಕೆ.ಎಸ್.ಮಹೇಶ್, ಚನ್ನಂಜಯ್ಯನ ಹುಂಡಿ ಮಲ್ಲು, ಕಮರಹಳ್ಳಿ ರವಿ, ಹಂಗಳ ಪ್ರಣಯ್, ಗೋಪಾಲಪುರ ಲೋಕೇಶ್, ವೀರನಪುರ ಗುರು, ವೀ.ನಾ.ಚಿದಾ ನಂದ್, ಚಂದ್ರು, ಕೆರೆಹಳ್ಳಿ ನವೀನ್, ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಮಂಗಲದಲ್ಲಿ ಭಗೀರಥ ಜಯಂತಿ ಆಚರಣೆ



ಚಾಮರಾಜನಗರ, ಜೂ.24–ತಾಲೂಕಿನ ಮಂಗಲ ಗ್ರಾಮದಲ್ಲಿ ಮಹರ್ಷಿ ಭಗೀರಥ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಭಗೀರಥ ಮಹರ್ಷಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಭಗೀರಥರು ಆದರ್ಶ ಪುರುಷರಾಗಿದ್ದು ಲೋಕಕಲ್ಯಾಣಕ್ಕಾಗಿ ಶಿವನನ್ನು ಪ್ರಾರ್ಥಿಸಿ ಗಂಗೆಯನ್ನು ಧರಗೆ ತಂದ ಮಹಾನ್ ಋಷಿಗಳು ಎಂದು ಸ್ಮರಿಸಿದರು.

ಮಹರ್ಷಿಗಳ ಋಷಿ ಸದೃಶ ಜೀವನವನ್ನು ಪ್ರತಿಯೊಬ್ಬರು ಅನುಸರಿಸಿ ಪಾಲಿಸಿದಾಗ ಆಚರಣೆಗಳಿಗೆ ಅರ್ಥ ಬರುತ್ತದೆ. ಉಪ್ಪಾರ ಸಮುದಾಯ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಿ, ಅವರನ್ನು ಸಮಾಜದ ಮುಖ್ಯವಾಹಿನಿಗೆ ತಂದು ಸುಶಿಕ್ಷಿತ ಸಮಾಜ ನಿರ್ಮಾಣದತ್ತ ಗಮನ ಹರಿಸಬೇಕೆಂದು ಕಿವಿಮಾತು ಹೇಳಿದರು.

ಇದೇ ಸಂದರ್ಭದಲ್ಲಿ ಭಗೀರಥ ಮಹರ್ಷಿಗಳ ಭಾವಚಿತ್ರವನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಮಾರ್ಗ ಉದ್ದಕ್ಕೂ ತಳಿರು–ತೋರಣದೊಂದಿಗೆ ಶೃಂಗರಿಸಿ, ರಂಗೋಲಿ ಚಿತ್ತಾರದೊಂದಿಗೆ ಅದ್ದೂರಿಯಾಗಿ ಮೆರವಣಿಗೆ ಸಾಗಿತು.

ಅಯ್ಯನ ಸರಗೂರು ಮಠದ ಶ್ರೀ ಮಹದೇವ ಸ್ವಾಮೀಜಿ, ಮಂಜುನಾಥಸ್ವಾಮಿ, ಗ್ರಾಪಂ ಅಧ್ಯಕ್ಷ ಅಣ್ಣಪ್ಪಸ್ವಾಮಿ, ಮಾಜಿ ಅಧ್ಯಕ್ಷ ಶಿವಣ್ಣ, ಜಿಪಂ ಮಾಜಿ ಅಧ್ಯಕ್ಷ ಸಿ.ಎ.ಮಹದೇವಶೆಟ್ಟಿ, ಮಂಗಲ ಶಿವಕುಮಾರ್, ಯ.ಕ್ಯಾತಶೆಟ್ಟಿ, ಮಹದೇವಶೆಟ್ಟಿ, ಚೌಡಶೆಟ್ಟಿ, ನಾರಾಯಣಸ್ವಾಮಿ, ಗೋಪಾಲಕೃಷ್ಣ, ದೂರೆರಾಜು, ಮಂಗಲ ಶಿವಣ್ಣ, ಬಾಗಳ್ಳಿ ರೇವಣ್ಣ, ಮಹೇಶ ಹಾಜರಿದ್ದರು.

ಸದಾ ಚಲನಾತ್ಮಕವಾಗಿದ್ದರೆ ಸಾಧನೆ ಸಾಧ್ಯ

ವಿದ್ಯಾರ್ಥಿಗಳಿಗೆ ರಾಮಕೃಷ್ಣ ವಿದ್ಯಾಶಾಲಾ ಕರಸ್ಪಾಂಡೆಂಟ್ ಶ್ರೀ ಸ್ವಾಮಿ ಯುಕ್ತೇಶಾನಂದಜೀ ಸಲಹೆ



ಮೈಸೂರಿನ ವಿಜಯ ವಿಠಲ ವಿದ್ಯಾಶಾಲೆಯಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳೊಂದಿಗೆ ರಾಮಕೃಷ್ಣ ವಿದ್ಯಾಶಾಲೆಯ ಕರಸ್ಪಾಂಡೆಂಟ್ ಶ್ರೀ ಸ್ವಾಮಿ ಯುಕ್ತೇಶಾನಂದಜೀ, ಸಂಸ್ಥೆಯ ಗೌರವ ಕಾರ್ಯದರ್ಶಿ ಆರ್.ವಾಸುದೇವ್ ಭಟ್ ಮತ್ತಿತರರಿದ್ದಾರೆ.

ಮೈಸೂರು, ಜೂ.24(ಎಸ್‌ಬಿಡಿ)– ಅಚಲವಾಗಿ ಕೂರಬೇಡಿ, ಗಡಿಯಾರದಂತೆ ಚಲನಾತ್ಮಕವಾಗಿ ಕೆಲಸ ಮಾಡಿ ಎಂದು ನಗರದ ರಾಮಕೃಷ್ಣ ವಿದ್ಯಾ ಶಾಲೆಯ ಕರಸ್ಪಾಂಡೆಂಟ್ ಶ್ರೀ ಸ್ವಾಮಿ ಯುಕ್ತೇಶಾ ನಂದಜೀ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ವಿಜಯ ವಿಠಲ ವಿದ್ಯಾ ಶಾಲೆಯಲ್ಲಿ ಏರ್ಪಡಿಸಿದ್ದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಬಂಡೆಯಂತೆ ಅಚಲವಾಗಿ ಯಾರೂ ಕೂಡಬಾರದು. ಗಡಿಯಾರದಂತೆ ಚಲನಾತ್ಮಕವಾಗಿ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದರು.

ಇಂಜಿನಿಯರಿಂಗ್, ವೈದ್ಯ ವೃತ್ತಿ ಮಾತ್ರವಲ್ಲದೆ ಬೇರೆ ಕ್ಷೇತ್ರಗಳಲ್ಲೂ ತೊಡಗಿಸಿಕೊಳ್ಳಬೇಕು. ಮುಖ್ಯವಾಗಿ ನಮ್ಮ ಗುರುತು ಶಕ್ತಿಶಾಲಿ, ಪವಿತ್ರ ಹಾಗೂ ದಿವ್ಯಾತ್ಮವಾಗಿರಬೇಕು. ಮನಸ್ಸನ್ನು ತಯಾರಿ ಮಾಡಿಕೊಳ್ಳುವುದು ವಿದ್ಯಾರ್ಥಿ ಜೀವನದ ಮೊದಲ ಲಕ್ಷ್ಯ ಹಾಗೂ ಆಗತ್ಯ ಪ್ರಜ್ಞೆ ಹಾಗೂ ಜ್ಞಾನ ಎಂದಿಗೂ ಹೊರೆಯಾಗುವುದಿಲ್ಲ. ಜ್ಞಾನ ಲಭಿಸಬೇಕಾದರೆ ಗುರು–ಹಿರಿಯರು, ತಂದೆ–ತಾಯಿಯರಲ್ಲಿ ವಿನಯವಂತರಾಗಿರಬೇಕು ಎಂದು ಸಲಹೆ ನೀಡಿದರು.

ಮೂರು ಮೌಲ್ಯಗಳಿರಲಿ: ವಿಜಯ ವಿಠಲ ವಿದ್ಯಾ ಸಂಸ್ಥೆಗಳ ಗೌರವ ಕಾರ್ಯದರ್ಶಿ ಆರ್.ವಾಸುದೇವ್ ಭಟ್ ಮಾತನಾಡಿ, ಶ್ರದ್ಧೆ, ಆಸಕ್ತಿ ಹಾಗೂ ನಿಷ್ಠೆ ಇದ್ದರೆ ಸಾಧನೆಯ ದಾರಿ ಸುಗಮವಾಗಿರುತ್ತದೆ. ನಿಮ್ಮ ಭವಿಷ್ಯ ಉಜ್ವಲವಾಗಿರಲಿ. ಅಧ್ಯಯನ ಉದ್ಯೋಗ ಪಡೆಯಲಷ್ಟೇ ಸೀಮಿತವಾಗಿರದೆ, ಜೀವನದುದ್ದಕ್ಕೂ ಓದುವುದನ್ನು ರೂಢಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ 26 ಹಾಗೂ ಪಿಯುಸಿಯಲ್ಲಿ ಉತ್ತಮ ಅಂಕ ಪಡೆದ 23 ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ವಿಜಯ ವಿಠಲ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್, ಶಾಲೆಯ ಪ್ರಾಂಶುಪಾಲರಾದ ಎಸ್.ಎ.ವೀಣಾ ಸೇರಿದಂತೆ ಶಿಕ್ಷಕ ವರ್ಗ, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

ಸರ್ವೋದಯ ಮಹಾವಿದ್ಯಾಲಯದಲ್ಲಿ ಯೋಗ ದಿನಾಚರಣೆ...



ವಿರಾಜಪೇಟೆ ಪಂಜರುಪೇಟೆಯ ಸರ್ವೋದಯ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಪ್ರಾಂಶುಪಾಲೆ ಡಾ.ಎಂ.ವಾಣಿ, ಯೋಗ ಪ್ರಶಸ್ತಿ ವಿಜೇತೆ ವಿ.ಕೆ.ಲಲಿತಾ, ಯೋಗ ಶಿಕ್ಷಣ ಉಪಸಂ ಯೋಜಕರಾದ ಕೆ.ಎಸ್.ರಾಜಶೇಖರ್, ಪದ್ಮಲತಾ, ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.


ಮೈಸೂರು ಮಿತ್ರ

ಮಂಗಳವಾರ 25 ಜೂನ್ 2024

ದೇಶ - ವಿದೇಶ

ರಷ್ಯಾದಲ್ಲಿ ಉಗ್ರರ ಗುಂಡಿನ ದಾಳಿಗೆ 15 ಪೊಲೀಸ್ ಅಧಿಕಾರಿಗಳು ಸೇರಿ ಹಲವರು ಬಲಿ

ಡಾಗೆಸ್ತಾನ್ (ರಷ್ಯಾ): ರಷ್ಯಾದ ದಕ್ಷಿಣ ಗಣರಾಜ್ಯವಾದ ಡಾಗೆಸ್ತಾನ್‌ನಲ್ಲಿ ಉಗ್ರಗಾಮಿಗಳು ಗುಂಡಿನ ದಾಳಿ ನಡೆಸಿ, 15ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿ ಗಳು ಮತ್ತು ಆರ್ಥೋಡಾಕ್ಸ್ ಪಾದ್ರಿ ಸೇರಿದಂತೆ ಹಲವಾರು ನಾಗರಿಕರ ಹತ್ಯೆಗೈದಿದ್ದಾರೆ. ಈ ಬಗ್ಗೆ ಡಾಗೆಸ್ತಾನ್‌ನ ಗವರ್ನರ್ ಸೆರ್ಗೆಯ್ ಮೆಲಿ ಕೋವ್ ಅವರು ವೀಡಿಯೊ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಎರಡು ನಗರಗಳಲ್ಲಿನ ಎರಡು ಆರ್ಥೋಡಾಕ್ಸ್ ಚರ್ಚ್‌ಗಳು, ಸಿನಗಾಗ್ ಮತ್ತು ಪೊಲೀಸ್ ಪೋಸ್ಟ್ ಮೇಲೆ ಬಂದೂಕುಧಾರಿಗಳು ಗುಂಡಿನ ದಾಳಿ ನಡೆಸಿದ್ದಾರೆ ಎಂದು ಅಧಿಕಾರಿಗಳು ಘಟನೆ ಬಗ್ಗೆ ತಿಳಿಸಿದ್ದಾರೆ. ರಷ್ಯಾದ ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ಸಮಿತಿಯು ಈ ದಾಳಿಯನ್ನು ಭಯೋತ್ಪಾದಕ ಕೃತ್ಯಗಳು ಎಂದು ಹೇಳಿದೆ. ಈ ಘಟನೆ ಬೆನ್ನಲ್ಲೇ ಡಾಗೆಸ್ತಾನ್ ಬೆಚ್ಚಿಹೋಗಿದೆ. ಜನ ಹೊರಗೆ ಬರಲು ಸಹ ಭಯ ಪಡುವ ಸ್ಥಿತಿ ನಿನ್ನೆಯಿಂದ ಮನೆಮಾಡಿದೆ. ಇಲ್ಲಿ ಇಂದು, ನಾಳೆ ಮತ್ತು ಬುಧವಾರದವರೆಗೆ ಶೋಕಾಚರಣೆಯನ್ನು ಘೋಷಿಸಲಾಗಿದೆ. ಕ್ಯಾಸ್ಪಿಯನ್ ಸಮುದ್ರದಲ್ಲಿರುವ ಡರ್ಬೆಂಟ್ ನಗರದ ಸಿನಗಾಗ್ ಮತ್ತು ಚರ್ಚ್ ಮೇಲೆ ಶಸ್ತ್ರಸಜ್ಜಿತ ವ್ಯಕ್ತಿಗಳ ಗುಂಪು ಗುಂಡು ಹಾರಿಸಿದೆ ಎಂದು ಡಾಗೆಸ್ತಾನ್ ಆಂತರಿಕ ಸಚಿವಾಲಯ ತಿಳಿಸಿದೆ.

ಮಾಲ್‌ನಲ್ಲಿ ಆಟವಾಡುವ ರೈಲಿನಿಂದ ಕೆಳಗಡೆ ಬಿದ್ದು ಬಾಲಕ ಸಾವು

ಚಂಢೀಗಡ: ಮಾಲ್‌ವೊಂದರಲ್ಲಿ ಇಂಡೋರ್ ಗೇಮ್‌ನಲ್ಲಿ ಆಟವಾಡುತ್ತಿದ್ದ ಬಾಲಕ ಆಕಸ್ಮಿಕವಾಗಿ ಕೆಳಗೆ ಬಿದ್ದು ಸಾವನ್ನಪ್ಪಿದ ಆಘಾತಕಾರಿ ಘಟನೆ ಚಂಢೀಗಡದ ಮಾಲ್‌ನಲ್ಲಿ ನಡೆದಿದೆ.



ತಮ್ಮ ಮಗನನ್ನು ಆಟವಾಡಿಸುವುದಕ್ಕೆ ಕರೆದು ಕೊಂಡು ಹೋಗಿದ್ದ ಪೋಷಕರು ಗೇಮ್ ನಿರ್ವಾಹಕರ ಎಡವಟ್ಟಿನಿಂದಾಗಿ ಮಗನನ್ನು ಕಳೆದುಕೊಳ್ಳುವಂತಾಗಿದೆ. ಚಂಢೀಗಡದ ಎಲಾಂಟೆ ಮಾಲ್‌ನಲ್ಲಿ ಈ ಘಟನೆ ನಡೆದಿದೆ. ಮೃತ ಬಾಲಕನನ್ನು 11 ವರ್ಷದ ಶಹ್ಬಾಜ್ ಸಿಂಗ್ ಎಂದು ಗುರುತಿಸಲಾಗಿದೆ. ಮಕ್ಕಳು ಆಟವಾಡುವ ಪುಟಾಣಿ ಟ್ರೈನ್‌ನಲ್ಲಿ ಮಕ್ಕಳು ಕುಳಿತಿದ್ದಾರೆ. ಆದರೆ ರೈಡ್ ವೇಳೆ ಬಾಲಕ ಶಹ್ಬಾಜ್ ಸಿಂಗ್ ಇದ್ದ ಕಂಪಾರ್ಟ್‌ಮೆಂಟ್ ಮಗುಚಿಬಿದ್ದಿದೆ. ಇದರಿಂದ ಶಹ್ಬಾಜ್ ಸಿಂಗ್ ತಲೆಗೆ ಗಂಭೀರ ಗಾಯವಾದ ಪರಿಣಾಮ ಆತ ಮೃತಪಟ್ಟಿದ್ದಾರೆ. ಈತನ ಜೊತೆಗಿದ್ದ ಸಂಬಂಧಿ ಬಾಲಕ ಅನಾಹುತದಿಂದ ಪಾರಾಗಿದ್ದಾನೆ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಈಗ ಪುಟಾಣಿ ಟ್ರೈನ್ ಚಾಲಕ ಹಾಗೂ ಮಾಲ್ ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಿಸಿದ್ದು, ಚಾಲಕನನ್ನು ಬಂಧಿಸಿದ್ದಾರೆ. ಇಂಡಸ್ಟ್ರಿಯಲ್ ಏರಿಯಾದ ಪೊಲೀಸ್ ಠಾಣೆಯ ಎಸ್‌ಹೆಚ್‌ಓ ಇನ್ಸ್‌ಪೆಕ್ಟರ್ ಜಸ್ಪಾಲ್ ಸಿಂಗ್ ಭುಲ್ಲರ್ ಮಾತನಾಡಿ, ಘಟನೆಗೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಾಗಿದೆ ಎಂದರು.

ಮಹಿಳೆ ಮೇಲೆ ಅತ್ಯಾಚಾರ: ಪ್ರತಿಭಟಿಸಿದ್ದಕ್ಕೆ ದೇಹ ಕತ್ತರಿಸಿ 2 ರೈಲಿನಲ್ಲಿ ಪಾರ್ಸಲ್

ಉಜ್ಜೈನಿ: ಪತಿಯೊಂದಿಗೆ ಜಗಳ ಮಾಡಿ ಹೊರಬಂದ ಮಹಿಳೆಯನ್ನು ಎಳೆದೊಯ್ದು 60 ವರ್ಷದ ಕಾಮುಕ ಅತ್ಯಾಚಾರ ಎಸಗಿ, ಹತ್ಯೆ ಮಾಡಿದ ಭೀಕರ ಘಟನೆ ಮಧ್ಯಪ್ರದೇಶದ ಉಜ್ಜೈನಿಯಲ್ಲಿ ನಡೆದಿದೆ. ಮಹಿಳೆಗೆ ಆಶ್ರಯ ಕೊಡುವ ನೆಪದಲ್ಲಿ ಆಕೆಯನ್ನು ರೈಲು ನಿಲ್ದಾಣದ ಪಕ್ಕದಲ್ಲೇ ಇರುವ ಮನೆಗೆ ಕರೆದುಕೊಂಡು ಹೋಗಿ ಅತ್ಯಾಚಾರ ಎಸಗಿದ್ದಾನೆ. ಪ್ರತಿಭಟಿಸಿದ ಆಕೆಯನ್ನು ಹತ್ಯೆ ಮಾಡಿ ದೇಹವನ್ನು ಹಲವು ತುಂಡುಗಳಾಗಿ ಕತ್ತರಿಸಿದ್ದಾನೆ. ಬಳಿಕ ಎರಡು ರೈಲಿನಲ್ಲಿ ಮೃತದೇಹದ ತುಂಡುಗಳನ್ನು ಪಾರ್ಸಲ್ ಮಾಡಿದ ಕಾಮುಕನನ್ನು ಅರೆಸ್ಟ್ ಮಾಡಲಾಗಿದೆ.

ಜೂನ್ 6ರಂದು ಪತಿಯೊಂದಿಗೆ ಜಗಳ ಮಾಡಿದ 36 ವರ್ಷದ ಮಹಿಳೆ ಉಜ್ಜೈನಿ ರೈಲು ನಿಲ್ದಾಣದಲ್ಲಿ ಕುಳಿತಿದ್ದಳು. ಮಹಿಳೆಗೆ ಆಶ್ರಯ ನೀಡುವ ನೆಪದಲ್ಲಿ ಬಂದ ಆರೋಪಿ ಕಮಲೇಶ್ ಪಟೇಲ್ ಆಕೆಗೆ ಆಹಾರದಲ್ಲಿ ನಿದ್ದೆ ಮಾತ್ರೆ ನೀಡಿ ಬಳಿಕ ಅತ್ಯಾಚಾರ ಎಸಗಿದ್ದಾನೆ. ನಿದ್ದೆಯ ಮಂಪರಿನಲ್ಲೇ ಅತ್ಯಾಚಾರ ಪ್ರತಿಭಟಿಸಿದ್ದಾಳೆ. ಆದರೆ ಮಹಿಳೆಯನ್ನು ಹತ್ಯೆ ಮಾಡಿದ್ದಾನೆ. ಜೂ.10ರಂದು ಉತ್ತರಾಖಂಡ ರಿಷಿಕೇಶಿ ರೈಲು ನಿಲ್ದಾಣದಲ್ಲಿ ರೈಲಿನಲ್ಲಿ ಮಹಿಳೆಯ ಕೈ ಕಾಲುಗಳು ಪತ್ತೆಯಾಗಿತ್ತು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಹುಡುಕಾಟ ನಡೆಸಿದಾಗ ಮಹಿಳೆಯ ದೇಹದ ಇತರ ಭಾಗಗಳು ಸಿಕ್ಕಿವೆ. ಈ ಕುರಿತು ತನಿಖೆ ನಡೆಸಿದ ಪೊಲೀಸರು ರೈಲು ಹಾದು ಬಂದ ಎಲ್ಲಾ ನಿಲ್ದಾಣಗಳಲ್ಲಿ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಿದ್ದಾರೆ. ಆರೋಪಿ ಕಮಲೇಶ್ ಪಟೇಲ್‌ನನ್ನು ಬಂಧಿಸಿದ್ದಾರೆ.

ದಕ್ಷಿಣ ಕೊರಿಯಾದ ಲಿಥಿಯಂ ಬ್ಯಾಟರಿ ಘಟಕದಲ್ಲಿ ಬೆಂಕಿ: 23 ಮಂದಿ ಸಾವು

ಸಿಯೋಲ್: ಸಿಯೋಲ್‌ನ ದಕ್ಷಿಣದಲ್ಲಿರುವ ಲಿಥಿಯಂ ಬ್ಯಾಟರಿ ತಯಾರಿಕಾ ಘಟಕದಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ ಕನಿಷ್ಠ 23 ಜನರು ಸಾವನ್ನಪ್ಪಿದ್ದಾರೆ ಎಂದು ಯೋನ್ಹಾಪ್ ನ್ಯೂಸ್ ವರದಿ ಮಾಡಿದೆ.



ಬಲಿಯಾದವರಲ್ಲಿ ಬಹುತೇಕ ಎಲ್ಲರೂ ವಿದೇಶಿ ಕಾರ್ಮಿಕರು ಮತ್ತು ಚೀನಾದ ಜನರು ಸೇರಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಿದೆ. ಸಿಯೋಲ್‌ನಿಂದ ದಕ್ಷಿಣಕ್ಕೆ 45 ಕಿ.ಮೀ. ದೂರದಲ್ಲಿರುವ ಹ್ವಾಸಿಯೊಂಗ್ನಲ್ಲಿರುವ ಅರಿಸೆಲ್ ಸಂಸ್ಥೆಯ 3 ಅಂತಸ್ತಿನ ಸ್ಥಾವರದಲ್ಲಿ ಬೆಳಗ್ಗೆ 10.30ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದೆ. ಮಧ್ಯಾಹ್ನ 3.10ರ ಸುಮಾರಿಗೆ ಮುಖ್ಯ ಬೆಂಕಿ ನಿಯಂತ್ರಣದಲ್ಲಿದೆ. ಲಿಥಿಯಂ ಬ್ಯಾಟರಿಗಳನ್ನು ಸುಡುವುದು ಸಾಂಪ್ರದಾಯಿಕ ವಿಧಾನಗಳ ಮೂಲಕ ನಿರ್ವಹಿಸುವುದು ಕಷ್ಟವಾದ್ದರಿಂದ ಅಗ್ನಿಶಾಮಕ ಸಿಬ್ಬಂದಿಗೆ ಬೆಂಕಿಯನ್ನು ನಂದಿಸಲು ಕಷ್ಟವಾಯಿತು ಎಂದು ಅಗ್ನಿಶಾಮಕ ಅಧಿಕಾರಿಗಳನ್ನು ಉಲ್ಲೇಖಿಸಿ ಯೋನ್ಹಾಪ್ ವರದಿ ಮಾಡಿದೆ.

ಲಾಟರಿಯಲ್ಲಿ 33 ಕೋಟಿ ಗೆದ್ದವನ ಎಳೆದೊಯ್ದ ಜವರಾಯ!

ಸಿಂಗಾಪುರ: ಅನಿರೀಕ್ಷಿತವಾಗಿ ಹಣ ಬಂದಾಗ ಖುಷಿಯಾಗುವುದು ಸಹಜ. ಅದರಲ್ಲೂ ಲಾಟರಿ ಹೊಡೆದು ಲಕ್ಷ-ಕೋಟಿಗಟ್ಟಲೇ ಹಣ ಬಂದರೆ ಖುಷಿ ತಡೆಯುವುದಾದರೂ ಹೇಗೆ? ಅದೇ ರೀತಿ ಇಲ್ಲೊಬ್ಬ ವ್ಯಕ್ತಿ ಲಾಟರಿ ಹೊಡೆದ ಖುಷಿ ತಡೆಯಲಾಗದೇ ಹೃದಯಾಘಾತವಾಗಿ, ಸ್ಥಳದಲ್ಲೇ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ. ಸಿಂಗಾಪುರದ ಬೇ ಸ್ಯಾಂಡ್ ಕ್ಯಾಸಿನೋದಲ್ಲಿ ಈ ಘಟನೆ ನಡೆದಿದೆ ಲಾಟರಿ ಹೊಡೆದ ವಿಚಾರ ತಿಳಿಯುತ್ತಿದ್ದಂತೆ ವ್ಯಕ್ತಿ ಕುಸಿದು ಬಿದ್ದು ಸಾವನ್ನಪ್ಪಿದ ದೃಶ್ಯ ಕ್ಯಾಮರಾಗಳಲ್ಲಿ ಸೆರೆ ಆಗಿದ್ದು, ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. 4 ಮಿಲಿಯನ್ ಡಾಲರ್ ಬಹುಮಾನ (ಭಾರತೀಯ ರೂಪಾಯಿಯಲ್ಲಿ ಸುಮಾರು 33 ಕೋಟಿ) ಮೊತ್ತದ ಲಾಟರಿಯನ್ನು ವ್ಯಕ್ತಿಯೊಬ್ಬರು ಗೆದ್ದಿದ್ದು, ಇದಾಗಿ ಸ್ವಲ್ಪ ಹೊತ್ತಿನಲ್ಲಿ ಉದ್ವೇಗ ತಡೆಯಲಾಗದೇ ಅವರು ಹೃದಯಾಘಾತಕ್ಕೆ ಒಳಗಾಗಿದ್ದಾರೆ. ಎಲ್ಲರೂ ಖುಷಿಯ ಕ್ಷಣವನ್ನು ಸೆಲೆಬ್ರೇಷನ್ ಮಾಡುತ್ತಿದ್ದರೆ ಈತ ಮಾತ್ರ ಒಮ್ಮೆಗೆ ಬಂದ ಖುಷಿಯನ್ನು ಅರಗಿಸಿಕೊಳ್ಳಲಾಗದೇ ಪ್ರಾಣ ಬಿಟ್ಟಿದ್ದಾರೆ.



ಡ್ರಗ್ ಕೇಸ್‌ನಲ್ಲಿ ಸಂಜನಾ ಗಲ್ರಾನಿಗೆ ಬಿಗ್ ರಿಲೀಫ್; ಎಫ್‌ಐಆರ್ ರದ್ದು



ಬೆಂಗಳೂರು: ಭಾರೀ ಸಂಚಲನ ಸೃಷ್ಟಿಸಿದ್ದ ಸ್ಯಾಂಡಲ್‌ವುಡ್ ಡ್ರಗ್ಸ್ ಪ್ರಕರಣದಲ್ಲಿ ನಟಿ ಸಂಜನಾ ಗಲ್ರಾನಿ ಹಾಗೂ ಶಿವಪ್ರಕಾಶ್ ಚಿಪ್ಪಿಗೆ ಬಿಗ್ ರಿಲೀಫ್ ಸಿಕ್ಕಿದೆ. ಇಬ್ಬರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಅನ್ನು ಹೈಕೋರ್ಟ್ ರದ್ದುಗೊಳಿಸಿದೆ. ಸಿಸಿಬಿಯಿಂದ ನಟಿಯರು ಸೇರಿದಂತೆ ಡ್ರಗ್ ಪೆಡ್ಲರ್‌ಗಳ ಬಂಧನವಾಗಿತ್ತು. ಎಫ್‌ಐಆರ್ ರದ್ದು ಕೋರಿ ಸಂಜನಾ ಹಾಗೂ ಶಿವಪ್ರಕಾಶ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಮಹಿಳೆಯರು, ಮಕ್ಕಳ ಸುರಕ್ಷತೆಗೆ ಅತ್ಯಂತ ಸುರಕ್ಷಾ ಕ್ರಮ

- ಸಾರ್ವಜನಿಕ ಸೇವಾ ವಾಹನಗಳಲ್ಲಿ ವಿಎಲ್‌ಟಿ, ಪ್ಯಾನಿಕ್ ಬಟನ್ ಕಡ್ಡಾಯ
- ಪ್ಯಾನಿಕ್ ಬಟನ್ ಇಲ್ಲದ ವಾಹನಗಳಿಗೆ ಎಫ್‌ಸಿ ನೀಡಲು ಆರ್‌ಟಿಓ ನಿರಾಕರಣೆ

ಮೈಸೂರು, ಜೂ.24(ಬಿಎಲ್‌ಯು)– ದೆಹಲಿಯ ನಿರ್ಭಯ ಹತ್ಯೆ ಪ್ರಕರಣದ ನಂತರ ಮಹಿಳೆಯರು ಹಾಗೂ ಮಕ್ಕಳ ಸುರಕ್ಷತೆಗೆ ಕಠಿಣ ಕ್ರಮಗಳನ್ನು ಕೈಗೊಂಡಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರ, ವೆಹಿಕಲ್ ಲೋಕೇಷನ್ ಟ್ರ್ಯಾಕಿಂಗ್ ಡಿವೈಸ್ (ವಿಎಲ್‌ಟಿ) ಮತ್ತು ಪ್ಯಾನಿಕ್ ಬಟನ್ ಅಳವಡಿಸದ ಸಾರ್ವಜನಿಕ ಸೇವಾ ವಾಹನಗಳಿಗೆ ಎಫ್‌ಸಿ (ಫಿಟ್ನೆಸ್ ಸರ್ಟಿಫಿಕೇಟ್) ನೀಡದಿರಲು ಪ್ರಾದೇಶಿಕ ಸಾರಿಗೆ ಕಚೇರಿ (ಆರ್‌ಟಿಓ)ಗೆ ಆದೇಶಿಸಿದೆ.



ವೆಹಿಕಲ್ ಲೋಕೇಷನ್ ಟ್ರ್ಯಾಕಿಂಗ್ ಡಿವೈಸ್, ಪ್ಯಾನಿಕ್ ಬಟನ್ ಅಳವಡಿಸಿರುವುದು.

ಮಹಿಳೆಯರು ಹಾಗೂ ಮಕ್ಕಳ ಸುರಕ್ಷತೆಗೆ ಹೆಚ್ಚಿನ ಕ್ರಮ ಕೈಗೊಳ್ಳಬೇಕೆಂದು ದೇಶದಾದ್ಯಂತ ದೊಡ್ಡ ಜನಾಂದೋಲನ ರೂಪುಗೊಂಡಿತು. ಟ್ಯಾಕ್ಸಿ, ಕ್ಯಾಬ್ ಸೇರಿದಂತೆ ಸಾರ್ವಜನಿಕ ಸೇವಾ ವಾಹನಗಳಲ್ಲಿ ಪ್ರಯಾಣ ಮಾಡುವ ಮಹಿಳೆಯರು ಮತ್ತು ಮಕ್ಕಳಿಗೆ ಸುರಕ್ಷತೆ ಇಲ್ಲ ಎಂಬ ವ್ಯಾಪಕ ಆಕ್ರೋಶ ವ್ಯಕ್ತವಾಯಿತು.

ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಸೇವಾ ವಾಹನಗಳಲ್ಲಿ ಪ್ರಯಾಣಿಸುವ ಮಹಿಳೆಯರು ಹಾಗೂ ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಮಾದರಿಯಲ್ಲಿ ವಾಹನಗಳಲ್ಲಿ ಆಧುನಿಕ ತಂತ್ರಜ್ಞಾನ ವಿಧಾನ ಅನುಸರಿಸಲು ಕೇಂದ್ರ ಸರ್ಕಾರ ಮುಂದಾಯಿತು.

ಟ್ಯಾಕ್ಸಿ, ಕ್ಯಾಬ್ ಸೇರಿದಂತೆ ಸಾರ್ವಜನಿಕ ಸೇವಾ ವಾಹನಗಳಲ್ಲಿ ಸಂಚರಿಸುವ ವೇಳೆ ಮಹಿಳೆಯರ ಮೇಲೆ ನಡೆಯುತ್ತಿದ್ದ ಲೈಂಗಿಕ ದೌರ್ಜನ್ಯ ತಡೆಗಟ್ಟಲು ಸಾರ್ವಜನಿಕ ಸೇವಾ ವಾಹನಗಳಿಗೆ ಪ್ಯಾನಿಕ್ ಬಟನ್ ಮತ್ತು ವೆಹಿಕಲ್ ಲೋಕೇಷನ್ ಟ್ರ್ಯಾಕಿಂಗ್ ಡಿವೈಸ್ ಅಳವಡಿಕೆಯನ್ನು ರಾಜ್ಯ ಸರ್ಕಾರ ಕಡ್ಡಾಯಗೊಳಿಸಿತು.

ವಿಎಲ್‌ಟಿ ಹಾಗೂ ಪ್ಯಾನಿಕ್ ಬಟನ್ ಅಳವಡಿಸಲು 2023ರ ಡಿಸೆಂಬರ್ 1ರಿಂದ ಕಡ್ಡಾಯಗೊಳಿಸಲಾಯಿತು. 2024ರ ನವೆಂಬರ್ 30ರೊಳಗೆ ಅಳವಡಿಸಲು ಗಡುವು ನೀಡಲಾಯಿತು. ಆದರೆ ಸಮಯಾವಕಾಶವಿದೆ ಎಂದು ವಿಎಲ್‌ಟಿ ಹಾಗೂ ಪ್ಯಾನಿಕ್ ಬಟನ್ ಅಳವಡಿಸಲು ವಾಹನ ಸವಾರರು ನಿರಾಸಕ್ತಿ ತೋರಿದ್ದಾರೆ.

ಕರ್ನಾಟಕ ಸಾರಿಗೆ ಇಲಾಖೆಯಲ್ಲಿ ಈಗ ಲಭ್ಯವಿರುವ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ ಪ್ರಸ್ತುತ ಎಫ್‌ಸಿಗೆ ಒಳಪಡುವ 6,04,863 ವಾಹನಗಳಿವೆ. ಆದರೆ ಇವುಗಳಲ್ಲಿ ಈ ತನಕ 1,109 ವಾಹನಗಳು ಮಾತ್ರ ವಿಎಲ್‌ಟಿ ಮತ್ತು ಪ್ಯಾನಿಕ್ ಬಟನ್ ಅಳವಡಿಸಿಕೊಂಡಿವೆ ಎಂದು ತಿಳಿದು ಬಂದಿದೆ.

ಈಗ ಪ್ರತಿ ದಿನ ನೂರಾರು ವಾಹನಗಳು ಎಫ್‌ಸಿಗಾಗಿ ಬರುತ್ತಿವೆ. ಆ ವಾಹನಗಳಲ್ಲಿ ವಿಎಲ್‌ಟಿ ಮತ್ತು ಪ್ಯಾನಿಕ್ ಬಟನ್ ಇಲ್ಲ. ಇನ್ನು ಐದು ತಿಂಗಳ ಕಾಲಾವಕಾಶ ಇರುವ ಕಾರಣ ಡಿವೈಸ್ ಅಳವಡಿಸಿಲ್ಲ ಎಂದು ವಾಹನ ಮಾಲೀಕರು, ಸಾರಿಗೆ ಇಲಾಖೆ ಅಧಿಕಾರಿಗಳಿಗೆ ತಿಳಿಸಿ, ಸದ್ಯಕ್ಕೆ ಎಫ್‌ಸಿ ಮಾಡಿಕೊಡುವಂತೆ ಹೇಳುತ್ತಿದ್ದಾರೆ.

ಆದರೆ ಈಗ ಎಫ್‌ಸಿ ಕೊಟ್ಟರೆ ಮುಂದಿನ ವರ್ಷದ ಜೂನ್ ತನಕ ಯಾರೂ ಡಿವೈಸ್ ಅಳವಡಿಸುವುದಿಲ್ಲ. ನವೆಂಬರ್‌ನಿಂದ ಜೂನ್ ತನಕ ಡಿವೈಸ್ ಇಲ್ಲದೆ ವಾಹನ ಚಾಲನೆ ಮಾಡುವುದು ಕಾನೂನಿನ ಸ್ಪಷ್ಟ ಉಲ್ಲಂಘನೆ ಆಗುತ್ತದೆ. ಆದ ಕಾರಣ ವಿಎಲ್‌ಟಿ ಮತ್ತು ಪ್ಯಾನಿಕ್ ಬಟನ್ ಅಳವಡಿಸಿಕೊಂಡಿರುವ ವಾಹನಗಳಿಗೆ ಮಾತ್ರ ಎಫ್‌ಸಿ ನೀಡಬೇಕು ಎಂದು ಸರ್ಕಾರ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಇದರಿಂದ ಎಫ್‌ಸಿ ಪಡೆಯಲು ವಾಹನ ಸವಾರರು ಈಗ ಅನಿವಾರ್ಯವಾಗಿ ವಿಎಲ್‌ಟಿ ಮತ್ತು ಪ್ಯಾನಿಕ್ ಬಟನ್ ಅಳವಡಿಸಬೇಕಾಗಿದೆ. ವೆಹಿಕಲ್ ಲೋಕೇಷನ್ ಟ್ರ್ಯಾಕಿಂಗ್ ಡಿವೈಸ್ ಮತ್ತು ಪ್ಯಾನಿಕ್ ಬಟನ್‌ಗೆ ಕೇಂದ್ರ ಸರ್ಕಾರ 7,599 ರೂ. ದರ ನಿಗದಿ ಮಾಡಿದ್ದು, ಯಾರೂ ಕೂಡ ಹೆಚ್ಚುವರಿ ಹಣ ನೀಡಬೇಕಿಲ್ಲ ಎಂದು ಸಲಹೆ ನೀಡಿದೆ.

ಇನ್ನು ಮುಂದೆ ಸಾರ್ವಜನಿಕ ಸೇವಾ ವಾಹನಗಳಲ್ಲಿ ಪ್ರಯಾಣ ಮಾಡುವ ವೇಳೆ ಮಹಿಳೆಯರು ಮತ್ತು ಮಕ್ಕಳು ಭಯ ಪಡುವ ಅಗತ್ಯವಿಲ್ಲ. ಹೀಗೆ ಪ್ರಯಾಣ ಮಾಡುವ ವೇಳೆ ವಾಹನ ಚಾಲಕನಾಗಲೀ ಅಥವಾ ಇನ್ಯಾರೆ ಆಗಲೀ ದೌರ್ಜನ್ಯ ಎಸಗಿದರೆ ಕೂಡಲೇ ಪ್ಯಾನಿಕ್ ಬಟನ್ ಒತ್ತಬಹುದು.

ಹೀಗೆ ಪ್ಯಾನಿಕ್ ಬಟನ್ ಒತ್ತಿದ ಕೂಡಲೇ ವಾಹನಕ್ಕೆ ಸಂಬಂಧಿಸಿದ ಹಲವು ಮಾಹಿತಿಗಳು ಕಮಾಂಡ್ ಸೆಂಟರ್‌ಗೆ ರವಾನೆಯಾಗುತ್ತದೆ. ವಾಹನ ಎಲ್ಲಿಂದ, ಎಲ್ಲಿಗೆ ಸಂಚರಿಸುತ್ತಿದೆ, ಯಾವ ಮಾರ್ಗದಲ್ಲಿ ಸಂಚರಿಸುತ್ತಿದೆ, ಅದು ನಿರ್ಬಂಧಿತ ಪ್ರದೇಶವೆ, ಆ ವಾಹನ ಸಂಚಾರ ನಿಯಮ ಉಲ್ಲಂಘನೆ ಮಾಡಿದೆಯೇ ಎಂಬ ಹಲವು ವಿವರಗಳು ಕಮಾಂಡ್ ಸೆಂಟರ್‌ನಲ್ಲಿ ದಾಖಲಾಗುತ್ತವೆ.

ತರುವಾಯ ಕಮಾಂಡ್ ಸೆಂಟರ್‌ನಿಂದ ವಾಹನದ ಲೋಕೇಷನ್ ಸೇರಿದಂತೆ ಹಲವು ವಿವರಗಳು ಸನಿಹದ ಪೊಲೀಸ್ ಠಾಣೆಗೆ ರವಾನೆ ಆಗುತ್ತದೆ. ಇದರಿಂದ ತಕ್ಷಣವೇ ಸ್ಥಳಕ್ಕೆ ಹೋಗುವ ಪೊಲೀಸರು ತೊಂದರೆಗೊಳಗಾದ ಮಹಿಳೆಯರು, ಮಕ್ಕಳು ಸೇರಿದಂತೆ ಯಾರೇ ಆದರೂ ಅವರನ್ನು ರಕ್ಷಿಸುತ್ತಾರೆ. ಸಾರ್ವಜನಿಕ ಸೇವಾ ವಾಹನಗಳಲ್ಲಿ ಪ್ರಯಾಣಿಸುವ ವೇಳೆ ಮಹಿಳೆಯರು, ಮಕ್ಕಳು ಮಾತ್ರವಲ್ಲದೆ ಪುರುಷರು ಕೂಡ ಅಪಹರಣ ಸೇರಿದಂತೆ ಹಲವು ತೊಂದರೆಗೆ ಸಿಲುಕಬಹುದು. ಆ ವೇಳೆ ಪ್ಯಾನಿಕ್ ಬಟನ್ ಆಪತ್ಬಾಂದವನಂತೆ ಅವರ ನೆರವಿಗೆ ಬರುತ್ತದೆ.

ಸಾರ್ವಜನಿಕ ಸೇವಾ ವಾಹನಗಳಲ್ಲಿ ವಿಎಲ್‌ಟಿ ಮತ್ತು ಪ್ಯಾನಿಕ್ ಬಟನ್ ಇರುವ ಕಾರಣ ಯಾರೂ ದೌರ್ಜನ್ಯ ಎಸಗುವ ಕೃತ್ಯಗಳಿಗೆ ಕೈ ಹಾಕುವುದಿಲ್ಲ. ಇದರಿಂದ ಇನ್ನು ಮುಂದೆ ಮಹಿಳೆಯರು ಮತ್ತು ಮಕ್ಕಳು ನಿರ್ಭೀತಿಯಿಂದ ಪ್ರಯಾಣಿಸಬಹುದು.

ವಾರಕ್ಕೊಮ್ಮೆ ಪ್ರಧಾನ ಕಚೇರಿಗೆ ವರದಿ ನೀಡಬೇಕು

“ಎಫ್‌ಸಿ ಮಾಡಿಸಿಕೊಳ್ಳಲು ಬರುವ ಎಷ್ಟು ವಾಹನಗಳು ಪ್ಯಾನಿಕ್ ಬಟನ್ ಅಳವಡಿಸಿಕೊಂಡಿವೆ ಎಂಬ ಬಗ್ಗೆ ಪ್ರಧಾನ ಪ್ರಾದೇಶಿಕ ಸಾರಿಗೆ ಕಚೇರಿಗೆ ಪ್ರತಿ ವಾರ ಅಂಕಿ ಅಂಶಗಳ ವರದಿ ನೀಡಬೇಕು. ಆದರೆ ಬಹಳಷ್ಟು ವಾಹನ ಮಾಲೀಕರು ವಿಎಲ್‌ಟಿ ಮತ್ತು ಪ್ಯಾನಿಕ್ ಬಟನ್ ಅಳವಡಿಸಲು ಸಮಯಾವಕಾಶವಿದೆ ಎಂದು ಹೇಳುತ್ತಿದ್ದಾರೆ.

ಆದರೆ ವಿಎಲ್‌ಟಿ ಮತ್ತು ಪ್ಯಾನಿಕ್ ಬಟನ್ ಇಲ್ಲದ ವಾಹನಗಳಿಗೆ ಈಗ ಎಫ್‌ಸಿ ಮಾಡಿಕೊಟ್ಟರೆ, ನವೆಂಬರ್ ನಂತರ ಮುಂದೆ ಎಫ್‌ಸಿ ಮಾಡಿಸಿಕೊಳ್ಳುವ ತನಕ ವಾಹನ ಮಾಲೀಕರು ವಿಎಲ್‌ಟಿ ಮತ್ತು ಪ್ಯಾನಿಕ್ ಬಟನ್ ಅಳವಡಿಸಿಕೊಳ್ಳುವುದಿಲ್ಲ. ಇದು ಕಾನೂನಿನ ಸ್ಪಷ್ಟ ಉಲ್ಲಂಘನೆ ಆಗಲಿದೆ. ಈ ಕಾರಣ ಈಗಲೇ ವಿಎಲ್‌ಟಿ ಮತ್ತು ಪ್ಯಾನಿಕ್ ಬಟನ್ ಅಳವಡಿಸಿಕೊಂಡು ಬಂದರೆ ಎಫ್‌ಸಿ ನೀಡುತ್ತೇವೆ ಎಂದು ವಾಹನ ಮಾಲೀಕರಿಗೆ ತಿಳಿ ಹೇಳುತ್ತಿದ್ದೇವೆ.



ಹೊಸ ವಾಹನಗಳಲ್ಲಿ ಅದರಲ್ಲೇ ವಿಎಲ್‌ಟಿ ಮತ್ತು ಪ್ಯಾನಿಕ್ ಬಟನ್ ಅಳವಡಿಸಲಾಗಿರುತ್ತದೆ. ಆದರೆ ಹಳೆಯ ವಾಹನಗಳಲ್ಲಿ ಇದು ದೊಡ್ಡ ಸಮಸ್ಯೆಯಾಗಿದೆ. ಈ ಹಿನ್ನೆಲೆಯಲ್ಲಿ ವಿಎಲ್‌ಟಿ ಮತ್ತು ಪ್ಯಾನಿಕ್ ಬಟನ್ ಇಲ್ಲದ ವಾಹನಗಳಿಗೆ ಎಫ್‌ಸಿ ನೀಡುವುದಿಲ್ಲ ಎಂದು ಹೇಳಿದ್ದೇವೆ.

ಒಟ್ಟಾರೆ ಮುಂದಿನ ದಿನಗಳಲ್ಲಿ ಪ್ರತಿ ವಾಹನ ವಿಎಲ್‌ಟಿ ಮತ್ತು ಪ್ಯಾನಿಕ್ ಬಟನ್ ಹೊಂದಿರಬೇಕು ಎಂಬ ಸರ್ಕಾರದ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದೇವೆ. **– ದೇವಿಕಾ, ಪ್ರಾದೇಶಿಕ ಸಾರಿಗೆ ಅಧಿಕಾರಿ, ಮೈಸೂರು**

ತ್ರಿಮತಸ್ಥ ಬ್ರಾಹ್ಮಣ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ



ಮೈಸೂರು ಶ್ರೀ ಕೃಷ್ಣಧಾಮದಲ್ಲಿ ತ್ರಿಮತಸ್ಥ ಬ್ರಾಹ್ಮಣ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಿತು.

ಮೈಸೂರು, ಜೂ. 24– ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಶ್ರೀ ಕೃಷ್ಣ ಮಿತ್ರ ಮಂಡಳಿ ಹಾಗೂ ಶ್ರೀಕೃಷ್ಣ ಟ್ರಸ್ಟ್, ಶ್ರೀ ಕೃಷ್ಣಧಾಮ ವತಿಯಿಂದ 2024–2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತ್ಯಧಿಕ ಅಂಕ ಗಳಿಸಿದ ತ್ರಿಮತಸ್ಥ ಬ್ರಾಹ್ಮಣ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಆಯೋಜಿಸಲಾಗಿತ್ತು.

ಈ ವೇಳೆ ಶಿಕ್ಷಣ ತಜ್ಞ ಆರ್.ರಘುನಂದನ್ ಮಾತನಾಡಿ, ಮಾಡುವ ಕೆಲಸದಲ್ಲಿ ಶ್ರದ್ಧೆ, ನಿಷ್ಠೆ ಮತ್ತು ನೈತಿಕ ಮೌಲ್ಯ ಇರಬೇಕು. ಮರಳಿ ಯತ್ನವ ಮಾಡು ಮಾತಿನಂತೆ ನಿರಂತರ ಪ್ರಯತ್ನದಿಂದ ಮಾತ್ರ ಯಶಸ್ಸು ಸಿಗಬಲ್ಲದು. ಅದರ ಜೊತೆಗೆ ಜೀವನದ ಸವಾಲನ್ನು ಎದುರಿಸುವ ಶಕ್ತಿ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಸಾಧನೆಯ ಮೆಟ್ಟಿಲನ್ನು ಏರುವ ತುಡಿತ ನಮ್ಮಲ್ಲಿರಬೇಕು. ನಮ್ಮ ಸಾಧನೆ ಮುಂದಿನ ಜನಾಂಗಕ್ಕೆ ಪ್ರೇರಣೆಯಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ಪಿ.ಜಿ.ಪ್ರವೀಣ್, ಶ್ರೀ ಕೃಷ್ಣ ಟ್ರಸ್ಟ್‌ನ ಉಪಾಧ್ಯಕ್ಷ ರವಿಶಾಸ್ತ್ರಿ, ಶ್ರೀ ಕೃಷ್ಣಮಿತ್ರ ಮಂಡಳಿ ಉಪಾಧ್ಯಕ್ಷ ಗೋಪಾಲಕೃಷ್ಣ, ಕಾರ್ಯದರ್ಶಿ ಬಿ.ಎಸ್.ರಾಘವೇಂದ್ರ ಪ್ರಸಾದ್, ಖಜಾಂಚಿ ಸುಬ್ರಹ್ಮಣ್ಯರಾವ್ ಹಾಗೂ ಕೃಷ್ಣ ಟ್ರಸ್ಟ್‌ನ ಸಹ ಕಾರ್ಯದರ್ಶಿ ಕಿರಣ್ ತಂತ್ರಿ, ಶ್ರೀ ಕೃಷ್ಣ ಮಿತ್ರ ಮಂಡಳಿ ಖಜಾಂಚಿ ಸುಬ್ರಮಣ್ಯರಾವ್ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ತುರ್ತು ಪರಿಸ್ಥಿತಿ ಬಗ್ಗೆ ಮಾತನಾಡುವ ನೈತಿಕತೆ ಬಿಜೆಪಿ ನಾಯಕರಿಗಿಲ್ಲ

ಮೈಸೂರು,ಜೂ.24(ಬಿಎಲ್‌ಯು)– ಪ್ರಸ್ತುತ ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಜಾರಿಯಲ್ಲಿಟ್ಟಿರುವ ಬಿಜೆಪಿ ನಾಯಕರಿಗೆ 1975ರ ತುರ್ತು ಪರಿಸ್ಥಿತಿ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ವಿಧಾನಪರಿಷತ್ ಮಾಜಿ ಸದಸ್ಯರೂ ಆದ ಕಾಂಗ್ರೆಸ್ ಮಾಧ್ಯಮ ಮತ್ತು ಸಂವಹನ ವಿಭಾಗದ ಅಧ್ಯಕ್ಷರಾದ ರಮೇಶ್‌ಬಾಬು ಕೇಸರಿ ನಾಯಕರಿಗೆ ತಿರುಗೇಟು ನೀಡಿದ್ದಾರೆ.



ರಮೇಶ್ ಬಾಬು

ದೇಶದಲ್ಲಿ ಈಗಿರುವ ಅಘೋಷಿತ ತುರ್ತು ಪರಿಸ್ಥಿತಿ, ಸರ್ವಾಧಿಕಾರ ಮತ್ತು ವ್ಯಕ್ತಿ ಪೂಜೆ ಬಿಜೆಪಿಗೆ ಅನಿವಾರ್ಯವಾಗಿದೆ. ಸಂವಿಧಾನವನ್ನು ಉಲ್ಲಂಘನೆ ಮಾಡಿ ಸ್ವಾಯತ್ತ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ಪ್ರಜಾಪ್ರಭುತ್ವಕ್ಕೆ ಬಿಜೆಪಿಯವರು ಅಪಚಾರ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಇಂದಿರಾ ಗಾಂಧಿ ತುರ್ತು ಪರಿಸ್ಥಿತಿ ಹೇರಿದ ಕಾರಣಕ್ಕೆ ರಾಹುಲ್ ಗಾಂಧಿ ದೇಶದ ಜನರ ಕ್ಷಮೆ ಕೇಳಬೇಕೆಂದು ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆಗ್ರಹಿಸಿದ್ದಾರೆ. ಬಿಜೆಪಿ ನಾಯಕರು ತಮ್ಮ ರಾಜಕೀಯ ಅಸ್ತಿತ್ವಕ್ಕಾಗಿ ಪದೇ ಪದೇ ಇಂತಹ ಹೇಳಿಕೆ ನೀಡುತ್ತಿದ್ದಾರೆ ಎಂದು ಹೇಳಿದ್ದಾರೆ.

ತುರ್ತು ಪರಿಸ್ಥಿತಿ ವಿರುದ್ಧ ಹೋರಾಟ ಮಾಡಿದ್ದ ನಾನು ಜೈಲು ವಾಸ ಅನುಭವಿಸಿದ್ದೆ. ಆಗ ನಾನು 16 ವರ್ಷದ ಅಪ್ರಾಪ್ತ ಎಂದು ಅಶೋಕ್ ಹೇಳಿದ್ದಾರೆ. ಆದರೆ ಅಪ್ರಾಪ್ತರನ್ನು ಜೈಲಿಗಿಡಲು ಯಾವುದೇ ಕಾನೂನಿನಲ್ಲಿ ಅವಕಾಶ ಇಲ್ಲ ಎಂಬ ಸತ್ಯ ಗೊತ್ತಿದ್ದರೂ ಅವರು ಹಸಿ ಹಸಿ ಸುಳ್ಳು ಹೇಳುತ್ತಿದ್ದಾರೆ ಎಂದು ರಮೇಶ್ ಬಾಬು ಬಿಜೆಪಿ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

'ಇಂಡಿಯನ್ ಕೋಚ್ ಮತ್ತು ಕ್ಯಾಡಿ ಟೂರ್ನ್‌ಮೆಂಟ್'ನಲ್ಲಿ ಪಿ.ಪ್ರಭುಗೆ ಪ್ರಥಮ ಬಹುಮಾನ



ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ನಡೆದ 'ಇಂಡಿಯನ್ ಕೋಚ್ ಮತ್ತು ಕ್ಯಾಡಿ ಟೂರ್ನ್‌ಮೆಂಟ್'ನಲ್ಲಿ ಮೈಸೂರು ಜಯ ಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ನ ಕೋಚ್ ಪ್ರಭು ಪಿ. @ ಪೀಟರ್ ಅವರು ಟೂರ್ನ್‌ಮೆಂಟ್‌ನಲ್ಲಿ ಭಾಗವಹಿಸಿ, ಪ್ರಥಮ ಬಹುಮಾನ ಪಡೆದಿದ್ದಾರೆ.

ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ವಿದ್ಯಾರ್ಥಿ ನಾಯಕರಿಗೆ ಪದಕ ಪ್ರದಾನ

ಮೈಸೂರು, ಜೂ. 24– ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ವಿದ್ಯಾರ್ಥಿ ಮುಖಂಡರಿಗೆ ಪದಕ ಪ್ರದಾನ ಸಮಾರಂಭ ಆಯೋಜಿಸಲಾಗಿತ್ತು.

ಶಿಕ್ಷಣ ತಜ್ಞ ವಿಜಯಾ ನರಸಿಂಹಮ್, ವಿದ್ಯಾರ್ಥಿ ಮುಖಂಡರಿಗೆ ಪದಕಗಳನ್ನು ವಿತರಿಸಿ ಗೌರವಿಸಿದರು.

ನಂತರ ಮಾತನಾಡಿದ ಅವರು, ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ನಾಯಕತ್ವದ ಗುಣವನ್ನು ಉತ್ತಮಪಡಿಸಬಹುದೆಂದು ಅಭಿಪ್ರಾಯಪಟ್ಟರು.



ಮೈಸೂರಿನ ಮಹರ್ಷಿ ವಿದ್ಯಾ ಸಂಸ್ಥೆಯಲ್ಲಿ ವಿದ್ಯಾರ್ಥಿ ಮುಖಂಡರಿಗೆ ಪದಕ ಪ್ರದಾನ ಸಮಾರಂಭ ಆಯೋಜಿಸಲಾಗಿತ್ತು.

ಹಿರಿಯ ಪ್ರಾಚಾರ್ಯ ಗೋಪಾಲಸ್ವಾಮಿ ಮಾತನಾಡಿ, ವಿನಯವೇ ವಿದ್ಯೆಗೆ ಭೂಷಣ. ವಿದ್ಯಾರ್ಥಿಗಳು ಗುಣ, ಶ್ರಮ ಮತ್ತು ಉತ್ತಮ ನಡೆಯಿಂದ ಮಾತ್ರ ಭವಿಷ್ಯ ಉತ್ತಮಪಡಿಸಿಕೊಳ್ಳಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ, ದೇಶಭಕ್ತಿ ಗೀತೆ ಹಾಗೂ ಬ್ಯಾಂಡ್ ವೃಂದದಿಂದ ವಿವಿಧ ಸಂಗೀತ ಕಾರ್ಯಕ್ರಮ ನಡೆಯಿತು.

ಮಹರ್ಷಿ ವಿದ್ಯಾಸಂಸ್ಥೆಯ ಸಂಯೋಜಕ ತೇಜಸ್ ಬಿ.ಶಂಕರ್, ಪಬ್ಲಿಕ್ ಶಾಲೆಯ ಪ್ರಾಚಾರ್ಯ ಎ.ಕುಮಾರ್ ಹಾಗೂ ಸಮನ್ವಯಾಧಿಕಾರಿ ಅನಿತಾ ಬಿ ಎನ್, ಶಾಲೆಯ ಬೋಧಕ–ಬೋಧಕಿಯರು, ಶಿಕ್ಷಕರು ಮತ್ತು ಪೋಷಕರು ಕಾರ್ಯಕ್ರಮದಲ್ಲಿ ಹಾಜರಿದ್ದರು.

'ಬಂಗಾರದ ಮನುಷ್ಯ' ಚಿತ್ರ 9 ಬಾರಿ ನೋಡಿ ಪ್ರಗತಿಪರ ರೈತನಾದೆ

ಡಾ.ರಾಜ್‌ಕುಮಾರ್ ಚಲನಚಿತ್ರ ಗೀತಾ ಗಾಯನ ಸಮಾರಂಭದಲ್ಲಿ ಶಾಸಕ ಜಿ.ಟಿ.ದೇವೇಗೌಡರ ಅಭಿಮತ

ಮೈಸೂರು, ಜೂ.24(ಎಸ್‌ಪಿಎನ್)– ನಾನು, ವರನಟ ಡಾ.ರಾಜ್‌ಕುಮಾರ್ ಅಭಿಮಾನಿ. ಅವರು ನಟಿಸಿದ್ದ 'ಬಂಗಾರದ ಮನುಷ್ಯ' ಸಿನಿಮಾವನ್ನು ಬರೋಬ್ಬರಿ 9 ಬಾರಿ ನೋಡಿ, ಪ್ರಗತಿಪರ ರೈತನಾದೆ ಎಂದು ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದರು.

ಮೈಸೂರು ನಿವೇದಿತಾನಗರದ ಸುಬ್ಬರಾವ್ ಉದ್ಯಾನವನದಲ್ಲಿ ಡಾ.ರಾಜ್‌ಕುಮಾರ್ ಸ್ಮರಣಾರ್ಥ ಡಾ.ರಾಜ್‌ಕುಮಾರ್ ಮ್ಯೂಜಿಕಲ್ ಗ್ರೂಪ್ ಹಾಗೂ ಹಿರಿಯ ನಾಗರಿಕ ವೇದಿಕೆ ಸಹಯೋಗದೊಂದಿಗೆ 'ಅಣ್ಣಾವ್ರ ಹಾಡುಗಳು' ಶೀರ್ಷಿಕೆಯಡಿ ಆಯೋಜಿಸಿದ್ದ ಡಾ.ರಾಜ್‌ಕುಮಾರ್ ನಟಿಸಿರುವ ಚಲನಚಿತ್ರ ಗೀತ ಗಾಯನ ಸಮಾರಂಭದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.



'ಅಣ್ಣಾವ್ರ ಹಾಡುಗಳು' ಶೀರ್ಷಿಕೆಯಡಿ ಆಯೋಜಿಸಿದ್ದ ಡಾ.ರಾಜ್‌ಕುಮಾರ್ ನಟಿಸಿರುವ ಚಲನಚಿತ್ರ ಗೀತ ಗಾಯನ ಸಮಾರಂಭದಲ್ಲಿ ಡಾ.ರಾಜ್‌ಕುಮಾರ್ ಭಾವಚಿತ್ರಕ್ಕೆ ಶಾಸಕ ಜಿ.ಟಿ.ದೇವೇಗೌಡರು ಪುಷ್ಪ ನಮನ ಸಲ್ಲಿಸಿದರು.

'ಬಂಗಾರ ಮನುಷ್ಯ' ಚಿತ್ರ 1977ರಲ್ಲಿ ಬಿಡುಗಡೆಗೊಂಡಾಗ ಗ್ರಾಮೀಣ ಭಾಗದ ಜನರು ಗುಂಪು ಗುಂಪಾಗಿ ಸಿನಿಮಾ ಮಂದಿರಕ್ಕೆ ಬಂದು ನೋಡುತ್ತಿದ್ದರು. ನಾನು ಸಹ ಈ ಸಿನಿಮಾವನ್ನು ಒಂಭತ್ತು ಬಾರಿ ನೋಡಿ ಪ್ರಗತಿಪರ ರೈತನಾದ ಪ್ರಸಂಗವನ್ನು ಎಳೆಎಳೆಯಾಗಿ ಬಿಡಿಸಿದರಲ್ಲದೆ, ಡಾ.ರಾಜ್‌ಕುಮಾರ್ ಸಿನಿಮಾಗಳು ಕುಟುಂಬ ಸಮೇತ ನೋಡುವಂತಹದ್ದು. ಆದರೆ ಇತ್ತೀಚಿನ ಸಿನಿಮಾಗಳು ಜನಸಾಮಾನ್ಯರ ಆಕರ್ಷಿಸುವಲ್ಲಿ ವಿಫಲವಾಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಡಾ.ರಾಜ್‌ಕುಮಾರ್ ಅವರ ಹಿರಿಯ ಪುತ್ರಿ ಲಕ್ಷ್ಮಿ ಗೋವಿಂದರಾಜು ಅವರು ಈ ಕಾರ್ಯಕ್ರಮಕ್ಕೆ ಆಗಮಿಸಿದ್ದಾರೆ. ಅಲ್ಲದೆ, ಜನರು ಡಾ.ರಾಜ್ ಕುಟುಂಬದ ಮೇಲೆ ಇಂದಿಗೂ ಗೌರವ ಇಟ್ಟಿರುವುದೇ ಸಾಕ್ಷಿ ಎಂದ ಶಾಸಕರು, ಶ್ರೀನಿವಾಸ ಕಲ್ಯಾಣ ನಿರ್ಮಾಣದ ಎಸ್.ಎಸ್.ಶ್ರೀನಿವಾಸ್ ಅವರೂ ಈ ಕಾರ್ಯಕ್ರಮಕ್ಕೆ ಬಂದಿರುವುದು ಶೋಭೆ ಬಂದಿದೆ ಎಂದರು.

ನಿವೇದಿತಾನಗರದ ಸುಬ್ಬರಾವ್ ಪಾರ್ಕ್ ಅಭಿವೃದ್ಧಿಗೆ ಜೆ.ಎಸ್.ಜಗದೀಶ್ ನಗರ ಪಾಲಿಕೆ ಸದಸ್ಯರಾಗಿದ್ದಾಗ ಸಾಕಷ್ಟು ಶ್ರಮ ಪಟ್ಟಿರುವ ಹಿನ್ನೆಲೆಯಲ್ಲಿ ಈ ಪಾರ್ಕ್ ಜನರ ಆಕರ್ಷಣೆ ಕೇಂದ್ರಬಿಂದುವಾಗಿದೆ. ಜಗದೀಶ್ ಕಾಂಗ್ರೆಸ್‌ನಿಂದ ನಗರಪಾಲಿಕೆ ಸದಸ್ಯನಾಗಿ ಆಯ್ಕೆಯಾಗಿದ್ದಾಗ ಈ ಭಾಗದ ಅಭಿವೃದ್ಧಿಗೆ ಅಂದಾಜು 4.5 ಕೋಟಿ ರೂ. ಅನುದಾನ ನೀಡಿದ್ದೇನೆ. ನಾನು ಅಭಿವೃದ್ಧಿ ವಿಷಯದಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಎಂದು ಪಕ್ಷ ರಾಜಕಾರಣ ಮಾಡುವುದಿಲ್ಲ. ಮುಂದೆಯೂ ಮಾಡುವುದಿಲ್ಲ ಎಂದು ಭರವಸೆ ನೀಡಿದರು.

ಹಿರಿಯ ನಾಗರಿಕ ವೇದಿಕೆಯ ಪದಾಧಿಕಾರಿಗಳು ನಿವೇದಿತಾ ನಗರ ಪಾರ್ಕ್ ಮತ್ತು ಸುತ್ತಮುತ್ತಲಿನ ಬಡಾವಣೆಗೆ ಮೂಲ ಸೌಕರ್ಯಗಳ ಕೊರತೆ ಇದೆ ಎಂದು ಮನವಿ ಮಾಡಿದ್ದಾರೆ. ಈ ಸಮಸ್ಯೆಗಳನ್ನು ಮುಂದಿನ ದಿನಗಳಲ್ಲಿ ಹಂತಹಂತವಾಗಿ ಬಗೆಹರಿಸುತ್ತೇನೆ. ಅಲ್ಲದೆ, ನಿವೇದಿತಾ ನಗರ ಸೇರಿದಂತೆ ಸುತ್ತಮುತ್ತಲಿನ ಬಡಾವಣೆಗಳ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸುತ್ತೇನೆ ಎಂದರು.

ವೇದಿಕೆ ಕಾರ್ಯಕ್ರಮ ನಂತರ ಡಾ.ರಾಜ್‌ಕುಮಾರ್ ಮ್ಯೂಜಿಕಲ್ ಗ್ರೂಪ್‌ನ ಮೈಸೂರು ಜಯರಾಂ ನೇತೃತ್ವದ ಕಲಾವಿದರ ತಂಡದ ಡಾ.ಸುರೇಂದ್ರ, ಸುಧೀಂದ್ರ, ಸುರೇಶ್, ಪುಟ್ಟು, ಸರ್ವಮಂಗಳ, ಅಶ್ವಿನಿ, ಅನಿತಾ, ಧನ್ಯಶ್ರೀ ಡಾ.ರಾಜ್ ನಟಿಸಿರುವ ಚಿತ್ರದ ಹಾಡುಗಳನ್ನು ಹಾಡಿ, ಪ್ರೇಕ್ಷಕರ ಮನಗೆದ್ದರು. ಈ ವೇಳೆ ಜೆಡಿಎಸ್ ಮುಖಂಡ ಶೇಖರ್, ಹಿರಿಯ ನಾಗರಿಕರ ವೇದಿಕೆ ಪದಾಧಿಕಾರಿಗಳಾದ ಮಂಚೇಗೌಡ, ಬಸವರಾಜು, ನಿವೃತ್ತ ಪ್ರಾಧ್ಯಾಪಕ ಪ್ರೊ.ಎ.ನಾಗರಾಜ್, ನಂಜುಂಡಸ್ವಾಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕೊಡಗು ಜಿಲ್ಲೆ ಆಸ್ಪತ್ರೆಗಳ ಅಭಿವೃದ್ಧಿಗೆ 5 ಕೋಟಿ ರೂ.

● ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ ● ಕುಶಾಲನಗರದಲ್ಲಿ ಡಯಾಲಿಸಿಸ್ ಘಟಕ ಉದ್ಘಾಟನೆ

ಮಡಿಕೇರಿ, ಜೂ.24–ಕೊಡಗು ಜಿಲ್ಲೆಯ ಕುಶಾಲನಗರ, ಸೋಮವಾರಪೇಟೆ ಮತ್ತು ವಿರಾಜಪೇಟೆ ತಾಲೂಕು ಆಸ್ಪತ್ರೆಗಳ ಅಭಿವೃದ್ಧಿಗೆ 5 ಕೋಟಿ ರೂ. ಬಿಡುಗಡೆಗೊಳಿಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ ನೀಡಿದರು.



ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ರೋಗಿಂಯೊಬ್ಬರಿಗೆ ಡಯಾಲಿಸಿಸ್ ಮಾಡಲಾಯಿತು. ಸಚಿವ ದಿನೇಶ್ ಗುಂಡೂರಾವ್, ಶಾಸಕ ಡಾ.ಮಂತರ್‌ಗೌಡ ಇದ್ದರು.

ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನ ವತಿಯಿಂದ ನೂತನವಾಗಿ ಆರಂಭಿಸಿರುವ 'ಡಯಾಲಿಸಿಸ್ ಘಟಕ'ವನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದ ಅವರು, ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರ, ಸೋಮವಾರಪೇಟೆ ತಾಲೂಕಿನ ಆಸ್ಪತ್ರೆಗೆ ತಲಾ 1.75 ಕೋಟಿ ರೂ. ಹಾಗೂ ವಿರಾಜಪೇಟೆ ತಾಲೂಕು ಆಸ್ಪತ್ರೆಗೆ 2 ಕೋಟಿ ರೂ. ಸೇರಿದಂತೆ ಒಟ್ಟು 5 ಕೋಟಿ ರೂ. ನೀಡಲಾಗುತ್ತಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ 219 ಡಯಾಲಿಸಿಸ್ ಕೇಂದ್ರಗಳನ್ನು ಆರಂಭಿಸಿ, ಸುಮಾರು 800 ಯಂತ್ರಗಳನ್ನು ಅಳವಡಿಸಲಾಗಿದೆ. ಹೊಸ ತಾಲೂಕು ಕೇಂದ್ರಗಳಲ್ಲೂ ಆರೋಗ್ಯಕ್ಕೆ ಸಂಬಂಧಿಸಿದಂತೆ ಹೊಸ ಹೊಸ ಪ್ರಯೋಗ ಮಾಡಿ, ಸುಲಭವಾಗಿ ಸಾರ್ವಜನಿಕರಿಗೆ ಆರೋಗ್ಯ ಸೇವೆ ಕಲ್ಪಿಸುವ ನಿಟ್ಟಿನಲ್ಲಿ ಪ್ರಯತ್ನಿಸಲಾಗಿದೆ. ಈಗಾಗಲೇ ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರದಲ್ಲಿ 3 ಡಯಾಲಿಸಸ್ ಯಂತ್ರವನ್ನು ಅಳವಡಿಸಲಾಗಿದ್ದು, ಇನ್ನೊಂದನ್ನು ಅಳವಡಿಸಬಹುದು ಎಂದರು.

ಕುಶಾಲನಗರ ತಾಲೂಕು ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಪ್ರಸಕ್ತ ಬಜೆಟ್‌ನಲ್ಲಿ ಸೇರ್ಪಡೆಗೊಳಿಸಲು ಪ್ರಯತ್ನಿಸಲಾಗುವುದು. ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ ವೈದ್ಯರು, ಸಿಬ್ಬಂದಿ ಕೊರತೆ ಇದ್ದು, ಅವರನ್ನು ನಿಯೋಜಿಸಲು ಹಂತ ಹಂತವಾಗಿ ಕ್ರಮವಹಿಸಲಾಗುವುದು. ಗುತ್ತಿಗೆ ಆಧಾರದಲ್ಲೂ ನೇಮಕ ಮಾಡಿಕೊಳ್ಳಲು ಮುಂದಾಗುವುದು. ಇರುವ ವೈದ್ಯರು ಮತ್ತು ಸಿಬ್ಬಂದಿ ನಿಷ್ಠೆಯಿಂದ ಕರ್ತವ್ಯ ನಿರ್ವಹಿಸಬೇಕು. ರೋಗಿಗಳಿಗೆ ಉಪಚರಿಸುವುದು, ಅಗತ್ಯ ಆರೋಗ್ಯ ಸೇವೆ ಕಲ್ಪಿಸುವುದು ಮುಖ್ಯವಾಗಿದೆ ಎಂದು ತಿಳಿಸಿದರು.

ಮಡಿಕೇರಿ ಶಾಸಕ ಡಾ.ಮಂತರ್‌ಗೌಡ ಮಾತನಾಡಿ, ರಕ್ತದೊತ್ತಡ, ಮಧುಮೇಹ ಮತ್ತಿತರ ರೋಗಗಳಿಗೆ ಡಯಾಲಿಸಿಸ್ ಅತೀ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಡಯಾಲಿಸಿಸ್ ಘಟಕ ಆರಂಭಿಸುವ ಮೂಲಕ ಹಲವು ವರ್ಷಗಳ ಬೇಡಿಕೆಯನ್ನು ಈಡೇರಿಸಲಾಗಿದೆ ಎಂದ ಅವರು, ಕೂಡಿಗೆ ಕೈಗಾರಿಕಾ ಪ್ರದೇಶಕ್ಕೆ ಮಾಜಿ ಮುಖ್ಯಮಂತ್ರಿ ಗುಂಡೂರಾವ್ ಹೆಸರು ಇಡಲು ಚಿಂತಿಸಲಾಗಿದೆ. ಗುಂಡೂರಾವ್ ಹೆಸರು ಕುಶಾಲನಗರ ಹಾಗೂ ಕೊಡಗು ಜಿಲ್ಲೆಯಲ್ಲಿ ಶಾಶ್ವತವಾಗಿ ಉಳಿಯಬೇಕು. ಆ ನಿಟ್ಟಿನಲ್ಲಿ ಅಗತ್ಯ ಕ್ರಮವಹಿಸಲಾಗುವುದು ಎಂದರು.

ಬೆಟ್ಟಗುಡ್ಡ ಪ್ರದೇಶವಾಗಿರುವ ಕೊಡಗಿನ ಆಸ್ಪತ್ರೆಗಳ ವೈದ್ಯರು ಹಾಗೂ ಸಿಬ್ಬಂದಿಗೆ ಹೆಚ್ಚಿನ ವೇತನ ನೀಡಬೇಕು. ಹೆಬ್ಬಾಲೆ ಮತ್ತು ಸುಂಟಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಅವಕಾಶ ಮಾಡುವಂತೆ ಆರೋಗ್ಯ ಸಚಿವರಿಗೆ ಎಂದು ಇದೇ ವೇಳೆ ಮನವಿ ಮಾಡಿದರು.

ಇದೇ ವೇಳೆ ಜಿಲ್ಲಾಧಿಕಾರಿ ವೆಂಕಟ್ ರಾಜಾ, ಗ್ಯಾರಂಟಿ ಯೋಜನೆಗಳ ಜಿಲ್ಲಾ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಜ ಉತ್ತಪ್ಪ, ತಾಲೂಕು ಅಧ್ಯಕ್ಷ ಪಿ.ವಿ.ಶಶಿಧರ್, ಪ್ರಮುಖರಾದ ಕೆ.ಪಿ.ಚಂದ್ರಕಲಾ, ಚಂದ್ರಮೌಳಿ, ಮಂಜುನಾಥ್, ಕೆಡಿಪಿ ಸದಸ್ಯೆ ಸುನೀತಾ, ತಹಸೀಲ್ದಾರ್ ಕಿರಣ್ ಗೌರಯ್ಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿಭಾಗೀಯ ಜಂಟಿನಿರ್ದೇಶಕ ಡಾ.ಪ್ರಸಾದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್, ತಾಲೂಕು ವೈದ್ಯಾಧಿಕಾರಿಗಳು ಇದ್ದರು.

ಕ್ಷುಲ್ಲಕ ಕಾರಣಕ್ಕೆ ಉದ್ಯಮಿ ಮೇಲೆ ಗುಂಡು

● ಕುಶಾಲನಗರದಲ್ಲಿ ಘಟನೆ ● ಗಾಯಗೊಂಡ ಉದ್ಯಮಿ ಮೈಸೂರಿನ ಆಸ್ಪತ್ರೆಗೆ ದಾಖಲು ● ಇಬ್ಬರ ಬಂಧನ, ಬಂದೂಕು ವಶ



ಅನುದೀಪ್



ಲವ



ಶಶಿಕುಮಾರ್



ಶಶಿಕುಮಾರ್ ಕುಳಿತಿದ್ದ ಫಾರ್ಚೂನರ್ ಕಾರಿನ ಮುಂಭಾಗದ ಡೋರ್‌ಗೆ ಗುಂಡುಗಳು ತಗುಲಿರುವುದು.

ಮಡಿಕೇರಿ, ಜೂ.24–ಅವಾಚ್ಯ ಪದಗಳಿಂದ ನಿಂದಿಸಿ ಉದ್ಯಮಿ ಮೇಲೆ ಗುಂಡು ಹಾರಿಸಿ ಕೊಲೆ ಮಾಡಲು ಯತ್ನಿಸಿದ ಘಟನೆ ಕುಶಾಲನಗರದಲ್ಲಿ ಭಾನುವಾರ ತಡರಾತ್ರಿ ನಡೆದಿದೆ.

ಕುಶಾಲನಗರ ಕರಿಯಪ್ಪ ಬಡಾವಣೆ ನಿವಾಸಿ ರಿಯಲ್ ಎಸ್ಟೇಟ್ ಉದ್ಯಮಿ ಕೆ.ಎಸ್.ಶಶಿಕುಮಾರ್ ಎಂಬುವರ ಮೇಲೆ ಅನುದೀಪ್ ಎಂಬಾತ ಗುಂಡು ಹಾರಿಸಿದ್ದು, ಕಾರಿನೊಳಗೆ ಕುಳಿತಿದ್ದ ಶಶಿಕುಮಾರ್ ಕಾಲಿಗೆ ಗುಂಡೇಟು ತಗುಲಿದೆ.

ಭಾನುವಾರ ರಾತ್ರಿ ಕುಶಾಲನಗರ ಮುಖ್ಯ ರಸ್ತೆಯಲ್ಲಿ ಶಶಿಕುಮಾರ್ ಕಾರಿನಲ್ಲಿ ತೆರಳುತ್ತಿದ್ದಾಗ ಅನುದೀಪ್ ಕಾರನ್ನು ಓವರ್‌ಟೇಕ್ ಮಾಡಿ ಅವಾಚ್ಯ ಪದಗಳಿಂದ ನಿಂದಿಸಿ, ಗುಂಡು ಹಾರಿಸಿ ಕೊಲ್ಲುವುದಾಗಿ ಬೆದರಿಕೆ ಹಾಕಿ ತೆರಳಿದ್ದ. ಬಳಿಕ ಶಶಿಕುಮಾರ್ ಮನೆಗೆ ತೆರಳುವ ಸಂದರ್ಭ ಲವ ಕಾರ್ ನಿಲ್ಲಿಸಿದ್ದನ್ನು ಗಮನಿಸಿ ಶಶಿಕುಮಾರ್ ಅವರು ಅನುದೀಪ್ ಬಗ್ಗೆ ವಿಚಾರಿಸಿದ್ದಾರೆ. ಈ ವೇಳೆ ಅನುದೀಪ್ ಮನೆಗೆ ತೆರಳಿರುವುದಾಗಿ ಲವ ಮಾಹಿತಿ ನೀಡಿದ್ದ. ಶಶಿಕುಮಾರ್ ಅನುದೀಪ್ ಮನೆ ಬಳಿಗೆ ತೆರಳಿ ಕಾರಿನಲ್ಲಿ ಕುಳಿತಿದ್ದ ಸಂದರ್ಭ ಅನುದೀಪ್ ಏಕಾಏಕಿ ಜೋಡಿ ನಳಿಗೆ ಬಂದೂಕಿನಿಂದ ಶಶಿಕುಮಾರ್ ಕುಳಿತಿದ್ದ ಫಾರ್ಚೂನರ್ ಕಾರಿನ ಮೇಲೆ ಗುಂಡು ಹಾರಿಸಿದ್ದಾನೆ. ಕಾರಿನ ಮುಂಭಾಗದ ಡೋರ್ ಒಳಗಿನಿಂದ ತೂರಿ ಬಂದ ಗುಂಡುಗಳು ಶಶಿಕುಮಾರ್ ಕಾಲಿಗೆ ತಗುಲಿದ್ದು, ಗಾಯಗಳಾಗಿದೆ.

ಈ ಕುರಿತು ಶಶಿಕುಮಾರ್ ನೀಡಿದ ದೂರನ್ನು ಆಧರಿಸಿ ಕುಶಾಲನಗರ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಗುಂಡು ಹಾರಿಸಿದ ಆರೋಪಿ ಗುಮ್ಮನಕೊಲ್ಲಿ ನಿವಾಸಿ ಅನುದೀಪ್ ಹಾಗೂ ಕೃತ್ಯಕ್ಕೆ ಪ್ರಚೋದನೆ ನೀಡಿದ ಆರೋಪದಿ ಕಾಲಭೈರವೇಶ್ವರ ಬಡಾವಣೆ ನಿವಾಸಿ ಲವ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ. ಕೃತ್ಯಕ್ಕೆ ಬಳಸಲಾದ ಜೋಡಿ ನಳಿಗೆ ಬಂದೂಕನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಕ್ರಮ ಕೈಗೊಂಡಿದ್ದಾರೆ. ಗುಂಡೇಟಿನಿಂದ ಗಾಯಗೊಂಡಿರುವ ಶಶಿಕುಮಾರ್ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಮೈಸೂರು ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

ವಿನಾಯಿತಿ ರದ್ದಿಗೆ ಶಿಫಾರಸು: ಆರೋಪಿ ಅನುದೀಪ್ ಜಮ್ಮಾ ವಿನಾಯಿತಿ ಮೇಲೆ ತಾನು ಹೊಂದಿದ್ದ ಬಂದೂಕನ್ನು ದುರುಪಯೋಗಪಡಿಸಿಕೊಂಡಿರುವುದು ಹಾಗೂ ಏಕಾಏಕಿ ಪ್ರಚೋದನೆಗೊಂಡು ಆತ್ಮಹತ್ಯೆ ಅಥವಾ ಕೊಲೆ ಮಾಡುವ ಸಾಧ್ಯತೆಗಳಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಸದರಿ ಬಂದೂಕು ಜಮ್ಮಾ ವಿನಾಯಿತಿಯನ್ನು ರದ್ದುಗೊಳಿಸಲು ಕೊಡಗು ಜಿಲ್ಲಾಧಿಕಾರಿಗೆ ಪೊಲೀಸ್ ಇಲಾಖೆ ಶಿಫಾರಸು ಮಾಡಿದೆ.

ಖಾಲಿ ಹುದ್ದೆಗಳಿಗೆ ತಜ್ಞ ವೈದ್ಯರ ನೇಮಕ

ಸೋಮವಾರಪೇಟೆ: ಇಲ್ಲಿನ ಸಾರ್ವಜನಿಕ ಆಸ್ಪತ್ರೆಯ ಖಾಲಿ ಹುದ್ದೆಗಳಿಗೆ ತಜ್ಞ ವೈದ್ಯರನ್ನು ನೇಮಿಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ ನೀಡಿದರು.



ದಿನೇಶ್ ಗುಂಡೂರಾವ್

ಸೋಮವಾರಪೇಟೆ ಆಸ್ಪತ್ರೆಗೆ ಭೇಟಿ ನೀಡಿ, ಡಿಹೆಚ್‌ಓ ಸತೀಶ್ ಕುಮಾರ್, ತಾಲೂಕು ವೈದ್ಯಾಧಿಕಾರಿ ಇಂದೂಧರ್ ಅವರಿಂದ ಮಾಹಿತಿ ಪಡೆದರು. ನಂತರ ಮಾತನಾಡಿ ಸಚಿವರು, ಶಸ್ತ್ರಚಿಕಿತ್ಸಕರು, ಮೂಳೆ, ಅರವಳಿಕೆ ತಜ್ಞರು, ರೇಡಿಯಾಲಜಿಸ್ಟ್, ಗೈನಾಕಾಲಜಿಸ್ಟ್ ಹುದ್ದೆಗಳು ಖಾಯಂ ಆಗಿದ್ದರೆ, ಎಲ್ಲಾ ಚಿಕಿತ್ಸೆಗಳನ್ನು ನೀಡಬಹುದು. ಈ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಡಯಾಲಿಸಿಸ್ ಉತ್ತಮ ರೀತಿ ಕಾರ್ಯನಿರ್ವಹಿಸುತ್ತಿದೆ. ಹೆಚ್ಚಿನ ಹಾಸಿಗೆಗಳ ಅವಶ್ಯಕತೆ ಇದ್ದರೆ ಇಲಾಖೆಯಿಂದ ಅನುದಾನ ಒದಗಿಸಲಾಗುವುದು. ಆಸ್ಪತ್ರೆ ರಿಪೇರಿ ಕೆಲಸಕ್ಕೆ 1.70 ಕೋಟಿ ರೂ. ಅನುದಾನ ನೀಡುತ್ತೇವೆ. ಆಪರೇಷನ್ ಥಿಯೇಟರ್ ಉನ್ನತೀಕರಣ ಕೈಗೊಳ್ಳಲಾಗುವುದು ಎಂದು ಹೇಳಿದರು.

ಗುತ್ತಿಗೆ ಆಧಾರದಲ್ಲಿ ವೈದ್ಯರ ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗೆ ಅಧಿಕಾರ ನೀಡಲಾಗಿದೆ. 1.25 ಲಕ್ಷ ರೂ. ಸಂಬಳ ನೀಡುತ್ತಿದ್ದರೂ ಗ್ರಾಮೀಣ ಆಸ್ಪತ್ರೆಗಳಿಗೆ ವೈದ್ಯರು ಬರುತ್ತಿಲ್ಲ. ಸಂಬಳ ಹೆಚ್ಚು ಮಾಡುವ ಬಗ್ಗೆ ಸರ್ಕಾರದೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು. ಇದೇ ವೇಳೆ ಶಾಸಕ ಡಾ.ಮಂತರ್‌ಗೌಡ ಮಾತನಾಡಿ, ಅರವಳಿಗೆ ತಜ್ಞರು ಆಗಮಿಸಿದ ತಕ್ಷಣ ಸಾಧ್ಯವಾಗುವ ಶಸ್ತ್ರಚಿಕಿತ್ಸೆಗಳನ್ನು ಆಸ್ಪತ್ರೆಯಲ್ಲಿ ನಿರ್ವಹಿಸಬೇಕು ಎಂದು ಆಡಳಿತ ವೈದ್ಯಾಧಿಕಾರಿ ಮಂಜುಳಾ ಅವರಿಗೆ ಸೂಚಿಸಿದರು.

ಎಸ್ಪಿಗೆ ಬಿಜೆಪಿ ಮುಖಂಡರ ಮನವಿ ಸಲ್ಲಿಕೆ

ಮಡಿಕೇರಿ, ಜೂ.24– ಬಿಜೆಪಿ ಬಗ್ಗೆ ಅವಹೇಳನ ಮಾಡಿ ಜಿಲ್ಲೆಯಲ್ಲಿ ಅಶಾಂತಿ ಮೂಡಿಸುವ ರೀತಿ ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಮಾಹಿತಿ ಹಾಕಿರುವ ಮಡಿಕೇರಿ ನಿವಾಸಿ ತೆನ್ನಿರ ಮೈನಾ ವಿರುದ್ಧ ಕ್ರಮ ವಹಿಸಬೇಕು ಎಂದು ಒತ್ತಾಯಿಸಿ ಬಿಜೆಪಿ ಮುಖಂಡರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರಿಗೆ ಮನವಿ ಸಲ್ಲಿಸಿದರು.

ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಮಾಡಿರುವ ರಾಜ್ಯ ಸರ್ಕಾರದ ಕ್ರಮ ವಿರೋಧಿಸಿ ವಿರಾಜಪೇಟೆ ಯಲ್ಲಿ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರ ವಿರುದ್ಧ ತೆನ್ನಿರ ಮೈನಾ ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಮಾಹಿತಿ ನೀಡಿ, ಅವಹೇಳನ ಮಾಡಿದ್ದಾರೆ. ಪ್ರತಿಭಟನೆಯನ್ನು ಗುರಿಯಾಗಿಸಿಕೊಂಡು 'ಕೋತಿಗಳು ಸಾರ್



ತೆನ್ನಿರ ಮೈನಾ ವಿರುದ್ಧ ಕ್ರಮ ವಹಿಸಬೇಕು ಎಂದು ಒತ್ತಾಯಿಸಿ ಬಿಜೆಪಿ ಮುಖಂಡರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರಿಗೆ ಮನವಿ ಸಲ್ಲಿಸಿದರು.

ಕೋತಿಗಳು ಕಳ್ಳು ಕುಡಿದ ಕೋತಿ ಗಳು' ಎಂಬ ಹೆಸರಿನ ಪ್ರಚೋದನಾಕಾರಿ ಬರಹದಲ್ಲಿ ಬಿಜೆಪಿ ಕಾರ್ಯಕರ್ತರನ್ನು ದಂಧೆಕೋರರು ಎಂದು ದೂಷಿಸಿ ಅವಹೇಳನ ಮಾಡಿದ್ದಾರೆ.

ಬಿಜೆಪಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ. ಇದರಿಂದ ಸಮಾಜದಲ್ಲಿ ಅಶಾಂತಿ ಉಂಟು ಮಾಡುವ ಉದ್ದೇಶವಾಗಿದೆ. ಆದ್ದರಿಂದ ತೆನ್ನಿರ ಮೈನಾ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಒತ್ತಾಯಿಸಿದ್ದಾರೆ.

ಇದೇ ವೇಳೆ ಮಾಜಿ ಶಾಸಕರಾದ ಕೆ.ಜಿ.ಬೋಪಯ್ಯ, ಎಂ.ಪಿ.ಅಪ್ಪಚ್ಚು ರಂಜನ್, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ಅಧ್ಯಕ್ಷ ಎಂ.ಎಂ.ರವೀಂದ್ರ, ಪ್ರಧಾನ ಕಾರ್ಯದರ್ಶಿಗಳಾದ ಮಹೇಶ್ ಜೈನಿ, ವಿ.ಕೆ.ಲೋಕೇಶ್, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಪಿ.ಎಂ.ರವಿ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಅನಿತಾ ಪೂವಯ್ಯ ಮತ್ತಿತರರು ಹಾಜರಿದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹ

ಮಡಿಕೇರಿ: ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ ಕಾರ್ಯಕರ್ತರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಜಿಲ್ಲೆಯಲ್ಲಿ ಒತ್ತುವರಿ ಸರ್ಕಾರಿ ಜಾಗವನ್ನು ಕಡಿಮೆ ದರಕ್ಕೆ ಗುತ್ತಿಗೆ ನೀಡುವ ಆದೇಶವನ್ನು ತಕ್ಷಣ ಹಿಂಪಡೆಯಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿದರು.

ಹಿಂದೆ ಬಿಜೆಪಿ ಸರ್ಕಾರ ತೆಗೆದುಕೊಂಡ ನಿರ್ಧಾರದಂತೆ ಇಂದು ಕಾಂಗ್ರೆಸ್ ಸರ್ಕಾರ ಉಳ್ಳವರಿಗೆ ಗುತ್ತಿಗೆ ಆಧಾರದಲ್ಲಿ ಜಮೀನು ನೀಡಲು ಮುಂದಾಗಿದೆ. ಇದರಿಂದ ಕಡು ಬಡತನದಲ್ಲಿರುವ ಆದಿವಾಸಿ, ದಲಿತ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ವಂಚನೆಯಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇಂತಹ ಜನವಿರೋಧಿ ಆದೇಶವನ್ನು ತಕ್ಷಣ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಸಿಐಟಿಯು ಜಿಲ್ಲಾ ಅಧ್ಯಕ್ಷ ಪಿ.ಆರ್.ಭರತ್, ಕಾರ್ಯದರ್ಶಿ ಎ.ಸಿ.ಸಾಬು ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೆಸ್ತೂರು ಗ್ರಾಮದಲ್ಲಿ ಭಗೀರಥ ಜಯಂತಿ



ಕೆಸ್ತೂರು ಗ್ರಾಮದಲ್ಲಿ ನಡೆದ ಭಗೀರಥ ಮಹರ್ಷಿ ಜಯಂತಿ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಯಳಂದೂರು: ತಾಲೂಕಿನ ಕೆಸ್ತೂರು ಗ್ರಾಮದಲ್ಲಿ ಶ್ರೀ ಭಗೀರಥ ಮಹರ್ಷಿ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಗ್ರಾಮದ ಗದ್ದೆಯ ಮನೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಗೀರಥ ಮಹರ್ಷಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ನಂತರ ಬೆಳ್ಳಿರಥದಲ್ಲಿ ಭಗೀರಥ ಮಹರ್ಷಿ ಭಾವಚಿತ್ರವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಯಜಮಾನರು ಮತ್ತು ಭಗೀರಥ ಯುವಕ ಸಂಘದ ನೇತೃತ್ವದಲ್ಲಿ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಮುಖಂಡ ಗೌಡಹಳ್ಳಿ ಮಹೇಶ್, ಡಾಕ್ಟರ್ ಅಮರ್, ವಕೀಲ ಮಾದೇಶ್, ಯಜಮಾನರಾದ ಡಿ.ನಾಗರಾಜು, ಪುಟ್ಟಸ್ವಾಮಿ, ಶ್ರೀಕಂಠಶೆಟ್ಟಿ, ರಂಗಸ್ವಾಮಿ, ನಿಂಗರಾಜು, ನಾರಾಯಣ್ ಸ್ವಾಮಿ, ಗವಿಸಿದ್ದಶೆಟ್ಟಿ, ಗ್ರಾಪಂ ಮಾಜಿ ಅಧ್ಯಕ್ಷ ಬಾಲುಪ್ರಸಾದ್, ಮುಖಂಡರಾದ ಪ್ರಕಾಶ್, ದಾಸ, ಸಿದ್ದರಾಜು, ಆನಂದ್ ಹಾಜರಿದ್ದರು.

ಚಾಮರಾಜನಗರ ವಿವಿ ಮೊದಲ ಪದವಿ ಫಲಿತಾಂಶ ಪ್ರಕಟ

ಚಾಮರಾಜನಗರ, ಜೂ.24–ಚಾಮರಾಜನಗರ ವಿಶ್ವವಿದ್ಯಾಲಯದ ಹಲವು ಸವಾಲುಗಳ ನಡುವೆ ಮೊದಲ ಬಾರಿಗೆ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳಿಗೆ ನಡೆದ ಪರೀಕ್ಷೆಗಳ ಫಲಿತಾಂಶ ಪ್ರಕಟಿಸಿದ್ದು, ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆದುಕೊಂಡಿದ್ದಾರೆ.

ಚಾಮರಾಜನಗರ ವಿಶ್ವವಿದ್ಯಾಲಯ ಮೊಟ್ಟ ಮೊದಲ ಬಾರಿಗೆ 2023–24ನೇ ಸಾಲಿನ ಮೊದಲು ವರ್ಷದ ಸ್ನಾತಕ ಮತ್ತು ಸ್ನಾತಕೋತ್ತರ ವಿವಿಧ ಪದವಿ ಫಲಿತಾಂಶ ಪ್ರಕಟಿಸಿದೆ. ಕಳೆದ ಜನವರಿ, ಫೆಬ್ರವರಿ, ಮಾರ್ಚ್, ಏಪ್ರಿಲ್‌ನಲ್ಲಿ ನಡೆದ ಸ್ನಾತಕೋತ್ತರ ಎಂಎ ವಿಭಾಗದ ಕನ್ನಡ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಜಾನಪದ ಹಾಗೂ ಎಂಎಸ್ಸಿ ವಿಭಾಗದ ಭೌತಶಾಸ್ತ್ರ, ರಸಾಯನಶಾಸ್ತ್ರ, ವಾಣಿಜ್ಯ, ಸಮಾಜ ಸೇವಾ ಕಾರ್ಯ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, ಎಂಬಿಎ ಪದವಿಗಳಿಗೆ ಪರೀಕ್ಷೆ ನಡೆಸಿತ್ತು.

ಸ್ನಾತಕ ಪದವಿಗಳಲ್ಲಿ ಒಟ್ಟು 2400 ಮತ್ತು ಸ್ನಾತಕೋತ್ತರ ಪದವಿಗಳಲ್ಲಿ 360 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ವಿದ್ಯಾರ್ಥಿಗಳು ತಮ್ಮ ಫಲಿತಾಂಶವನ್ನು UUCMS ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು ಎಂದು ಚಾಮರಾಜನಗರ ವಿವಿಯ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಗೀರಥ ಕ್ರಿಕೆಟ್ ಪಂದ್ಯಾವಳಿಗೆ ಎಡಿಸಿ ಚಾಲನೆ...



ಚಾಮರಾಜನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಚಾಮರಾಜನಗರ ಫ್ರೆಂಡ್ಸ್ ಕ್ರಿಕೆಟ್ ಕ್ಲಬ್ ವತಿಯಿಂದ ಆಯೋಜಿಸಿದ್ದ ಭಗೀರಥ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಗೆ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಬ್ಯಾಟ್ ಬೀಸುವ ಮೂಲಕ ಚಾಲನೆ ನೀಡಿದರು. ಪಂದ್ಯಾವಳಿ ಆಯೋಜಕರಾದ ಮಾರ್ಕೆಟ್ ಅಧ್ಯಕ್ಷ ಕಿಟ್ಟಿ, ಕೆಟಿಆರ್ ಮಹೇಶ್, ರುದ್ರ, ಜವರ, ಸಲೀಂ, ಮಂಜು ಎಂ.ಶೆಟ್ಟಿ, ರಾಹುಲ್, ಪ್ರದೀಪ್, ಪ್ರಕಾಶ್, ಫೈನಾಪಲ್ ಮಂಜು, ಸುವರ್ಣ ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ಸಿದ್ದರಾಜು, ತಾಲೂಕು ಅಧ್ಯಕ್ಷ ಶಿವಣ್ಣ, ಚನ್ನಶೆಟ್ಟಿ, ಶ್ರೀನಿವಾಸ್, ಪ್ರಕಾಶ್ ಜೈನ್, ಮಂಜು, ಶಿವಕುಮಾರ್, ಹರೀಶ್ ಇದ್ದರು.

ಬಿತ್ತನೆ ಬೀಜ, ರಸಗೊಬ್ಬರ ಕೊರತೆ ಆಗಬಾರದು

ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಸಚಿವ ಕೆ.ವೆಂಕಟೇಶ್ ಸೂಚನೆ



ಚಾಮರಾಜನಗರ ಜಿಪಂ ಸಭಾಂಗಣದಲ್ಲಿ ನಡೆದ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಮಾತನಾಡಿದರು.

ಚಾಮರಾಜನಗರ, ಜೂ.24–ಜಿಲ್ಲೆಯಲ್ಲಿ ಇತ್ತೀಚೆಗೆ ಉತ್ತಮ ಮಳೆಯಾಗಿದ್ದು, ಮುಂದಿನ ದಿನಗಳಲ್ಲಿ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಹೀಗಾಗಿ ರೈತರಿಗೆ ಅಗತ್ಯವಾದ ಬಿತ್ತನೆ ಬೀಜ, ರಸಗೊಬ್ಬರ ಪೂರೈಕೆಯಲ್ಲಿ ಕೊರತೆಯಾಗದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ನಡೆದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಕೃಷಿ ಚಟುವಟಿಕೆಗೆ ಅಗತ್ಯವಿರುವ ನೆರವು ಒದಗಿಸಬೇಕು. ಜಿಲ್ಲೆಯಲ್ಲಿ ಬಿತ್ತನೆ ಪ್ರಮಾಣವನ್ನು ಹೆಚ್ಚಿಸಲು ಆಯಾ ಋತುವಿನಲ್ಲಿ ಬೆಳೆಯುವ ಬೆಳೆಗಳ ಬಗ್ಗೆ ರೈತರಿಗೆ ಅರಿವು ಮೂಡಿಸಬೇಕು. ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಎಲ್ಲಾ ತಾಲೂಕುಗಳಲ್ಲಿ ಕ್ಷೇತ್ರ ಪ್ರವಾಸ ಮಾಡಿ, ಈ ಬಗ್ಗೆ ಭಾವಚಿತ್ರದ ಸಮೇತ ದಾಖಲು ಮಾಡಬೇಕು ಎಂದರು.

ಜಿಲ್ಲೆಯಲ್ಲಿ ಈ ಬಾರಿ ಮಳೆ ಗಾಳಿಯಿಂದ 1110 ಎಕರೆ ಬಾಳೆಬೆಳೆ ನಷ್ಟವಾಗಿದ್ದು, ಈ ಬಗ್ಗೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ ರೈತರಿಗೆ ನಷ್ಟದ ಪರಿಹಾರವನ್ನು ಶೀಘ್ರವಾಗಿ ಒದಗಿಸಬೇಕು. ಬಾಳೆ ಬೆಳೆ ಸಮೀಕ್ಷೆ ವ್ಯಾಪ್ತಿಗೆ ಸೇರಿಸಲು ಅಗತ್ಯ ಕ್ರಮವಹಿಸುವಂತೆ ಸಚಿವರು ಅಧಿಕಾರಿಗಳಿಗೆ ತಿಳಿಸಿದರು.

ಸಂತೇಮರಹಳ್ಳಿ, ಯಳಂದೂರು, ಕೊಳ್ಳೇಗಾಲ ಹಾಗೂ ಮಾಂಬಳ್ಳಿ ಭಾಗದಲ್ಲಿರುವ ರೇಷ್ಮೆ ತರಬೇತಿ ಕೇಂದ್ರಗಳ ತಾಂತ್ರಿಕತೆಗೆ ಅನುಗುಣವಾಗಿ ಪುನಶ್ಚೇತನಗೊಳಿಸಲು ಏನೇನು ಕ್ರಮ ಮಾಡಬೇಕಿದೆ ಎಂಬುದರ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಸಚಿವರು, ರೇಷ್ಮೆ ಬೆಳೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಕ್ರಮವಹಿಸಬೇಕು. ರೇಷ್ಮೆ ಮತ್ತು ತೆಂಗು ಬೆಳೆಗಳು ಜನರಿಗೆ ಆದಾಯ ತರುವುದರಿಂದ ಜಿಲ್ಲೆಯಲ್ಲಿ ರೇಷ್ಮೆ ಬೆಳೆಗಾರರನ್ನು ಪ್ರೇರೆಪಿಸಬೇಕಿದೆ ಎಂದು ತಿಳಿಸಿದರು.

ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಚಾಮರಾಜನಗರ ಜಿಲ್ಲೆ ರೈತರು ಹೆಚ್ಚಾಗಿ ಮಳೆಯನ್ನೇ ಆಶ್ರಯಿಸಿದ್ದಾರೆ. ಜಿಲ್ಲೆಯಲ್ಲಿ ಹಲವರಿಗೆ ಖಾತೆ ವಿಳಂಬದಿಂದ ಸರ್ಕಾರದ ಸೌಲಭ್ಯ ಲಭ್ಯವಾಗುತ್ತಿಲ್ಲ. ಫಸಲ್ ಬಿಮಾ ಯೋಜನೆಯಿಂದ ಯಾವುದೇ ಅನುಕೂಲವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಪರಿಶಿಷ್ಟ ಜಾತಿ, ವರ್ಗಗಳ ರೈತರಿಗೆ ಖಾತೆ ಮಾಡಿಕೊಡಲು ಸಂಬಂಧಪಟ್ಟ ಗ್ರಾಮಲೆಕ್ಕಿಗರಿಗೆ ಗುರಿ ನಿಗದಿಪಡಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಇದಕ್ಕೆ ಉತ್ತರಿಸಿದ ಜಿಲ್ಲಾಧಿಕಾರಿ ಶಿಲ್ಪ ನಾಗ್, ಜಿಲ್ಲೆಯಲ್ಲಿ ಖಾತೆ ಆಂದೋಲನ ಹಮ್ಮಿಕೊಳ್ಳಲಾಗುತ್ತಿದೆ. ಆಂದೋಲನವನ್ನು ಪರಿಣಾಮಕಾರಿಯಾಗಿಸಲು ಅರಣ್ಯ ಸೇರಿದಂತೆ ಇತರೆ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಗ್ರಾಮಲೆಕ್ಕಿಗರಿಗೆ ಮಾಹೆವಾರು ಗುರಿ ನಿಗದಿ ಮಾಡಲಾಗುತ್ತದೆ ಎಂದು ತಿಳಿಸಿದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಎಂ.ಆರ್.ಮಂಜುನಾಥ್, ಹೆಚ್.ಎಂ.ಗಣೇಶ್ ಪ್ರಸಾದ್, ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ, ವಿಧಾನಪರಿಷತ್ ಸದಸ್ಯರಾದ ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಪಂಚ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ಚಂದ್ರು ಜಿಪೋ ಸಿಇಓ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಮಹದೇಶ್ವರಬೆಟ್ಟದ ವನ್ಯಜೀವಿ ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿ ಡಾ.ಸಂತೋಷ್ ಕುಮಾರ್, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಪಂ ಉಪಕಾರ್ಯದರ್ಶಿ ಪಿ.ಲಕ್ಷ್ಮೀ ಸಭೆಯಲ್ಲಿ ಉಪಸ್ಥಿತರಿದ್ದರು.

ಚಾಮರಾಜನಗರ ತಾಲೂಕು ಕುರುಬರ ಸಂಘದ ಚುನಾವಣೆ

ಎಸ್‌ಪಿಕೆ ಉಮೇಶ್ ಬಣ ಮೇಲುಗೈ

ಚಾಮರಾಜನಗರ, ಜೂ.24–ಚಾಮರಾಜನಗರ ತಾಲೂಕು ಕುರುಬರ ಸಂಘದ ಮೂರು ವರ್ಷಗಳ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಎಸ್‌ಪಿಕೆ ಉಮೇಶ್ ಬಣ 25 ಮಂದಿ ಆಯ್ಕೆಯಾಗುವ ಮೂಲಕ ಸಂಘದ ಆಡಳಿತವನ್ನು ಹಿಡಿಯುವಲ್ಲಿ ಯಶಸ್ವಿಯಾಗಿದೆ.



ಚಾಮರಾಜನಗರ ತಾಲೂಕು ಕುರುಬರ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಮೇಲುಗೈ ಸಾಧಿಸಿದ ಎಸ್‌ಪಿಕೆ ಉಮೇಶ್ ಬಣ.

ನಗರದ ಕರಿನಂಜನಪುರ ರಸ್ತೆಯ ಸಿದ್ದಾರ್ಥ ಕಾಲೇಜಿನಲ್ಲಿ ಸೋಮವಾರ ನಡೆದ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಸದಸ್ಯರು ಮತ ಚಲಾಯಿಸಿದರು. ಬಳಿಕ ನಡೆದ ಮತ ಎಣಿಕೆಯಲ್ಲಿ ಎಸ್‌ಪಿಕೆ ಉಮೇಶ್ ಬೆಂಬಲಿಗರು ಮೇಲುಗೈ ಸಾಧಿಸಿ, ಅಂತಿಮವಾಗಿ 25 ಮಂದಿ ಗೆಲುವು ಸಾಧಿಸಿದರು.

ನಿರ್ದೇಶಕರು: ಕಸಬಾ ಹೋಬಳಿಯಿಂದ ಆರ್.ಉಮೇಶ್ ಎಸ್‌ಪಿಕೆ, ಮಹದೇವಸ್ವಾಮಿ, ಮರಿಸ್ವಾಮಿ, ಜಯರಾಮ್, ಎಂ.ಪಿ.ರಾಜು, ಬಿ.ಮಂಜು, ಶಿವಸ್ವಾಮಿ, ಉಷಾ. ಎಸ್.ಸಂತೇಮರಹಳ್ಳಿಯಿಂದ ಜಿ. ನಟರಾಜು, ಕೆ.ಎಸ್.ಕುಮಾರ್, ಚಿಕ್ಕರಾಜು, ಎನ್.ಚಂದ್ರ, ಪ್ರಭು, ಜಿ.ಮಹೇಶ್, ಎಚ್.ಎಂ.ಶಿವಕುಮಾರ್. ಹರವೆ ಹೋಬಳಿಯಿಂದ ಎಂ.ಮಹೇಶ್, ಬೆಳ್ಳೇಗೌಡ, ಕೆ.ಪಿ.ನಾಗರಾಜು, ಪುನೀತ್‌ಕುಮಾರ್, ಡಿ.ಎಂ.ಮಂಜುನಾಥ್. ಚಂದಕವಾಡಿ ಹೋಬಳಿಯಿಂದ (ಅವಿರೋಧ ಆಯ್ಕೆ) ರೇವಣ್ಣ, ರಾಜೇಶ್ ಕೆ.ಬಂಗಾರೇಗೌಡ, ರಾಜಶೇಖರ್. ಎಸ್.ಹರದನಹಳ್ಳಿ ಹೋಬಳಿಯಿಂದ ಪಿ.ಬಸವಣ್ಣ, ಮಹದೇವ್, ಚನ್ನೇಗೌಡ, ಶಿವಕುಮಾರ್, ನಗರಸಭೆ ವ್ಯಾಪ್ತಿಯಿಂದ ಮಹದೇವಸ್ವಾಮಿ, ಗೋವಿಂದ, ಸೂರ್ಯಕುಮಾರ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಂಘದ ಚುನಾವಣಾಧಿಕಾರಿ ಕೆ.ಎಂ.ತ್ಯಾಗರಾಜ ಪ್ರಸಾದ್ ತಿಳಿಸಿದ್ದಾರೆ.

ಸಮಾಜದ ಅಭಿವೃದ್ಧಿಗೆ ಬದ್ಧ: ಸಂಘದ ಎಲ್ಲಾ ಸದಸ್ಯರು ಹಾಗೂ ಸಮಾಜದವರು ನಮ್ಮ ಮೇಲೆ ವಿಶ್ವಾಸವಿಟ್ಟು ಹೆಚ್ಚು ಮತ ನೀಡಿ, ಆಯ್ಕೆ ಮಾಡಿರುವುದಕ್ಕೆ ನಾನು ಆಭಾರಿಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಜಿಲ್ಲಾ ಕೇಂದ್ರದ ಕುರುಬರ ಸಂಘವನ್ನು ಇನ್ನು ಹೆಚ್ಚಿನ ರೀತಿ ಅಭಿವೃದ್ಧಿ ಪಡಿಸಲು ಬದ್ಧನಾಗಿರುವುದಾಗಿ ಎಸ್‌ಕೆಪಿ ಉಮೇಶ್ ತಿಳಿಸಿದರು.

ಆಸೀಸ್ ವಿರುದ್ಧ ಗೆಲುವು: ಭಾರತ ಸೆಮಿಫೈನಲ್‌ಗೆ



ಗ್ರಾಸ್ ಐಲೆಟ್, ಜೂ.24– ನಾಯಕ ರೋಹಿತ್ ಶರ್ಮಾ ಅವರ ಸಿಡಿಲಬ್ಬರದ ಬ್ಯಾಟಿಂಗ್ ನೆರವಿನಿಂದ ಭಾರತ ಆಸ್ಟ್ರೇಲಿಯಾ ವಿರುದ್ಧ 24 ರನ್‌ಗಳ ಭರ್ಜರಿ ಜಯ ಸಾಧಿಸಿ ಸೆಮಿಫೈನಲ್‌ಗೆ ಎಂಟ್ರಿ ಕೊಟ್ಟಿದೆ. ಆ ಮೂಲಕ ಏಕದಿನ ವಿಶ್ವಕಪ್ ಫೈನಲ್ ಸೋಲಿನ ಸೇಡನ್ನು ಭಾರತ ತೀರಿಸಿಕೊಂಡಿತು. ಇಲ್ಲಿನ ಡ್ಯಾರನ್ ಸ್ಯಾಮಿ ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ವಿಶ್ವಕಪ್ ಸೂಪರ್–8 ರೋಚಕ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 205 ರನ್‌ಗಳ ಬೃಹತ್ ಮೊತ್ತ ಪೇರಿಸಿತು. 206 ರನ್‌ಗಳ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 181 ರನ್ ಗಳನ್ನಷ್ಟೇ ಗಳಿಸಲು ಶಕ್ತವಾಯಿತು.

ಆಸೀಸ್ ಪರ ಇನ್ನಿಂಗ್ಸ್ ಆರಂಭಿಸಿದ ಡೇವಿಡ್ ವಾರ್ನರ್ 6 ರನ್ ಗಳಿಸಿ ನಿರ್ಗಮಿಸಿದರು. ಆದರೆ ಟ್ರಾವಿಸ್ ಹೆಡ್ ಮತ್ತು ಮಿಚೆಲ್ ಮಾರ್ಷ್ ಎರಡನೇ ವಿಕೆಟಿಗೆ 81 ರನ್ ಜೊತೆಯಾಟವಾಡಿ ಚೇತರಿಕೆ ನೀಡಿದರು. ಈ ವೇಳೆ ನಾಯಕ ಮಿಚೆಲ್ ಮಾರ್ಷ್ 37 ರನ್ ಗಳಿಸಿ ಔಟಾದರೆ ಗ್ಲೆನ್ ಮ್ಯಾಕ್ಸ್‌ವೆಲ್ 20 ರನ್‌ಗೆ ಆಟ ಮುಗಿಸಿದರು. ಮಾರ್ಕಸ್ ಸ್ಟೊಯಿನಿಸ್ 2, ಮ್ಯಾಥ್ಯೂ ವೇಡ್ 1 ರನ್ ಗಳಿಸಿ ಔಟಾದರು. ಕಮಿನ್ಸ್ 11 ರನ್, ಸ್ಟಾರ್ಕ್ 4 ರನ್ ಗಳಿಸಿ ಔಟಾಗದೆ ಉಳಿದರು. ವಿಕೆಟ್ ಉರುಳುತ್ತಿದ್ದರೂ ಮತ್ತೊಂದೆಡೆ ಏಕಾಂಗಿ ಹೋರಾಟ ನಡೆಸಿದ ಟ್ರಾವಿಸ್ ಹೆಡ್ 43 ಎಸೆತಗಳಲ್ಲಿ 9 ಬೌಂಡರಿ, 4 ಸಿಕ್ಸರ್ ಒಳಗೊಂಡ 76 ರನ್ ಗಳಿಸಿ ಬೂಮ್ರಾಗೆ ವಿಕೆಟ್ ಒಪ್ಪಿಸಿದರು.

ಭಾರತದ ಪರ ಅರ್ಷದೀಪ್ ಸಿಂಗ್ 3, ಕುಲದೀಪ್ ಯಾದವ್ 2, ಬುಮ್ರಾ ಮತ್ತು ಅಕ್ಷರ್ ಪಟೇಲ್ ತಲಾ ಒಂದೊಂದು ವಿಕೆಟ್ ಕಿತ್ತರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತದ ಪರ ವಿರಾಟ್ ಕೊಹ್ಲಿ ಶೂನ್ಯಕ್ಕೆ ಔಟಾದರು. ಮತ್ತೊಂದೆಡೆ ಸ್ಫೋಟಕ ಆಟ ವಾಡಿದ ನಾಯಕ ರೋಹಿತ್ ಶರ್ಮಾ ಕೇವಲ 19 ಎಸೆತಗಳಲ್ಲಿ ಅರ್ಧಶತಕ ಸಿಡಿಸಿ ಮಿಂಚಿದರು. ಈ ವೇಳೆ ರೋಹಿತ್ ಶರ್ಮಾ ಟಿ20 ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ 200 ಸಿಕ್ಸರ್ ಬಾರಿಸಿದ ಮೊದಲ ಕ್ರಿಕೆಟಿಗನೆಂಬ ದಾಖಲೆ ಬರೆದರು. ಅಲ್ಲದೇ ಆಸ್ಟ್ರೇಲಿಯಾ ವಿರುದ್ಧ 132 ಸಿಕ್ಸರ್ ಬಾರಿಸಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ತಂಡವೊಂದರ ವಿರುದ್ಧ ಅತ್ಯಧಿಕ ಸಿಕ್ಸರ್ ಹೊಡೆದ ಕ್ರಿಕೆಟಿಗನೆನಿಸಿದರು. ಅಂತಿಮವಾಗಿ 42 ಎಸೆತಗಳಲ್ಲಿ 8 ಸಿಕ್ಸರ್, 7 ಬೌಂಡರಿ ಒಳಗೊಂಡ 92 ರನ್ ಗಳಿಸಿ ಔಟಾಗುವ ಮೂಲಕ ಕೇವಲ 8 ರನ್‌ಗಳಿಂದ ಶತಕದಿಂದ ವಂಚಿತರಾದರು. ಉಳಿದಂತೆ ರಿಷಭ್ ಪಂತ್ 15, ಸೂರ್ಯಕುಮಾರ್ ಯಾದವ್ 31, ಶಿವಂ ದುಬೆ 28, ಹಾರ್ದಿಕ್ ಪಾಂಡ್ಯ ಔಟಾಗದೇ 27, ಜಡೇಜಾ ಔಟಾಗದೇ 9 ರನ್ ಗಳಿಸಿದರು. ಆಸೀಸ್ ಪರ ಬೌಲಿಂಗ್‌ನಲ್ಲಿ ಮಾರ್ಕಸ್ ಸ್ಟೋಯಿನಿಸ್, ಮಿಚೆಲ್ ಸ್ಟಾರ್ಕ್ ತಲಾ 2, ಜೋಸ್ ಹ್ಯಾಸಲ್‌ವುಡ್ ಒಂದು ವಿಕೆಟ್ ಪಡೆದರು. ಭಾರತದ ಪರ ರೋಹಿತ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣ

ಸಂತ್ರಸ್ತನ ವಿರುದ್ಧ ದೂರು ನೀಡಿದ್ದವನೇ ಉಲ್ಟಾ; ಸೂರಜ್ ರೇವಣ್ಣನ ವಿರುದ್ಧವೇ ಸ್ಫೋಟಕ ಮಾಹಿತಿ ಬಹಿರಂಗ

● ಸಂತ್ರಸ್ತ ಅತೀ ಸೂಕ್ಷ್ಮ ಮನಸ್ಸುಳ್ಳವನು; ಆತ ಅಪಾಯ ಮಾಡಿಕೊಳ್ಳಬಹುದು ● ದೂರು ನಾನು ನೀಡಿದ್ದಲ್ಲ ಅವರೇ ಪ್ರೀ ಪ್ಲಾನ್ ಆಗಿ ದೂರು ದಾಖಲಿಸಿದರು; ಸೂರಜ್ ವಿರುದ್ಧ ಆರೋಪ ● ಖಾಸಗಿ ಚಾನಲ್‌ನಲ್ಲಿ ವಿವರ ಬಹಿರಂಗಗೊಳಿಸಿದ ಶಿವಕುಮಾರ್

ಮೈಸೂರು, ಜೂ. 24– ಜೆಡಿಎಸ್ ಕಾರ್ಯಕರ್ತನ ಮೇಲೆ ಅಸಹಜ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇರೆಗೆ ಬಂಧಿತನಾಗಿರುವ ವಿಧಾನಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಅವರಿಗೆ ಮತ್ತಷ್ಟು ಸಂಕಷ್ಟ ಎದುರಾಗಿದೆ. ಈ ಪ್ರಕರಣದ ಸಂತ್ರಸ್ತ, ಸೂರಜ್ ಅವರನ್ನು ಬ್ಲಾಕ್ ಮೇಲ್ ಮಾಡುತ್ತಿದ್ದಾನೆ ಎಂದು ಪೊಲೀಸರಿಗೆ ದೂರು ಸಲ್ಲಿಸಿದ್ದ ಪ್ರಜ್ವಲ್ ಬ್ರಿಗೇಡ್ ಖಜಾಂಚಿ ಶಿವಕುಮಾರ್ ಉಲ್ಟಾ ಹೊಡೆದಿದ್ದಾನೆ.

ಸೂರಜ್ ರೇವಣ್ಣ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ 2ನೇ ಆರೋಪಿಯಾಗಿರುವ ಅವರು, ಜೂ. 21ರಂದು ಸಂತ್ರಸ್ತನ ವಿರುದ್ಧ ಹೊಳೆನರಸೀಪುರ ಟೌನ್ ಠಾಣೆಯಲ್ಲಿ ದೂರು ದಾಖಲಿಸಿದ ನಂತರ ನಿಗೂಢವಾಗಿ ನಾಪತ್ತೆಯಾಗಿದ್ದರು.

ಇದೀಗ ಅವರು ಖಾಸಗಿ ಚಾನೆಲ್‌ವೊಂದರಲ್ಲಿ ಪ್ರತ್ಯಕ್ಷರಾಗಿ, ತನ್ನ ಸ್ನೇಹಿತನೂ ಆದ ಸಂತ್ರಸ್ತನ ವಿರುದ್ಧ ಸೂರಜ್ ರೇವಣ್ಣ ತನ್ನಿಂದ ಬಲವಂತವಾಗಿ ಸುಳ್ಳು ದೂರು ದಾಖಲಿಸುವಂತೆ ಮಾಡಿದ್ದರು. ಸಂತ್ರಸ್ತ ಮಾತ್ರವಲ್ಲದೇ ತನಗೂ ಕೂಡ ಸೂರಜ್ ರೇವಣ್ಣ ಕಡೆಯವರಿಂದ ಜೀವ ಬೆದರಿಕೆ ಇದೆ ಎಂದು ಬಾಂಬ್ ಸಿಡಿಸಿದ್ದಾರೆ. ಸಂತ್ರಸ್ತನ ಮೇಲೆ ಜೂ. 16ರಂದು ಸೂರಜ್ ರೇವಣ್ಣ ಅಸಹಜ ಲೈಂಗಿಕ ದೌರ್ಜನ್ಯ ನಡೆಸಿದ್ದರು. ಮರುದಿನ ಸಂತ್ರಸ್ತ ತನಗೆ ವಾಟ್ಸಾಪ್ ಮೂಲಕ ಈ ವಿಚಾರವನ್ನು ತಿಳಿಸಿದ್ದು, ತನಗೇನಾದರೂ ಅನಾಹುತವಾದರೆ ತನ್ನ ಕುಟುಂಬದವರಿಗೆ ಸಹಾಯ ಮಾಡುವಂತೆ ಸೂರಜ್ ಅವರಿಗೆ ಹೇಳುವಂತೆ ಕೋರಿದ್ದ ಎಂದ ಶಿವಕುಮಾರ್, ಈ ಹಿಂದೆ ತನ್ನ ಸಹೋದ್ಯೋಗಿಯಾಗಿದ್ದ ಸಂತ್ರಸ್ತ, ಸೂಕ್ಷ್ಮ ಮನಸ್ಥಿತಿಯವನಾಗಿದ್ದು, ಜೀವಕ್ಕೇನಾದರೂ ಅಪಾಯ ಮಾಡಿಕೊಳ್ಳಬಹುದು ಎಂಬ ಆತಂಕದಿಂದ ತಾನು ಅವನನ್ನು ಭೇಟಿಯಾಗಿದ್ದಾಗಿ ತಿಳಿಸಿರುವ ಆತ, ಸಂತ್ರಸ್ತ ಕಳಿಸಿದ್ದ ಮೆಸೇಜ್ ಅನ್ನು ಸೂರಜ್ ಅವರಿಗೆ ಫಾರ್ವರ್ಡ್ ಮಾಡಿದ್ದಾಗಿ ಹೇಳಿದ್ದಾರೆ. ತಾನು ಭೇಟಿಯಾದಾಗ ಸಂತ್ರಸ್ತ ಪೊಲೀಸರಿಗೆ ದೂರು ಕೊಡುವುದಾಗಿ ತಿಳಿಸಿದ್ದು, ಈ ವಿಚಾರವನ್ನು ತಾನು ಸೂರಜ್ ಅವರಿಗೆ ಕರೆ ಮಾಡಿ ತಿಳಿಸಿದಾಗ, ಅವರು ಆತನೊಂದಿಗೆ ಹಾಸನಕ್ಕೆ ತೆರಳುವಂತೆಯೂ, ಪೊಲೀಸರಿಗೆ ದೂರು ಕೊಡದಂತೆ ಮನವೊಲಿಸುವಂತೆಯೂ ಹೇಳಿದರು. ಬಿ.ಕಾಂ. ಪದವೀಧರನಾಗಿರುವ ಸಂತ್ರಸ್ತನಿಗೆ ಡಿಸಿಸಿ ಬ್ಯಾಂಕ್ ಅಥವಾ ಮದರ್ ಡೈರಿಯಲ್ಲಿ ಕೆಲಸ ಕೊಡಿಸುವುದಾಗಿ ಹೇಳಿದ್ದರು. ಅಲ್ಲದೇ, ಖಾಸಗಿ ಹಣಕಾಸು ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ನಾನು, ಚುನಾವಣೆಯಲ್ಲಿ ಪ್ರಜ್ವಲ್ ಪರ ಕೆಲಸ ಮಾಡಲು ನನ್ನ ಕೆಲಸಕ್ಕೆ ರಾಜೀನಾಮೆ ನೀಡಿದ್ದೆ. ಆ ಕೆಲಸವನ್ನು ಮತ್ತೆ ನನಗೇ ಕೊಡಿಸುವುದಾಗಿಯೂ ಸೂರಜ್ ತಿಳಿಸಿದ್ದರು. ನಾನು ಎಷ್ಟೇ ಮನವೊಲಿಸಿದರೂ ಸಂತ್ರಸ್ತ ಜಗ್ಗದಿದ್ದಾಗ ಆ ವಿಚಾರವನ್ನು ಸೂರಜ್‌ಗೆ ಹೇಳಿದ್ದಲ್ಲದೇ ನನ್ನ ಮೊಬೈಲ್‌ನಿಂದಲೇ ಸೂರಜ್ ಅವರಿಗೆ ಕರೆ ಮಾಡಿ ಸಂತ್ರಸ್ತನಿಗೆ ಕೊಟ್ಟಾಗ ಅವರಿಬ್ಬರು ಸ್ವಲ್ಪ ಹೊತ್ತು ಮಾತನಾಡಿದ್ದರು ಎಂದು ಶಿವಕುಮಾರ್ ತಿಳಿಸಿದ್ದಾರೆ.



ಸೂರಜ್ ರೇವಣ್ಣ

ನಂತರ ಸಂತ್ರಸ್ತನ ಮೊಬೈಲ್‌ಗೆ ಅಪರಿಚಿತ ಸಂಖ್ಯೆಯಿಂದ ಮೆಸೇಜ್ ಕಳುಹಿಸಲಾಗಿದ್ದು, ಸೂರಜ್ ಅವರು ಆ ಮೆಸೇಜ್ ಅನ್ನು ಸಂತ್ರಸ್ತನ ಮೊಬೈಲ್‌ನಿಂದ ನನ್ನ ಮೊಬೈಲ್‌ಗೆ ಫಾರ್ವರ್ಡ್ ಮಾಡಿಕೊಳ್ಳುವಂತೆ ತಿಳಿಸಿದ್ದರು. ಅದರಂತೆ ನಾನು ಫಾರ್ವರ್ಡ್ ಮಾಡಿಕೊಂಡು ಅವರಿಗೂ ಕೂಡ ಕಳುಹಿಸಿದ್ದೆ. ಅದು ಎಂಎಲ್‌ಸಿ (ಮೆಡಿಕಲ್ ಲೀಗಲ್ ಕೇಸ್) ಕಾಪಿಯಾಗಿತ್ತು ಎಂದು ಹೇಳಿದ್ದಾರೆ.




ಶಿವಕುಮಾರ್

ಸಂತ್ರಸ್ತನ ಬಿಡದೇ ಹಿಂಬಾಲಿಸುವಂತೆಯೂ ಆತನನ್ನು ಮನವೊಲಿಸಲೇಬೇಕೆಂದು ಸೂರಜ್ ನನಗೆ ಒತ್ತಾಯಿಸುತ್ತಿದ್ದರು. ನಾವು ಹಾಸನದಲ್ಲಿದ್ದಾಗ ಸೂರಜ್ ಕಡೆಯವರಿಬ್ಬರು ಕಾರಿನಲ್ಲಿ ಬಂದಿದ್ದು, ಸಂತ್ರಸ್ತನಿಗೆ ಅಪಾಯವಾಗಬಹುದೆಂದು ನಾವು ಜಾಗ ಖಾಲಿ ಮಾಡಿದ್ದೆವು.

ಸೂರಜ್ ಸೂಚನೆ ಮೇರೆಗೆ ಹೊಳೆನರಸೀಪುರದ ಲಾಡ್ಜ್‌ನಲ್ಲಿ ರೂಂ ಬುಕ್ ಮಾಡಿ ಸಂತ್ರಸ್ತನ ಜೊತೆ ಒಂದು ರಾತ್ರಿ ಇದ್ದೆ. ಆದರೆ, ಬೆಳಗ್ಗೆ ಆತ ನಾಪತ್ತೆಯಾಗಿದ್ದ ಎಂದಿರುವ ಶಿವಕುಮಾರ್, ಈ ವಿಚಾರವನ್ನು ಸೂರಜ್ ಅವರಿಗೆ ಹೇಳಲಾಗಿ ಅವರು ನನ್ನನ್ನು ಅವರ ತೋಟದ ಮನೆಗೆ ಕರೆಸಿಕೊಂಡು ಮೊಬೈಲ್ ಮೂಲಕ ಸಂತ್ರಸ್ತನಿಗೆ ಕರೆ ಮಾಡಿಸಿ, 'ನೀನು 5 ಕೋಟಿ ರೂ. ಕೇಳಿದ್ದೆಯಲ್ಲಾ, 2 ಕೋಟಿ ರೂ. ಕೊಡುತ್ತಾರೆ. ಫೈನಲ್ ಆಗಿ ನಿನಗೆ ಎಷ್ಟು ಬೇಕು ಹೇಳು' ಎಂದು ಮಾತನಾಡಿಸಿ, ಅದನ್ನು ರೆಕಾರ್ಡ್ ಮಾಡಿಕೊಂಡರು. ಆದರೆ, ನಾನು ಹಾಗೆ ಮಾತನಾಡಿದಾಗ ತಾನು ಬೆಂಗಳೂರಿನಲ್ಲಿದ್ದು, ಡಿಜಿ ಅವರಿಗೆ ದೂರು ಕೊಡುತ್ತಿದ್ದೇನೆ. ಪವರ್ ಟಿವಿಗೆ ಸಂದರ್ಶನ ಕೊಡುತ್ತಿದ್ದೇನೆ. ನಮ್ಮ ಮನೆಯವರಿಗೆ ಏನಾದರೂ ತೊಂದರೆ ಆದರೆ ಅದಕ್ಕೆ ಸೂರಜ್ ಮತ್ತು ನೀನು (ಶಿವಕುಮಾರ್) ಕಾರಣ ಎಂದು ಸಂತ್ರಸ್ತ ತಿರುಗಿಬಿದ್ದಿದ್ದ. ಸಂತ್ರಸ್ತನನ್ನು ಮನವೊಲಿಸಲು ಸಾಧ್ಯವಾಗದ ಕಾರಣ ಸೂರಜ್ ರೇವಣ್ಣ ಅವರು ಸಂತ್ರಸ್ತನ ವಿರುದ್ಧ ಪೊಲೀಸರಿಗೆ ದೂರು ನೀಡುವಂತೆ ನನ್ನನ್ನು ಕೇಳಿದರು. ಗುರುವಾರ (ಜೂ. 20) ಮಧ್ಯಾಹ್ನ ನನ್ನನ್ನು ಹೊಳೆನರಸೀಪುರ ಗ್ರಾಮಾಂತರ ಠಾಣೆಗೆ ಕರೆದುಕೊಂಡು ಹೋದ ಅವರ ಕಡೆಯ ಇಬ್ಬರು ಹುಡುಗರು ದೂರು ಕೊಡುವಂತೆ ಕೇಳಿದಾಗ ಸೂರಜ್ ಅವರು ಕೂಡ ಠಾಣೆಯಲ್ಲೇ ಇದ್ದರು. ನಾನು ದೂರು ಕೊಡಲು ನಿರಾಕರಿಸಿದಾಗ ನನ್ನನ್ನು ಹೊಳೆನರಸೀಪುರದಲ್ಲಿರುವ ಅವರ ಮನೆಗೆ ಕರೆದುಕೊಂಡು ಹೋಗಿ, 'ನನ್ನ ಕಷ್ಟಕ್ಕೆ ನಿನ್ನನ್ನು ಬಿಟ್ಟರೆ ಯಾರೂ ಇಲ್ಲ' ಎಂದು ಪರಿಪರಿಯಾಗಿ ದೂರು ಕೊಡುವಂತೆ ಬೇಡಿಕೊಂಡರು. ನನ್ನ ಕಾಲು ಹಿಡಿಯಲು ಬಂದರು. ನಾನು ಒಪ್ಪಿಕೊಂಡ ನಂತರ ಜೂ.20ರಂದು ರಾತ್ರಿ 12.30ರ ಸುಮಾರಿನಲ್ಲಿ ಹೊಳೆನರಸೀಪುರ ಟೌನ್ ಠಾಣೆಗೆ ನನ್ನನ್ನು ಕರೆದುಕೊಂಡು ಹೋದರು. ದೂರನ್ನು ಪೊಲೀಸ್ ಠಾಣೆಯಲ್ಲಿ ಪೊಲೀಸರೇ ಟೈಪ್ ಮಾಡಿ ಪ್ರಿಂಟ್‌ಔಟ್ ಕೊಟ್ಟರು. ಅದರಲ್ಲಿ ಏನು ಬರೆದಿದೆ ಎಂದು ಓದಲೂ ನನಗೆ ಅವಕಾಶ ನೀಡದೇ ಸಹಿ ಪಡೆದಿದ್ದಲ್ಲದೇ ಅದನ್ನು ಸ್ಕ್ಯಾನ್ ಮಾಡಿಕೊಂಡು, ಹೊಸ ಮೊಬೈಲ್ ತಂದು ಅದರಲ್ಲಿ ನನ್ನ ಸಿಮ್ ಕಾರ್ಡ್ ಹಾಕಿ ವಾಟ್ಸಾಪ್ ಮೂಲಕ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ದೂರಿನ ಪ್ರತಿಯನ್ನು ರವಾನಿಸಿದ್ದಾರೆ.

ಸೂರಜ್ ರೇವಣ್ಣ ಹಾಗೂ ಅವರ ಕಡೆಯಿಂದ ನನಗೆ ಜೀವಭಯವಿರುವ ಕಾರಣ ನಾನು ಊರನ್ನು ತೊರೆದು ಬೆಂಗಳೂರಿಗೆ ಬಂದಿದ್ದೇನೆ. ಪೊಲೀಸರ ಮುಂದೆ ಈ ಎಲ್ಲಾ ವಿಚಾರಗಳನ್ನೂ ಹೇಳುವುದಲ್ಲದೇ ಸೂರಜ್ ವಿರುದ್ಧ ನಾನೂ ದೂರು ದಾಖಲಿಸುತ್ತೇನೆ ಎಂದು ಸೂರಜ್ ಬ್ರಿಗೇಡ್ ಖಜಾಂಚಿ ಶಿವಕುಮಾರ್ ತನ್ನ ಸಂದರ್ಶನದಲ್ಲಿ ಹೇಳಿದ್ದಾರೆ.

ಬಿ.ಸಂದೀಪ್ ಅವರಿಗೆ ಹುಟ್ಟುಹಬ್ಬದ ಶುಭಾಶಯ



ದೇವರಾಜ ಮಾರ್ಕೆಟ್ ಯುವ ಬ್ರಿಗೇಡ್ ಅಧ್ಯಕ್ಷ ಬಿ.ಸಂದೀಪ್ ಅವರ ಹುಟ್ಟುಹಬ್ಬ ಅವರನ್ನು ಸೋಮವಾರ ಅಕ್ಷಯ ಸಂಸ್ಥೆ ವತಿಯಿಂದ ಆಚರಿಸಿ, ಶುಭ ಕೋರಲಾಯಿತು. ಈ ವೇಳೆ ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಆರ್.ಪರಮೇಶ್, ವಿಕ್ರಂ ಅಯ್ಯಂಗಾರ್, ಯೋಗೇಶ್, ರವಿಚಂದ್ರ, ಕಿರಣ್, ಸುರೇಂದ್ರ, ಶರವಣ, ಅಭಿಷೇಕ್, ವಿನೋದ್, ಲಕ್ಷ್ಮಿ, ಯೋಗಾನಂದ ಹಾಗೂ ಇನ್ನಿತರ ಸ್ನೇಹಿತರು, ಬಂಧುಗಳು ಉಪಸ್ಥಿತರಿದ್ದರು.

ಬೆಂಗಳೂರಿನ ಕಿಂಗ್ ಫಿಶರ್ ಟವರ್ ಸೇರಿ 11 ಪ್ರತಿಷ್ಠಿತ ಬಿಲ್ಡರ್‌ಗಳ ಮನೆ, ಕಚೇರಿಗಳ ಮೇಲೆ ಇಡಿ ದಾಳಿ

ಬೆಂಗಳೂರು: ಬೆಂಗಳೂರು ಹಾಗೂ ಮೈಸೂರಿನ ಹಲವು ಕಡೆ ಬಿಲ್ಡರ್‌ಗಳಿಗೆ ಜಾರಿ ನಿರ್ದೇಶನಾಲಯ ಶಾಕ್ ನೀಡಿದೆ. ಎರಡೂ ನಗರಗಳ 11 ಕಡೆಗಳಲ್ಲಿ ಬಿಲ್ಡರ್‌ಗಳ ಮನೆ ಹಾಗೂ ಕಚೇರಿಗಳಿಗೆ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಬೆಂಗಳೂರಿನ ಯುಬಿ ಸಿಟಿಯ ಕಿಂಗ್ ಫಿಶರ್ ಟವರ್, ಮಲ್ಲೇಶ್ವರಂ, ಬಸವೇಶ್ವರ ನಗರ, ಬನ್ನೇರುಘಟ್ಟ ರೋಡ್, ಹನುಮಂತನಗರ ಹಾಗೂ ಮೈಸೂರಿನ ಎರಡು ಸ್ಥಳಗಳಲ್ಲಿ ಇಡಿ ಅಧಿಕಾರಿಗಳು ದಾಳಿ ಮಾಡಿ, ದಾಖಲೆಗಳ ಪರಿಶೀಲನೆ ನಡೆಸಿದರು. ದಾಳಿಗೆ ಒಳಗಾದ ಹಲವು ಬಿಲ್ಡರ್‌ಗಳ ಹೆಸರು ಸೈಟ್ ಕೊಡಿಸುವುದಾಗಿ ಹೇಳಿ ವಂಚನೆ, ಆಸ್ತಿಪತ್ರ ಅವ್ಯವಹಾರ, ರಿಯಲ್ ಎಸ್ಟೇಟ್ ಆಸ್ತಿಗಳ ಮೌಲ್ಯದಲ್ಲಿ ಅಕ್ರಮ, ತೆರಿಗೆ ನೋಂದಣಿಯಲ್ಲಿ ಕಳ್ಳತನ, ಹೀಗೆ ಹಲವು ಅವ್ಯವಹಾರಗಳು ಕೇಳಿಬಂದಿವೆ ಎನ್ನಲಾಗಿದೆ. ಈ ಬಗ್ಗೆ ನೊಂದವರು ಹಾಗೂ ಬಿಲ್ಡರ್‌ಗಳ ಸಮೀಪವರ್ತಿಗಳು ದೂರು ನೀಡಿದ ಹಿನ್ನೆಲೆಯಲ್ಲಿ ದಾಳಿ ನಡೆಸಲಾಗಿದೆ. ಕೆಲವು ತಿಂಗಳ ಹಿಂದೆ ಅಕ್ರಮ ಹಣ ಲೇವಾದೇವಿ ನಡೆದಿದೆ ಎಂಬ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಬೆಂಗಳೂರಿನಲ್ಲಿ ಎಂಟು ಕಡೆ ದಾಳಿ ನಡೆಸಿ 11.5 ಕೋಟಿ ರೂ. ವಶಪಡಿಸಿಕೊಂಡಿದ್ದರು.

ಡಿಪ್ಲೋಮಾ ಸಿಇಟಿ ಪರೀಕ್ಷೆಯ ತಾತ್ಕಾಲಿಕ ಸರಿ ಉತ್ತರ ಪ್ರಕಟ

ಆಕ್ಷೇಪಣೆ ಸಲ್ಲಿಸಲು ಜೂ.26 ಕೊನೆಯ ದಿನ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA) ಡಿಸಿಇಟಿ–2024ರ ತಾತ್ಕಾಲಿಕ ಸರಿ ಉತ್ತರಗಳನ್ನು ತನ್ನ ವೆಬ್‌ಸೈಟ್ www.kea.kar.nic.in ನಲ್ಲಿ ಪ್ರಕಟಿಸಿದೆ. ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಅವರು ಸೋಮವಾರ ಪತ್ರಿಕಾ ಪ್ರಕಟಣೆ ನೀಡಿ, ಪ್ರಕಟಿಸಿರುವ ತಾತ್ಕಾಲಿಕ ಉತ್ತರಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಆಕ್ಷೇಪಣೆ ಸಲ್ಲಿಸಲು ಬಯಸಿದಲ್ಲಿ, ಪ್ರಾಧಿಕಾರದ ಆನ್‌ಲೈನ್ ಪೋರ್ಟಲ್ ಮೂಲಕ ಮಾತ್ರವೇ ಜೂನ್ 26ರ ಬೆಳಿಗ್ಗೆ 11ರೊಳಗಾಗಿ ಸಲ್ಲಿಸಬಹುದು ಎಂದು ಸೂಚಿಸಿದ್ದಾರೆ.

ಆಕ್ಷೇಪಣೆಗಳನ್ನು ಸಲ್ಲಿಸುವ ಸಂದರ್ಭದಲ್ಲಿ ವರ್ಷನ್ ಕೋಡ್, ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆ ಸಂಖ್ಯೆಯ ವಿವರಗಳನ್ನು ನಮೂದಿಸಿ, ಅದಕ್ಕೆ ಪೂರಕ ಸಮರ್ಥನೆಗಳನ್ನು ಪಿಡಿಎಫ್ ರೂಪದಲ್ಲಿ ಸಲ್ಲಿಸಬೇಕು. ಪ್ರಶ್ನೆ ಸಂಖ್ಯೆ ಅಥವಾ ವರ್ಷನ್ ಕೋಡ್ ನಮೂದಿಸದೆ ಅಥವಾ ಆಧಾರ ರಹಿತವಾಗಿ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ವಿಷಯ ತಜ್ಞರ ಸಮಿತಿಯು ನಿರ್ಧರಿಸಿ ನೀಡುವ ಕೀ ಉತ್ತರಗಳನ್ನು ಅಂತಿಮ ಎಂದು ಪರಿಗಣಿಸಲಾಗುತ್ತದೆ. ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಮೈಸೂರು ಡಿಡಿಪಿಐ ಎಸ್.ಟಿ.ಜವರೇಗೌಡ

ಮೈಸೂರು, ಜೂ.24(ಎಸ್‌ಪಿಎನ್)– ಮೈಸೂರು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ (ಆಡಳಿತ)ರಾಗಿ ಎಸ್.ಟಿ.ಜವರೇಗೌಡ ಅವರನ್ನು ರಾಜ್ಯ ಸರ್ಕಾರ ನೇಮಕ ಮಾಡಿ ಸೋಮವಾರ ಆದೇಶಿಸಿದೆ.



ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ ಅರ್ಜಿ ಸಂಖ್ಯೆ:3427/2023ರ ಪ್ರಕರಣದ ತೀರ್ಪು 21/03/2024 ಅನ್ವಯ ಹಾಸನ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾಗಿದ್ದ ಎಸ್.ಟಿ.ಜವರೇಗೌಡ ಅವರನ್ನು ಮೈಸೂರಿನ ಹೆಚ್.ಕೆ. ಪಾಂಡು ಅವರ ಜಾಗಕ್ಕೆ ವರ್ಗಾಯಿಸಿ ಇಲಾಖೆಯ ಅಧೀನ ಕಾರ್ಯದರ್ಶಿ (ಆಡಳಿತ) ಮಲ್ಲಿಕಾರ್ಜುನ ರಾಮಚಂದ್ರಪ್ಪ ಆದೇಶಿಸಿದ್ದಾರೆ.

ಉಚಿತ ಆರೋಗ್ಯ ಶಿಬಿರ

ಮೈಸೂರು.ಜೂ.24– ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಹೊರ ರೋಗಿ ಶಲ್ಯತಂತ್ರ ವಿಭಾಗದಲ್ಲಿ ಜೂನ್ 26 ಹಾಗೂ 27 ರಂದು ದುಷ್ಟವ್ರಣ ಸಂಬಂಧಿಸಿದ ತೊಂದರೆಗಳಿಗೆ ಉಚಿತ ಆರೋಗ್ಯ ಶಿಬಿರವನ್ನು ಬೆಳಿಗ್ಗೆ 10 ರಿಂದ ಮಧ್ಯಾಹ್ನ 4 ಗಂಟೆಯವರೆಗೆ ಆಯೋಜಿಸಲಾಗಿದೆ. ದೂ.ಸಂ: 7975491224

ಕಲಬುರಗಿಯ ವಿಮಾನ ನಿಲ್ದಾಣಕ್ಕೆ ಬಾಂಬ್ ಬೆದರಿಕೆ!

ಕಲಬುರಗಿ: ಕಲಬುರಗಿ ವಿಮಾನ ನಿಲ್ದಾಣಕ್ಕೆ ಸೋಮವಾರ ಇಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿದ್ದು, ಶೋಧ ಕಾರ್ಯ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ವಿಮಾನ ನಿಲ್ದಾಣದ ಆವರಣದಲ್ಲಿ ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನ ದಳದಿಂದ ತಪಾಸಣೆ ನಡೆಸಲಾಗುತ್ತಿದೆ.



ಇಂದು ಬೆಳಿಗ್ಗೆ ಅನಾಮಧೇಯ ಐಡಿಯಿಂದ ವಿಮಾನ ನಿಲ್ದಾಣದ ಆವರಣದಲ್ಲಿ ಬಾಂಬ್ ಇಡಲಾಗಿದೆ ಎಂದು ವಿಮಾನ ನಿಲ್ದಾಣದ ನಿರ್ದೇಶಕರಿಗೆ ಇಮೇಲ್ ಬಂದಿತ್ತು ಎಂದು ವಿಮಾನ ನಿಲ್ದಾಣ ನಗರ ಪೊಲೀಸ್ ಆಯುಕ್ತ ಆರ್.ಚೇತನ್ ಪಿಟಿಐಗೆ ತಿಳಿಸಿದ್ದಾರೆ. ಬಾಂಬ್ ಬೆದರಿಕೆ ಇಮೇಲ್ ಬಗ್ಗೆ ಮಾಹಿತಿ ಬಂದ ಕೂಡಲೇ ಬಾಂಬ್ ನಿಷ್ಕ್ರಿಯ ದಳವನ್ನು ಅಲ್ಲಿಗೆ ರವಾನಿಸಲಾಯಿತು. ವಿಮಾನದಲ್ಲಿದ್ದ ಎಲ್ಲಾ ಪ್ರಯಾಣಿಕರನ್ನು ಕೆಳಗೆ ಇಳಿಸಲಾಯಿತು. ವಿಮಾನ ನಿಲ್ದಾಣದ ಸಿಬ್ಬಂದಿ ಮತ್ತು ಪ್ರಯಾಣಿಕರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದ್ದು, ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಒಂದನೇ ಪುಟದಿಂದ

ಮಾಂಟೆಸ್ಸರಿಗಳಾಗಿ ಮೇಲ್ದರ್ಜೆಗೆ

ಇಲ್ಲಿ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಕನ್ನಡ, ಇಂಗ್ಲಿಷ್ ಮಾಧ್ಯಮಗಳಲ್ಲಿ ಪ್ರಾರಂಭ ಮಾಡಲು ತೀರ್ಮಾನ ಮಾಡಲಾಗಿದೆ. ಮೊದಲ ಹಂತದಲ್ಲಿ 9 ಸಾವಿರ ಅಂಗನವಾಡಿಗಳನ್ನು ಮಾಂಟೆಸ್ಸರಿಗಳಾಗಿ ಅಪ್ ಗ್ರೇಡ್ ಮಾಡಲು ತೀರ್ಮಾನ ಮಾಡಲಾಗಿದೆ. ಮಾಂಟೆಸ್ಸರಿಗಳಲ್ಲಿ ಸಮವಸ್ತ್ರ, ಶೂ, ಬ್ಯಾಗ್‌ಗಳನ್ನು ನೀಡಲಾಗುತ್ತದೆ. ಎಲ್ಲಾ ಸಿದ್ಧತೆ ಮಾಡಿಕೊಂಡು ಆರ್ಥಿಕ ಇಲಾಖೆ ಜೊತೆ ಮಾತನಾಡಲಾಗುವುದು ಎಂದು ಹೇಳಿದರು. ಅಂಗನವಾಡಿ ಕಾರ್ಯ ಕರ್ತೆಯರ ಜೊತೆ ಈಗಾಗಲೇ ಮಾತುಕತೆ ನಡೆದಿದೆ. ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿ ಪ್ರಾರಂಭ ಮಾಡಿದರೂ ಅಂಗನವಾಡಿ ಕಾರ್ಯಕರ್ತೆಯರನ್ನು ಕೆಲಸದಿಂದ ತೆಗೆಯುವುದಿಲ್ಲ. ಅಂಗನವಾಡಿಗಳನ್ನು ರೀ ಡೆಸಿಗ್ನೇಷನ್ ಮಾಡೋದಾಗಿ ಹೇಳಿದ್ದು ಅದಕ್ಕೂ ಅಂಗನವಾಡಿ ಕಾರ್ಯಕರ್ತರು ಒಪ್ಪಿಕೊಂಡಿದ್ದಾರೆ. ಅಂಗನವಾಡಿಗಳನ್ನು ಅಪ್‌ಗ್ರೇಡ್ ಮಾಡುವ ಬೇಡಿಕೆ ಇತ್ತು. ಯಾರನ್ನೂ ಕೆಲಸದಿಂದ ತೆಗೆಯುವುದಿಲ್ಲ. ಗುಣಮಟ್ಟದ ಶಿಕ್ಷಣ ಕೊಡುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದರು.

ಸೂರಜ್ ಜು.1ರವರೆಗೆ ಸಿಐಡಿ ವಶಕ್ಕೆ

ವಶಕ್ಕೆ ನೀಡಲಾಗಿತ್ತು. ಈ ಮಧ್ಯೆ ಸರ್ಕಾರ ಪ್ರಕರಣವನ್ನು ಸಿಐಡಿಗೆ ವಹಿಸಿದ್ದರಿಂದ ಪೊಲೀಸರು ಇಂದು ನ್ಯಾಯಾಲಯದ ಮುಂದೆ ಹಾಜರಾಗಿ ಹೆಚ್ಚಿನ ತನಿಖೆಗೆ ತಮ್ಮ ವಶಕ್ಕೆ ನೀಡುವಂತೆ ಮನವಿ ಮಾಡಿಕೊಂಡರು. ಸೂರಜ್ ರೇವಣ್ಣ ಮೊಬೈಲ್ ಸೇರಿದಂತೆ ಕೆಲವು ದಾಖಲೆಗಳನ್ನು ಸಿಐಡಿ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಬ್ಲ್ಯಾಕ್‌ಮೇಲ್ ವಿಚಾರವಾಗಿ ಮೊಬೈಲ್ ಸಾಕ್ಷ್ಯಗಳನ್ನು ನೀಡಲು ಸೂರಜ್ ಮುಂದಾದಾಗ ಅವರನ್ನು ಪೊಲೀಸರು ಬಂಧಿಸಿದ್ದರು. ಸೂರಜ್ ಕಿರಿಯ ಸಹೋದರ ಹಾಗೂ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾರೆ. ಅತ್ಯಾಚಾರ, ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಸೂರಜ್ ತಂದೆ ಎಚ್.ಡಿ.ರೇವಣ್ಣ ಅವರನ್ನು ಎಸ್‌ಐಟಿ ತಂಡ ಬಂಧಿಸಿ ವಶಕ್ಕೆ ಪಡೆದು, ಜೈಲಿಗೆ ಕಳುಹಿಸಿದ್ದರು. ನಂತರ ರೇವಣ್ಣ ಅವರಿಗೆ ನ್ಯಾಯಾಲಯ ನೀಡಿದ ಷರತ್ತುಬದ್ಧ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಸೂರಜ್ ತಾಯಿ ಭವಾನಿ ರೇವಣ್ಣ ಅವರು ಈಗಾಗಲೇ ನಿರೀಕ್ಷಣಾ ಜಾಮೀನು ಪಡೆದಿದ್ದಾರೆ. ಒಟ್ಟಾರೆ ಇಡೀ ಕುಟುಂಬ ಕಾನೂನು ಕುಣಿಕೆಗೆ ಸಿಲುಕಿಕೊಂಡಿದೆ.

ಸಿ.ಪಿ.ಯೋಗೇಶ್ವರ್ ಎನ್‌ಡಿಎ ಅಭ್ಯರ್ಥಿ

ನಿನ್ನೆ ಕುಮಾರಸ್ವಾಮಿ, ಚನ್ನಪಟ್ಟಣ ಕ್ಷೇತ್ರ ಪ್ರದಕ್ಷಿಣೆ ಹಾಕಿದ ನಂತರ ಯೋಗೇಶ್ವರ್ ಅವರನ್ನೇ ಜೆಡಿಎಸ್ ಚಿನ್ಹೆಯಡಿ ಕಣಕ್ಕಿಳಿಸುವ ನಿರ್ಧಾರ ಕೈಗೊಂಡಿದ್ದಾರೆ. ರಾಜ್ಯದಲ್ಲಿ ನಡೆಯುತ್ತಿರುವ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಮುಂದುವರೆಯಲಿದ್ದು ಎರಡು ಕ್ಷೇತ್ರಗಳನ್ನು ಬಿಜೆಪಿ ಇಟ್ಟುಕೊಂಡು ಒಂದನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿದೆ. ಯೋಗೇಶ್ವರ್ ಅವರಿಗೆ ಪಕ್ಷದ ವತಿಯಿಂದ ಕ್ಷೇತ್ರ ದೊರೆಯದ ಕಾರಣ ಜೆಡಿಎಸ್ ಚಿನ್ಹೆಯಡಿ ಅವರನ್ನು ಕಣಕ್ಕಿಳಿಸಲು ಬಿಜೆಪಿ ವರಿಷ್ಠರು ಸಮ್ಮತಿಸಿದ್ದಾರೆ ಎನ್ನಲಾಗಿದೆ.

ಶಿಷ್ಯವೇತನ, ಪ್ರವೇಶಾತಿ ಶುಲ್ಕ ಗೊಂದಲ; ಮಹಾರಾಣಿ ಕಲಾ ಕಾಲೇಜು ಸ್ನಾತಕೋತ್ತರ ವಿದ್ಯಾರ್ಥಿನಿಯರ ಪ್ರತಿಭಟನೆ



ಎಸ್ಸಿ–ಎಸ್ಟಿ ವಿದ್ಯಾರ್ಥಿನಿಯರ ಶಿಷ್ಯ ವೇತನ ಹಾಗೂ ಪ್ರವೇಶಾತಿ ಶುಲ್ಕ ಪಾವತಿ ಗೊಂದಲವನ್ನು ಸರಿಪಡಿಸುವಂತೆ ಒತ್ತಾಯಿಸಿ ಎಐಡಿಎಸ್‌ಓ ಉಪಾಧ್ಯಕ್ಷ ನಿತಿನ್, ಕಾರ್ಯದರ್ಶಿ ಚಂದ್ರಕಲಾ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಮೈಸೂರು, ಜೂ.24(ಎಸ್‌ಪಿಎನ್)– ಮಹಾರಾಣಿ ಮಹಿಳಾ ಕಲಾ ಕಾಲೇಜು ಸ್ನಾತಕೋತ್ತರ ವಿಭಾಗದ ಎಸ್ಸಿ–ಎಸ್ಟಿ ವಿದ್ಯಾರ್ಥಿನಿಯರ ಶಿಷ್ಯ ವೇತನ ಹಾಗೂ ಪ್ರವೇಶಾತಿ ಶುಲ್ಕ ಪಾವತಿ ಗೊಂದಲವನ್ನು ಸರಿಪಡಿಸುವಂತೆ ಒತ್ತಾಯಿಸಿ ವಿದ್ಯಾರ್ಥಿನಿಯರು ಮೈಸೂರು ವಿವಿ ಕ್ರಾಫರ್ಡ್ ಹಾಲ್ ಮುಂಭಾಗ ಪ್ರತಿಭಟನೆ ನಡೆಸಿ, ಕುಲಸಚಿವೆ ವಿ.ಆರ್.ಶೈಲಜಾ ಅವರಿಗೆ ಸೋಮವಾರ ಮನವಿ ಪತ್ರ ಸಲ್ಲಿಸಿದರು.

ಎಐಡಿಎಸ್‌ಓ ಉಪಾಧ್ಯಕ್ಷ ನಿತಿನ್, ಕಾರ್ಯದರ್ಶಿ ಚಂದ್ರಕಲಾ ನೇತೃತ್ವದಲ್ಲಿ ರಾಜ್ಯ ಸರ್ಕಾರ ಮತ್ತು ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ, ವಿದ್ಯಾರ್ಥಿನಿಯರ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿದ ಅವರು, ಎಸ್ಸಿ, ಎಸ್ಟಿ ವಿದ್ಯಾರ್ಥಿನಿಯರಿಗೆ ಪ್ರವೇಶಾತಿ ಶುಲ್ಕ ಪಡೆಯುವ ಸಂದರ್ಭದಲ್ಲಿ 600 ರೂ.ಗಳನ್ನು ತೆಗೆದುಕೊಂಡು ದಾಖಲಾತಿ ಮಾಡಿಕೊಂಡಿದ್ದು, ಇದೀಗ ದಿಢೀರನೇ ಕಾಲೇಜಿನ ಪ್ರವೇಶಾತಿ ಶುಲ್ಕ ಕಟ್ಟಬೇಕೆಂದು ಸ್ನಾತಕೋತ್ತರ ವಿದ್ಯಾರ್ಥಿನಿಯರಿಗೆ ಒತ್ತಡ ಹಾಕಲಾಗುತ್ತಿದೆ ಎಂದು ಆರೋಪಿಸಿದರು.

ಏಕಾಏಕಿ ಕಾಲೇಜಿನಿಂದ ಪ್ರಥಮ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿನಿಯರಿಗೆ 11 ಸಾವಿರ ರೂ. ಹಾಗೂ ದ್ವಿತೀಯ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿನಿಯರಿಗೆ 19,498 ರೂ. ಪ್ರವೇಶಾತಿ ಶುಲ್ಕ ಕಟ್ಟುವಂತೆ ಒತ್ತಾಯಿಸುತ್ತಿದ್ದಾರೆ. ಆದರೆ, ಸಮಾಜ ಕಲ್ಯಾಣ ಇಲಾಖೆಯಿಂದ ಕೆಲ ವಿದ್ಯಾರ್ಥಿನಿಯರಿಗೆ 2 ಸಾವಿರ, ಇನ್ನು ಕೆಲವರಿಗೆ 4 ಸಾವಿರ ರೂ. ಶಿಷ್ಯವೇತನ ಬಂದಿದೆ. ರಾಜ್ಯ ಸರ್ಕಾರ ಇಷ್ಟು ಕಡಿಮೆ ಮೊತ್ತದ ಶಿಷ್ಯವೇತನ ನಿಗದಿಪಡಿಸಿದರೆ, ನಾವು ಪ್ರವೇಶಾತಿ ಶುಲ್ಕ ಪಾವತಿಸಲು ಸಾಧ್ಯವಿಲ್ಲ. ಹಾಗಾಗಿ ನಮಗೆ ಎಷ್ಟು ಶಿಷ್ಯವೇತನ ಬಂದಿದೆಯೋ ಅಷ್ಟು ಹಣವನ್ನು ಮಾತ್ರ ಪ್ರವೇಶಾತಿ ಶುಲ್ಕಕ್ಕೆ ಜಮೆ ಮಾಡುತ್ತೇವೆ. ಮಿಕ್ಕ ಹಣವನ್ನು ಸರ್ಕಾರವೇ ಪಾವತಿಸಬೇಕು ಎಂದು ಒತ್ತಾಯಿಸಿದರು.

ಜೊತೆಗೆ ಎರಡನೇ ವರ್ಷದಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಸೆಮಿಸ್ಟರ್ ಪರೀಕ್ಷೆ ಬರೆಯುವಾಗ ಯಾವುದೇ ಪರೀಕ್ಷಾ ಶುಲ್ಕ ಪಡೆದಿಲ್ಲ. ಪ್ರಸ್ತುತ ಪರೀಕ್ಷಾ ಶುಲ್ಕ ಕಟ್ಟುವಂತೆ ಒತ್ತಾಯಿಸುತ್ತಿದ್ದಾರೆ. ಆದರೆ, ಎಸ್ಸಿ, ಎಸ್ಸಿ ವಿದ್ಯಾರ್ಥಿಗಳಿಗೆ ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ (ಯುಯುಸಿಎಂಎಸ್ –The Unified University & College Management System) ಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕ ಪಾವತಿಸುವಂತೆ ತೋರಿಸುತ್ತಿಲ್ಲ. ಹಾಗಾಗಿ ಅಧಿಕಾರಿಗಳ ನಡೆ ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ ಎಂದು ಪ್ರತಿಭಟನಾ ವಿದ್ಯಾರ್ಥಿನಿಯರು ದೂರಿದ್ದಾರೆ.

ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಉಪಾಧ್ಯಕ್ಷೆ ಸ್ವಾತಿ, ಮಹಾರಾಣಿ ಸ್ನಾತಕೋತ್ತರ ಕಲಾ ವಿಭಾಗದ ಅರ್ಚನಾ, ಸೌಜನ್ಯ, ಚಂದನ, ಅಪೂರ್ವ ಚಾವ್ಲಾ, ಕೆ.ಮಹಾಲಕ್ಷ್ಮೀ, ವಿ.ಐಶ್ವರ್ಯ, ಎಸ್.ಶೃತಿ, ಎಸ್.ಅಶ್ವಿನಿ, ಚಾಂದಿನಿ, ಬಿ.ಎನ್.ನಳಿನಿ, ಎನ್.ಕುಸುಮ, ಪ್ರತಿಮಾ, ಆರ್.ಸಿಂಧೂಶ್ರೀ, ಎನ್.ಸೌಮ್ಯ, ಸುನೀತ, ಸುಶ್ಮಿತಾ ಇತರರಿದ್ದರು.

ಚಿಕ್ಕಮಗಳೂರಲ್ಲಿ ಅನೈತಿಕ ಸಂಬಂಧಕ್ಕೆ ಅಡ್ಡಿ; ಪ್ರಿಯಕರನ ಜೊತೆ ಸೇರಿ ಪತಿಯ ಹತ್ಯೆ

ಚಿಕ್ಕಮಗಳೂರು: ಪತ್ನಿಯ ಅಕ್ರಮ ಸಂಬಂಧಕ್ಕೆ ಪತಿ ಬಲಿಯಾಗಿರುವ ಘಟನೆ ಕಡೂರು ತಾಲೂಕಿನ ಸಕರಾಯಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಯ ದೊಡ್ಡ ಬೀರನಹಳ್ಳಿಯಲ್ಲಿ ವರದಿಯಾಗಿದೆ.

ಜಯಣ್ಣ (42) ಮೃತ ದುರ್ದೈವಿ. ಕೆಲ ವರ್ಷಗಳ ಹಿಂದೆ ಈತ ಶೃತಿ ಎಂಬಾಕೆಯನ್ನು ವಿವಾಹವಾಗಿದ್ದರು. ಆರಂಭದಲ್ಲಿ ದಂಪತಿ ಸಂಸಾರ ಚೆನ್ನಾಗಿಯೇ ಇತ್ತು. ಕೆಲ ವರ್ಷಗಳ ಬಳಿಕ ಶೃತಿ ತನ್ನ ಸಂಬಂಧಿಯೊಂದಿಗೆ ಸಲುಗೆಯಿಂದಿದ್ದು, ಈ ಸಲುಗೆ ಅನೈತಿಕ ಸಂಬಂಧಕ್ಕೆ ತಿರುಗಿತ್ತು. ಇದು ಪತಿ ಜಯಣ್ಣನ ಗಮನಕ್ಕೆ ಬಂದಿದ್ದು, ಇದರಿಂದ ಕುಪಿತನಾದ ಆತ ಇಬ್ಬರೊಂದಿಗೆ ಜಗಳವಾಡಿದ್ದ ಎನ್ನಲಾಗಿದೆ.

ಈ ವಿಚಾರ ಸಂಬಂಧ ಪತಿಯೊಂದಿಗೆ ಆಗಾಗ್ಗೆ ಜಗಳ ನಡೆಯುತ್ತಿದ್ದರೂ ಶೃತಿ ತನ್ನ ಸಂಬಂಧಿಯೊಂದಿಗೆ ಅನೈತಿಕ ಸಂಬಂಧವನ್ನು ಮುಂದುವರಿಸಿದ್ದಳು.

ತಮ್ಮ ಸಂಬಂಧಕ್ಕೆ ಪತಿ ಅಡ್ಡಿಯಾಗಿದ್ದ ಹಿನ್ನೆಲೆಯಲ್ಲಿ ಶೃತಿ ಹಾಗೂ ಆಕೆಯ ಪ್ರಿಯಕರ, ಜಯಣ್ಣನನ್ನು ಹತ್ಯೆ ಮಾಡಲು ಸಂಚು ಮಾಡಿದ್ದರು. ಅದರಂತೆ ಕಳೆದ ಜೂ.16 ರಂದು ಇಬ್ಬರು ಸೇರಿ ಮದ್ಯದಲ್ಲಿ ವಿಷ ಮಿಶ್ರಣ ಮಾಡಿ ಜಯಣ್ಣನಿಗೆ ಕುಡಿಸಿದ್ದರು.

ಪತ್ನಿ ಹಾಗೂ ಆಕೆಯ ಪ್ರಿಯಕರ ಸಂಚು ಅರಿಯದ ಪತಿ ಜಯಣ್ಣ ಇದರಿಂದ ಅಸ್ವಸ್ಥನಾಗಿ ಹೊಟ್ಟೆ ನೋವಿನಿಂದ ನರಳಾಟ ಆರಂಭಿಸುತ್ತಿದ್ದಂತೆ ಪತ್ನಿ ಶೃತಿ ತನ್ನ ಪ್ರಿಯಕರ ಕಿರಣ್ ಕುಮಾರ್‌ನ ಕಾರಿನಲ್ಲಿ ಜಯಣ್ಣನನ್ನು ಕೂರಿಸಿಕೊಂಡು ಅರಸೀಕೆರೆಯ ಆಸ್ಪತ್ರೆಗೆ ದಾಖಲಿಸುವುದಾಗಿ ಕರೆದೊಯ್ಯುತ್ತಿರುವಂತೆ ಬಿಂಬಿಸಿದ್ದು, ಕಾರಿನಲ್ಲಿ ಸುತ್ತಾಡಿ, ಜಯಣ್ಣನ ಬಾಯಿ, ಕುತ್ತಿಗೆ ಬಿಗಿದು ಉಸಿರುಗಟ್ಟಿಸಿ ಹತ್ಯೆ ಮಾಡಿದ್ದಾರೆ. ಬಳಿಕ ಇದು ಸಹಜ ಸಾವು ಎಂದು ಬಿಂಬಿಸಿದ್ದಾರೆ. ಈ ಬಗ್ಗೆ ಅನುಮಾನಗೊಂಡ ಕೆಲ ಸಂಬಂಧಿಕರು ಪೊಲೀಸರಿಗೆ ಮಾಹಿತಿ ನೀಡಿದ್ದು, ಪೊಲೀಸರು ತನಿಖೆ ಆರಂಭಿಸಿದಾಗ, ಇಬ್ಬರೂ ತಪ್ಪೊಪ್ಪಿಕೊಂಡಿದ್ದಾರೆ. ಇದೀಗ ಆರೋಪಿಗಳಿಬ್ಬರನ್ನೂ ಪೊಲೀಸರು ಬಂಧಿಸಿದ್ದು, ಈ ಸಂಬಂಧ ಸಕರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡೇ–ನಲ್ಮ್ ಯೋಜನೆಯ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಮೈಸೂರು.ಜೂ.24– ಪಿರಿಯಾಪಟ್ಟಣ ಪುರಸಭೆಯ ವತಿಯಿಂದ 2024–25 ನೇ ಸಾಲಿನ ಡೇ–ನಲ್ಮ್ ಯೋಜನೆಯಡಿ ಸ್ವ–ಸಹಾಯ ಗುಂಪು ರಚನೆ, ಕಿರು ಉದ್ದಿಮೆಗೆ, ಸ್ವಯಂ ಉದ್ಯೋಗ ಯೋಜನೆ ಹಾಗೂ ಕಾಫಿ ಕಿಯೋಸ್ ಕಿರು ಸಾಲ ಯೋಜನೆಗಾಗಿ ಸಾಲ ಸೌಲಭ್ಯವನ್ನು ಬ್ಯಾಂಕಿನ ಮುಖಾಂತರ ಪಡೆದು ಉದ್ದಿಮೆ ಪ್ರಾರಂಭಿಸಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಜುಲೈ 17 ರೊಳಗಾಗಿ ಪುರಸಭೆ ಕಚೇರಿಯ ಡೇ–ನಲ್ಮ್ ಶಾಖೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಪಿರಿಯಾಪಟ್ಟಣ ಪುರಸಭೆ ಕಾರ್ಯಾಲಯದ ದೂ.08223–273036 ಅಥವಾ ಶರ್ಮಿಳಾ ಅವರ ದೂ.9845500364 ಅನ್ನು ಸಂಪರ್ಕಿಸಬಹುದು.

ಮೈಸೂರು ಮಿತ್ರ

ಚಂದಗಾಲು ಗ್ರಾಮದ ಮಹದೇವನಾಯಕರ ಆತ್ಮಹತ್ಯೆ ಪ್ರಕರಣ

ಮೃತನ ಮನೆಗೆ ಶಾಸಕ ಅನಿಲ್ ಭೇಟಿ, ಸಾಂತ್ವನ

ಕೆ.ಆರ್.ನಗರ, ಜೂ.24– ತಾಲೂಕಿನ ಚಂದಗಾಲು ಗ್ರಾಮದ ಮಹದೇವನಾಯಕ ಹಾಗೂ ಅವರ ಮಗಳ ಆತ್ಮಹತ್ಯೆ ಪ್ರಕರಣ ಅಮಾನವೀಯ ಘಟನೆಯಾಗಿದ್ದು, ಈ ವಿಚಾರದಲ್ಲಿ ಶಾಸಕ ಡಿ.ರವಿಶಂಕರ್ ತುಂಬಾ ಮುತುವರ್ಜಿ ವಹಿಸಿ ನೊಂದ ಕುಟುಂಬದೊಂದಿಗೆ ಇದ್ದಾರೆ ಎಂದು ಶಾಸಕ ಅನಿಲ್ ತಿಳಿಸಿದರು.

ಶಾಸಕ ರವಿಶಂಕರ್ ಸೇರಿದಂತೆ ಸಮಾಜದ ಮುಖಂಡರೊಂದಿಗೆ ಚಂದಗಾಲು ಗ್ರಾಮಕ್ಕೆ ಭೇಟಿ ನೀಡಿ ನೊಂದ ಕುಟುಂಬಕ್ಕೆ ಸಾಂತ್ವನ ಹೇಳಿ, ಗ್ರಾಮದ ನಾಯಕರ ಸಮುದಾಯ ಭವನದಲ್ಲಿ ಸಮಾಜದ ಮುಖಂಡರಿಗೂ ಧೈರ್ಯ ತುಂಬಿ ಮಾತನಾಡಿದ ಅವರು, ಶಾಸಕ ಡಿ.ರವಿಶಂಕರ್ ಮತ್ತು ಅವರ ಕುಟುಂಬ ಹಿಂದುಳಿದ ಮಹದೇವನಾಯಕರಂತಹ ಬಡಜನತೆಯ ಪರವಾಗಿದ್ದು, ಅವರ ಸಮಸ್ಯೆಗೆ ಸಕಾಲಕ್ಕೆ ಸ್ಪಂದಿಸುತ್ತಾರೆ. ಆತ್ಮಹತ್ಯೆ ಪ್ರಕರಣದಲ್ಲಿ ರಾಜಕೀಯ ಲಾಭ ಗಳಿಸಬಾರದೆಂಬ ಉದ್ದೇಶದಿಂದ ನಾನು ಈವರೆಗೂ ಭೇಟಿ ನೀಡಿರಲಿಲ್ಲ ಎಂದು ಸ್ಪಷ್ಟಪಡಿಸಿದರು.


ಜೆಡಿಎಸ್‌ನವರು ಈ ಪ್ರಕರಣವನ್ನು ಮುಂದಿಟ್ಟುಕೊಂಡು ಸಾವಿನ ವಿಚಾರದಲ್ಲಿ ರಾಜಕೀಯ ಲಾಭ ಮಾಡಿಕೊಳ್ಳಲು ಹೋರಾಟ ಮಾಡಿದ್ದು ನಾಚಿಕೆಗೇಡಿನ ಸಂಗತಿ. ನಾನು ವಿದೇಶ ಪ್ರವಾಸದಲ್ಲಿದ್ದ ಕಾರಣ ಚಂದಗಾಲು ಗ್ರಾಮಕ್ಕೆ ಭೇಟಿ ನೀಡಲು ಸಾಧ್ಯವಾಗಲಿಲ್ಲ. ಸಂಕಷ್ಟದಲ್ಲಿರುವ ಕುಟುಂಬಕ್ಕೆ ಸಾಂತ್ವನ ಹೇಳಿ ಪರಿಹಾರ ಕೊಡಿಸುವ ಕೆಲಸ ಮಾಡಬೇಕು. ಇಂತಹ ವಿಚಾರವನ್ನು ಯಾರೂ ರಾಜಕೀಯವಾಗಿ ಬಳಸಿಕೊಳ್ಳಬಾರದೆಂದು ಸಲಹೆ ನೀಡಿದರು. ಶಾಸಕ ಡಿ.ರವಿಶಂಕರ್ ವೈಯಕ್ತಿಕ ಸಹಾಯ ಮಾಡುವ ಜೊತೆಗೆ ಸರ್ಕಾರದಿಂದ ಬರುವ ಸಹಾಯಧನವನ್ನು ಸಕಾಲದಲ್ಲಿ ಮಹದೇವನಾಯಕರ ಕುಟುಂಬಕ್ಕೆ ಕೊಡಿಸಿದ್ದಾರೆ. ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನ ಸೇರಿದಂತೆ ವಿವಿಧ ಇಲಾಖೆಗಳಿಂದ 38 ಲಕ್ಷದಷ್ಟು ಪರಿಹಾರ ಧನ ಕೊಡಿಸುವ ಭರವಸೆ ನೀಡಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡ ಸೇರಿದಂತೆ ಹಿಂದುಳಿದ ಸಮಾಜಗಳ ಹಿತ ಕಾಯುವ ಜೊತೆಗೆ ಅವರ ಹಿತರಕ್ಷಣೆಗೆ ಬದ್ಧವಾಗಿರುವ ಶಾಸಕ ಡಿ.ರವಿಶಂಕರ್ ಅವರ ಬಗ್ಗೆ ಯಾರೂ ಅನುಮಾನಪಡಬಾರದು. ಇದರ ಜತೆಗೆ ವಿರೋಧ ಪಕ್ಷದವರು ಮಾಡುವ ಅಪಪ್ರಚಾರಕ್ಕೂ ಕಿವಿಗೊಡದೆ ಶಾಸಕರೊಂದಿಗೆ ಇರಬೇಕು ಎಂದು ಮನವಿ ಮಾಡಿದರು.

ಶಾಸಕ ಡಿ.ರವಿಶಂಕರ್, ನಮ್ಮ ಸಮಾಜದ ಸ್ವಾಮೀಜಿ, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಆಸ್ಪತ್ರೆಗೆ ಭೇಟಿ ಮಾಡಿಸಿ ಕುಟುಂಬದವರಿಗೆ ಉತ್ತಮ ಚಿಕಿತ್ಸೆ ಕೊಡಿಸಿದ್ದಾರೆ. ಇದಕ್ಕೆ ಸಮಾಜದ ಪರವಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಈ ಸಂದರ್ಭ ಗ್ರಾಮದ ಹಲವು ಮುಖಂಡರು ಹಾಜರಿದ್ದು, ಶಾಸಕ ಡಿ.ರವಿಶಂಕರ್ ಈವರೆಗೂ ನಮ್ಮ ಪರವಾಗಿ ಇದ್ದಾರೆ. ಇದೇ ರೀತಿ ನಮ್ಮಂತ ನೊಂದ ಕುಟುಂಬದ ರಕ್ಷಣೆ ಮಾಡುವುದರ ಜೊತೆಗೆ ಅವರ ಪರವಾಗಿರಬೇಕೆಂದು ಕೋರಿದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ನೇತ್ರಾವತಿ, ಪುರಸಭೆ ಸದಸ್ಯ ಶಿವಕುಮಾರ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಜೆ.ಶಿವಣ್ಣ, ರಾಜ್ಯ ಕಾಂಗ್ರೆಸ್ ಪರಿಶಿಷ್ಟ ಪಂಗಡ ವಿಭಾಗದ ಉಪಾಧ್ಯಕ್ಷ ಜೆ.ಶ್ರೀನಿವಾಸ್, ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಮಹದೇವ, ಮುಖಂಡರಾದ ನಾಗರಾಜನಾಯಕ, ರಾಜನಾಯಕ, ಎಂ.ಆರ್.ಮಹದೇವನಾಯಕ, ಮೀನುಗಾರರ ಸಂಘದ ತಾಲೂಕು ಅಧ್ಯಕ್ಷ ಬೋರನಾಯಕ, ಸಾಲಿಗ್ರಾಮ ತಾಲೂಕು ಸಂಘದ ಅಧ್ಯಕ್ಷ ಉದೇಶನಾಯಕ, ಮಂಜನಾಯಕ, ಕೆ.ಹೆಚ್.ಬುಡೀಗೌಡ, ಡಿ.ವಿ.ಗುಡಿನಂದೀಶ್, ನಟರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್.ಮಹದೇವ, ಸಾಲಿಗ್ರಾಮ ತಾಲೂಕು ಎಸ್‌ಟಿ ಘಟಕದ ಅಧ್ಯಕ್ಷ ನರಸಿಂಹನಾಯಕ, ಉದಯಶಂಕರ್, ತಾಲೂಕು ವಕ್ತಾರ ಸೈಯದ್ ಜಾಬೀರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.


ಮೃತ ಮಹದೇವನಾಯಕರ ಮನೆಗೆ ಶಾಸಕ ಅನಿಲ್ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

ಹೆಚ್ಚುವರಿ ಕೊಠಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ



ಪಿರಿಯಾಪಟ್ಟಣ, ಜೂ.24– ಪಟ್ಟಣದ ಪದವಿಪೂರ್ವ ಕಾಲೇಜಿನಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ 2 ಹೆಚ್ಚುವರಿ ಕೊಠಡಿ ನಿರ್ಮಾಣ ಕಾಮಗಾರಿಗೆ ಸಚಿವ ಕೆ.ವೆಂಕಟೇಶ್ ಭೂಮಿ ಪೂಜೆ ನೆರವೇರಿಸಿದರು.

ಪ್ರಾಂಶುಪಾಲ ಶಿವಶಂಕರ್ ಮಾತನಾಡಿ, ಈ ಕಾಲೇಜು ತಾಲೂಕಿನ ನೋಡಲ್ ಕೇಂದ್ರವಾಗಿದ್ದು, ಎಲ್ಲಾ ವಾರ್ಷಿಕ ಪರೀಕ್ಷೆಗಳು, ಪ್ರಾಯೋಗಿಕ ಪರೀಕ್ಷೆಗಳು, ಇತರೆ ಇಲಾಖಾ ಪರೀಕ್ಷೆಗಳು ಈ ಕಾಲೇಜಿನಲ್ಲೇ ನಡೆಯುವುದರಿಂದ ಹೆಚ್ಚುವರಿಯಾಗಿ 4 ಪ್ರತ್ಯೇಕ ಕೊಠಡಿಗಳು ಹಾಗೂ 4 ಪ್ರಯೋಗಾಲಯದ ಅವಶ್ಯಕತೆ ಇದೆ. ಬಾಲಕ ಹಾಗೂ ಬಾಲಕಿಯರಿಗೆ ಪ್ರತ್ಯೇಕ ಸುಸಜ್ಜಿತ ಶೌಚಾಲಯ ಅಗತ್ಯವಾಗಿದೆ. ಅಲ್ಲದೇ ಹೆಣ್ಣು ಮಕ್ಕಳಿಗೆ ಶೌಚಾಲಯದೊಂದಿಗೆ ವಿಶ್ರಾಂತಿ ಕೊಠಡಿ ಅಗತ್ಯವಿದೆ. ಇನ್ನು ಕಾಲೇಜಿನ ಕಾಂಪೌಂಡ್ ದುರಸ್ತಿ ಹಾಗೂ ಶಿಥಿಲಗೊಂಡಿರುವ ಕಾಲೇಜಿನ ಭಾಗಗಳನ್ನು ದುರಸ್ತಿಗೊಳಿಸಬೇಕು ಎಂದರು. ತಾಲೂಕಿನ ಕೊಪ್ಪ ಗ್ರಾಮದ ಸರ್ಕಾರಿ ಪದವಿಪೂರ್ವ ಕಾಲೇಜು ಕಟ್ಟಡ ನಿರ್ಮಾಣಕ್ಕೆ 27.66 ಲಕ್ಷ ರೂ. ಅನುದಾನ ಸರ್ಕಾರದಿಂದ ಬಿಡುಗಡೆಯಾಗಿದ್ದು, ಅಲ್ಲಿ ಜಾಗದ ಕೊರತೆಯಿಂದಾಗಿ ಕಾಮಗಾರಿ ಸ್ಥಗಿತಗೊಂಡಿದೆ. ಹೀಗಾಗಿ ಮಂಜೂರಾಗಿರುವ ಹಣ ಹಿಂದಕ್ಕೆ ಹೋಗದಂತೆ ಆ ಹಣವನ್ನು ನಮ್ಮ ಕಾಲೇಜಿಗೆ ನೀಡುವಂತೆ ಇಲಾಖೆ ನಿರ್ದೇಶಕರು, ಕಾರ್ಯದರ್ಶಿಗೆ ಮನವಿ ಮಾಡಿದ್ದು, ತಾವು ಹಣ ಕೊಡಿಸಬೇಕು ಎಂದು ಮನವಿ ಮಾಡಿದರು.

ಮನವಿ ಸ್ವೀಕರಿಸಿ ಮಾತನಾಡಿದ ಸಚಿವ ವೆಂಕಟೇಶ್ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಈ ಸಂದರ್ಭ ತಹಸೀಲ್ದಾರ್ ಕುಂಞ ಅಹಮದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಹಮತ್ ಜಾನ್‌ಬಾಬು, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಶಿವಶಂಕರ್, ನಿವೃತ್ತ ಉಪನ್ಯಾಸಕ ಬಿ.ಎಂ.ಶಿವಸ್ವಾಮಿ, ಉಪನ್ಯಾಸಕರು ಹಾಗೂ ಸಿಬ್ಬಂದಿಗಳಾದ ಮುರಳಿ, ಬಸವರಾಜ್, ಸಪ್ನಾಕುಮಾರಿ, ಸ್ವಾಮಿಗೌಡ, ಅನಿತಾ, ಸೈಯದ್ ಮುದಾಫೀರ್, ಚೆಲುವಯ್ಯ ಹಾಗೂ ಮುಖಂಡರಾದ ಮಂಜುಳಾ, ಈರಯ್ಯ, ಪುಟ್ಟರಾಜು, ಮಂಜುನಾಥ್ ಸೇರಿದಂತೆ ಇತರರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಆಹ್ವಾನ

ತಿ.ನರಸೀಪುರ, ಜೂ.24– ತಾಲೂಕಿನ ಕರ್ನಾಟಕ ರಾಜ್ಯ ಅರುಂಧತಿ ನೌಕರರ ಸಂಘ ಮತ್ತು ಅರುಂಧತಿ ಸಹಕಾರ ಸಂಘ ಜಂಟಿ ಸಹಯೋಗದಲ್ಲಿ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ತಾಲೂಕಿನ ಮಾದಿಗ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜು.6 ಕೊನೆ ದಿನ. ಮಾಹಿತಿಗೆ 99868 81339, 9740597548 ಸಂಪರ್ಕಿಸಿ.

ರೈತರ ಸಮಸ್ಯೆ ಬಗೆಹರಿಸಲು ಸಂಘಟನೆ ಮುಖ್ಯ



ಮಲ್ಕುಂಡಿ, ಜೂ.24– ರೈತರ ಸಮಸ್ಯೆಗಳನ್ನು ಬಗೆಹರಿಸಲು ಗ್ರಾಮೀಣ ಭಾಗದಲ್ಲಿ ರೈತ ಸಂಘ ಮುಖ್ಯವಾಗಿದೆ ಎಂದು ರಾಜ್ಯ ರೈತ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆ ಭಾಗ್ಯರಾಜ್ ತಿಳಿಸಿದರು.

ಸಮೀಪದ ಕಸುವಿನಹಳ್ಳಿಯಲ್ಲಿ ಕರ್ನಾಟಕ ರಾಜ್ಯ ರೈತ ಕಬ್ಬು ಬೆಳೆಗಾರರ ಸಂಘದ ಗ್ರಾಮ ಘಟಕ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರ ರೈತರು ಬೆಳೆದ ಬೆಳೆಗೆ ಸೂಕ್ತ ಬೆಂಬಲ ಬೆಲೆ ನೀಡಬೇಕು. ರಾಜ್ಯ ಸರ್ಕಾರ ಗ್ಯಾರಂಟಿಗಳನ್ನು ಮುಂದಿಟ್ಟು, ದಿನನಿತ್ಯ ಬಳಸುವ ಪದಾರ್ಥಗಳ ಬೆಲೆ ಏರಿಕೆ ಮಾಡಿ ರಾಜ್ಯದ ಜನತೆಯ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ. ರೈತರು ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಹಲವು ಬಾರಿ ಸರ್ಕಾರಿ ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ಉಂಟಾಗಿದೆ. ಇದನ್ನು ತಡೆಯುವ ಸಲುವಾಗಿ ಗ್ರಾಮೀಣ ರೈತರು ಸಂಘಟನೆಯ ಮೂಲಕ ಒಗ್ಗಟಿನಿಂದ ಹೋರಾಟ ಮಾಡಬೇಕಾಗಿದೆ. ಆದ್ದರಿಂದ ಗ್ರಾಮಗಳಲ್ಲಿ ರೈತ ಸಂಘ ಬಹಳ ಮುಖ್ಯವಾಗಿದೆ ಎಂದರು.

ಈ ವೇಳೆ ಜಿಲ್ಲಾಧ್ಯಕ್ಷ ರವಿ, ತಾಲೂಕು ಅಧ್ಯಕ್ಷ ಮಹದೇವಸ್ವಾಮಿ, ರಾಜ್ಯ ಸಂಚಾಲಕ ಡಾ.ಹನುಮಯ್ಯ, ರಾಜಣ್ಣ, ಮಂಜೇಶ್ ಕುಮಾರ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಎಂ.ಶಿವಮೂರ್ತಿ, ಗ್ರಾಪಂ ಮಾಜಿ ಅಧ್ಯಕ್ಷ ಸ್ವಾಮಿ, ಕೃಷ್ಣಪ್ಪ, ರಾಜೇಂದ್ರ, ಸುಕೇತ ರಾಜ್, ಮಾದಪ್ಪ, ಗಣೇಶ್ ಸೇರಿದಂತೆ ಹಲವು ರೈತರು ಹಾಜರಿದ್ದರು.

ಮರಾಠ ಸಮಾಜದಿಂದ ಅಭಿನಂದನೆ



ಹುಣಸೂರು, ಜೂ.24– ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ವಿಧಾನ ಪರಿಷತ್ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದ ಮರಾಠ ಸಮಾಜದ ಮಾರುತಿರಾವ್ ಮೂಳೆ ಅವರಿಗೆ ಹೂಗುಚ್ಛ ನೀಡಿ ಅಭಿನಂದಿಸಲಾಯಿತು. ಈ ವೇಳೆ ಮರಾಠ ಗೋಂದಳಿ ಸಮಾಜದ ರಾಜ್ಯ ನಿರ್ದೇಶಕ ಆರ್.ರಾಕೇಶ್‌ರಾವ್, ಮುಖಂಡ ಪ್ರಕಾಶ್ ರಾವ್ ಮತ್ತಿತರರಿದ್ದರು.

ಜು.13, 14ರಂದು ಅದ್ಧೂರಿ ಅಂಬೇಡ್ಕರ್ ಜಯಂತಿ



ನಂಜನಗೂಡು, ಜೂ.24– ನಗರದಲ್ಲಿ ಅದ್ಧೂರಿಯಾಗಿ ಜು.13 ಹಾಗೂ 14 ರಂದು ಅಂಬೇಡ್ಕರ್ ಜಯಂತಿ ಆಚರಿಸಲಾಗುವುದು ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಸೋಮವಾರ ನಡೆದ ಪೂರ್ವಭಾವಿ ಸಭೆಯಲ್ಲಿ ವಿವಿಧ ದಲಿತ ಸಂಘಟನೆಗಳು ಹಾಗೂ ಮುಖಂಡರ ಅಭಿಪ್ರಾಯ ಸಂಗ್ರಹಿಸಿ ಮಾತನಾಡಿದ ಅವರು, ಅಂಬೇಡ್ಕರ್ ಜಯಂತಿಯನ್ನು ಎಲ್ಲಾ ಸಮುದಾಯದವರೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದರು. ಅಂದು ಅಂಬೇಡ್ಕರ, ಬುದ್ಧನ ಪುತ್ಥಳಿಗಳು ಹಾಗೂ ಸಂವಿಧಾನ ಪೀಠಿಕೆಯ ಸ್ತಬ್ದ ಚಿತ್ರಗಳನ್ನು ವಿವಿಧ ಜಾನಪದ ಕಲಾ ತಂಡಗಳೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಗುವುದು. ಬಳಿಕ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದ ಅವರು ಕಾರ್ಯಕ್ರಮ ಅಂಗವಾಗಿ ಸಂವಿಧಾನ ತಜ್ಞರ ನೇತೃತ್ವದಲ್ಲಿ ವಿಚಾರ ಸಂಕಿರಣ ನಡೆಯಲಿದೆ ಎಂದರು.

ಸಭೆಯಲ್ಲಿ ಮುಖಂಡರಾದ ಮಾಜಿ ಶಾಸಕ ಕೇಶವಮೂರ್ತಿ, ರಂಗಸ್ವಾಮಿ, ನಾಗೇಶ್ ರಾಜ್, ವಿಜಯ್ ಕುಮಾರ್, ನಾರಾಯಣ, ಮಲ್ಲೇಶ್, ಸುರೇಶ್ ಇತರರು ಉಪಸ್ಥಿತರಿದ್ದರು.

ಶಾದಿ ಮಹಲ್ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ

ನಂಜನಗೂಡು, ಜೂ.24– ನಗರಸಭೆ ಸಾಮಾನ್ಯ ನಿಧಿಯ 20 ಲಕ್ಷ ರೂ. ಅನುದಾನದಲ್ಲಿ ಶಾದಿ ಮಹಲ್ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದ್ದು, ಮುಸ್ಲಿಂ ಬಾಂಧವರು ಶುಭ ಕಾರ್ಯ ನಡೆಸಲು ಅನುಕೂಲವಾಗಲಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ 9ನೇ ವಾರ್ಡ್‌ನ ಮುಸ್ಲಿಂ ಬ್ಲಾಕ್‌ನಲ್ಲಿ ಶಾದಿ ಮಹಲ್ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಗರದಲ್ಲಿ ಯಾವುದೇ ಶಾದಿ ಮಹಲ್ ಇರಲಿಲ್ಲ. ಹೀಗಾಗಿ ಶಾದಿ ಮಹಲ್ ನಿರ್ಮಿಸಿಕೊಡುವಂತೆ ಮುಸ್ಲಿಂ ಸಮುದಾಯದವರು ಮನವಿ ಮಾಡಿದ್ದರು. ಹೀಗಾಗಿ ಶಾದಿ ಮಹಲ್ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ. ಸುಸಜ್ಜಿತ ಶಾದಿ ಮಹಲ್ ನಿರ್ಮಾಣವಾಗಲಿದ್ದು, ಸಮುದಾಯದವರು ಇದನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಶ್ರೀಕಂಠನಾಯಕ, ನಗರಸಭಾ ಸದಸ್ಯರಾದ ರೆಹನಾಭಾನು, ಸಿದ್ದಿಖ್, ಎಸ್.ಪಿ.ಮಹೇಶ್, ಗಂಗಾಧರ್, ಮಹದೇವಸ್ವಾಮಿ, ಮಹದೇವಪ್ರಸಾದ್, ಗಾಯತ್ರಿ, ಮುಖಂಡರಾದ ಅಬ್ದುಲ್ ಖಾದರ್, ಅಜ್ಗರ್, ಸಿದ್ದಿಖ್ ಅಹಮದ್, ನಾಸಿರುದ್ದೀನ್, ಎಂ.ಎನ್.ಮಂಜುನಾಥ್, ಕೆಪಿಸಿಸಿ ಸದಸ್ಯ ಅಕ್ಬರ್ ಅಲಿಂ, ನಗರಸಭಾ ಆಯುಕ್ತ ನಂಜುಂಡಸ್ವಾಮಿ, ಎಇಇ ಮಹೇಶ್ ಸೇರಿದಂತೆ ಹಲವರಿದ್ದರು.


ಶಾದಿ ಮಹಲ್ ನಿರ್ಮಾಣ ಕಾಮಗಾರಿಗೆ ಶಾಸಕ ದರ್ಶನ್ ಭೂಮಿ ಪೂಜೆ ನೆರವೇರಿಸಿದರು.

ತಿ.ನರಸೀಪುರದಲ್ಲಿ ಗುರುವಂದನಾ ಕಾರ್ಯಕ್ರಮ

ತಿ.ನರಸೀಪುರ, ಜೂ.24– ಮಕ್ಕಳನ್ನು ಮೊಬೈಲ್‌ನಿಂದ ಸಾಧ್ಯವಾದಷ್ಟು ದೂರವಿಡಬೇಕು. ಮಕ್ಕಳು ಪೋಷಕರ ಮೇಲ್ವಿಚಾರಣೆಯಲ್ಲಿ ಮಾತ್ರ ಮೊಬೈಲ್ ಬಳಸುವಂತೆ ನಿವೃತ್ತ ಪ್ರಾಂಶುಪಾಲ ಜಿ.ಲಿಂಗಪ್ಪ ಕಿವಿಮಾತು ಹೇಳಿದರು.

ಪಟ್ಟಣದ ವಿದ್ಯೋದಯ ಪ್ರೌಢಶಾಲೆಯಲ್ಲಿ 1997ರಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು 1999ರಲ್ಲಿ ಪಿಯುಸಿ ಓದಿದ ವಿದ್ಯಾರ್ಥಿಗಳಿಂದ ಆಯೋಜಿಸಿದ್ದ ಗುರುವಂದನಾ ಮತ್ತು ಸ್ನೇಹ ನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನೆಯಲ್ಲಿ ಮಕ್ಕಳಿಗೆ ಮೊಬೈಲ್ ನೀಡಿದರೆ ಅನಾಹುತಗಳು ಹೆಚ್ಚು ಎಂದರು.

ನಿನ್ನೆ, ನಾಳೆಯ ಬಗ್ಗೆ ಚಿಂತಿಸದೇ ಪ್ರಸ್ತುತ ವಾಸ್ತವದ ಪ್ರತಿ ಕ್ಷಣಗಳನ್ನು ಉತ್ತಮ ರೂಢಿಗಳೊಂದಿಗೆ ಆನಂದಿಸಿರಿ ಎಂದು ಸಲಹೆ ನೀಡಿದ ಅವರು ಒಟ್ಟಾರೆ ಈ ಕಾರ್ಯಕ್ರಮ ವೇದಕಾಲದ ಗುರು–ಶಿಷ್ಯರ ನಡುವಿನ ಭಾಂದವ್ಯ ನಿರೂಪಿಸುವ ನಮ್ಮ ಸಂಸ್ಕೃತಿಯ ಪ್ರತೀಕವಾಗಿತ್ತು ಎಂದರು.

ಕಾರ್ಯಕ್ರಮದಲ್ಲಿ 100ಕ್ಕೂ ಹೆಚ್ಚು ಹಳೇ ವಿದ್ಯಾರ್ಥಿಗಳು, ಶಿಕ್ಷಕರು, ಉಪನ್ಯಾಸಕರು ಮತ್ತು ನಿವೃತ್ತಿ ಹೊಂದಿದ ಪ್ರಾಂಶುಪಾಲರು ಪಾಲ್ಗೊಂಡಿದ್ದರು. ಅಲ್ಲದೇ ಈ ಸಂಸ್ಥೆಯಲ್ಲಿ ಓದಿದ ವಿದೇಶ ಹಾಗೂ ಅಂತರ ರಾಜ್ಯದಲ್ಲಿ ನೆಲೆಸಿದ್ದ ಹಳೇ ವಿದ್ಯಾರ್ಥಿಗಳು ಪಾಲ್ಗೊಂಡು ಗುರುವಂದನೆ ಸಲ್ಲಿಸಿದರು.

ಈ ಸಂದರ್ಭ ಪ್ರೌಢಶಾಲಾ ವಿಭಾಗದ ಶಿಕ್ಷಕರಾದ ಪಿ.ಬಿ.ವೆಂಕಣ್ಣ, ಆರ್.ಎಸ್.ಬಸವರಾಜ್, ಹೆಚ್.ಎಂ.ಶಂಕರೇಗೌಡ, ಎಸ್.ಪುಷ್ಪ, ಎಸ್.ಬಸವರಾಜ್, ಟಿ.ಪಿ.ವಿಶ್ವನಾಥ್, ವಿ.ಮಹದೇವಸ್ವಾಮಿ. ಸುರೇಶ್ ಕುಮಾರ್, ಕೆ.ಎನ್.ಗುರುರಾಜ್, ಸುರೇಶ್, ಬಿ.ಎಸ್.ಸುನೀತಾ, ಕೆ.ವೆಂಕಟೇಶಮೂರ್ತಿ ಹಾಗೂ ಉಪನ್ಯಾಸಕರಾದ ಕೆ.ಚಂದ್ರಶೇಖರ್ ರಾವ್, ಕೆ.ಆರ್.ಬಸವರಾಜು, ಎಸ್.ಮಹದೇವಸ್ವಾಮಿ, ನಟರಾಜು ಹಾಗೂ ಮತ್ತಿತರರಿದ್ದರು.


ತಿ.ನರಸೀಪುರದ ವಿದ್ಯೋದಯ ಪ್ರೌಢಶಾಲೆಯಲ್ಲಿ ಗುರುವಂದನಾ ಕಾರ್ಯಕ್ರಮ ನಡೆಯಿತು.

ಡಾ.ಬಿ.ಆರ್.ಅಂಬೇಡ್ಕರ್, ವಾಜಪೇಯಿ ವಸತಿ ಯೋಜನೆಗೆ ಅರ್ಜಿ ಆಹ್ವಾನ

ಮೈಸೂರು, ಜೂ.24– ಡಾ. ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ ಹಾಗೂ ವಾಜಪೇಯಿ ವಸತಿ ಯೋಜನೆಯಡಿ ಹೊಸದಾಗಿ ಮನೆ ನಿರ್ಮಿಸಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವವರು ಪಿರಿಯಾಪಟ್ಟಣ ಪುರಸಭೆ ವ್ಯಾಪ್ತಿಗೆ ಸೇರಿರಬೇಕು. ಕುಟುಂಬದ ವಾರ್ಷಿಕ ಆದಾಯವು 2 ಲಕ್ಷದ ಒಳಗಿರುವ ಸ್ವಂತ ಜಾಗ ಇರುವವರು ಅಥವಾ ಕಚ್ಚಾ ಮನೆ ಹೊಂದಿರುವವರು ಇ–ಆಸ್ತಿ ನಕಲು (ಅಸೆಸ್ಮೆಂಟ್ ನಕಲು), ಜಾತಿ ಆದಾಯ ಪ್ರಮಾಣ ಪತ್ರ, ಕುಟುಂಬದ ಸದಸ್ಯರೆಲ್ಲರ ಆಧಾರ್ ಕಾರ್ಡ್, ರೇಷನ್ ಕಾರ್ಡ್, 2 ಭಾವಚಿತ್ರ ಹಾಗೂ ನಿವೇಶನದ ಫೋಟೋದೊಂದಿಗೆ ದಾಖಲಾತಿಗಳನ್ನು ನಿಗದಿಪಡಿಸಿದ ಅರ್ಜಿ ಭರ್ತಿ ಮಾಡಿ ಜುಲೈ 17 ರೊಳಗೆ ಪುರಸಭೆ ಕಛೇರಿಗೆ ಸಲ್ಲಿಸಬೇಕು. ಈ ಹಿಂದೆ ವಸತಿ ಯೋಜನೆ ಸೌಲಭ್ಯ ಪಡೆದ ಫಲಾನುಭವಿಗಳು, ಪಕ್ಕಾ ಮನೆ ಹೊಂದಿರುವವರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಪಿರಿಯಾಪಟ್ಟಣ ಪುರಸಭೆ ಕಾರ್ಯಾಲಯದ ದೂ.ಸಂ: 08223–273036 ನ್ನು ಸಂಪರ್ಕಿಸಬಹುದು ಎಂದು ಪಿರಿಯಾಪಟ್ಟಣ ಪುರಸಭೆ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂಗೂರಲ್ಲಿ ಆರ್‌ಎನ್‌ಆರ್ ಭತ್ತದ ಬೆಳೆ ಕ್ಷೇತ್ರೋತ್ಸವ



ಮೂಗೂರಲ್ಲಿ ಆರ್‌ಎನ್‌ಆರ್ ಭತ್ತದ ಬೆಳೆ ಕ್ಷೇತ್ರೋತ್ಸವ ಕಾರ್ಯಕ್ರಮ ನಡೆಯಿತು.

ಮೂಗೂರು, ಜೂ.24– ಆರ್‌ಎನ್‌ಆರ್ ಭತ್ತದ ತಳಿ ರೋಗ ನಿರೋಧಕ ಶಕ್ತಿ ಗುಣ ಹೊಂದಿರುವುದರಿಂದ ಸಕಾಲದಲ್ಲಿ ಭತ್ತದ ಪೈರುಗಳನ್ನು ಕೀಟಬಾಧೆಯಿಂದ ಸಂರಕ್ಷಿಸುವ ಸಾಮರ್ಥ್ಯ ಹೊಂದಿದೆ ಎಂದು ಕ್ಷೇತ್ರಾಧಿಕಾರಿ ಆರ್.ಇ.ತಿಪ್ಪೇಸ್ವಾಮಿ ತಿಳಿಸಿದರು.

ಮೂಗೂರು ಗ್ರಾಮದ ನಿವಾಸಿ ರಾಜು ಅವರ ಜಮೀನಿನಲ್ಲಿ ರೈಜ್ ಅಗ್ರಿ ಜೆನಿಟಿಕ್ಸ್ ಕಂಪನಿ ವತಿಯಿಂದ ಆಯೋಜಿಸಿದ್ದ ಆರ್‌ಎನ್‌ಆರ್ ಭತ್ತದ ಬೆಳೆ ಕ್ಷೇತ್ರೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆರ್‌ಎನ್‌ಆರ್ ಭತ್ತದ ಬಿತ್ತನೆ ಬೀಜದ ಗುಣಮಟ್ಟ ಖಾತ್ರಿಪಡಿಸಿಕೊಳ್ಳವುದರ ಜೊತೆಗೆ ಹೊಸ ತಾಂತ್ರಿಕತೆ ಮೂಲಕ ಸಂಸ್ಕರಣೆ ಮಾಡಲಾಗಿದೆ. ಈ ಬೆಳೆಯು ಅಲ್ಪಾವಧಿ ಬೆಳೆಯಾಗಿದ್ದು ಕಡಿಮೆ ನೀರು, ರಾಸಾಯನಿಕ ಗೊಬ್ಬರದ ಬಳಕೆಯಿಂದ ಅಧಿಕ ಇಳುವರಿ ಪಡೆಯಬಹುದಾಗಿದೆ ಎಂದರು.

ಇದೇ ವೇಳೆ ರೈತ ರಾಜು ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಕ್ಷೇತ್ರಾಧಿಕಾರಿ ತಿಪ್ಪೇಸ್ವಾಮಿ, ಶ್ರೀಲಕ್ಷ್ಮಿ ವೆಂಕಟೇಶ್ವರ ಟೇಡರ್ಸ್ ಮಾಲೀಕ ವಿಶ್ವನಾಥ್, ಮೂಗೂರು ಟ್ರೇಡರ್ಸ್ ಎಚ್.ಎಸ್. ಯೋಗೇಶ್, ರೈತರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಇಂದು ಸ್ನೇಹ ಮಿಲನ ಕಾರ್ಯಕ್ರಮ

ಹುಣಸೂರು, ಜೂ.24– ನಗರದ ಜಮಾತೆ ಇಸ್ಲಾಮಿ ಹಿಂದ್ ವತಿಯಿಂದ ಬಕ್ರೀದ್ ಹಬ್ಬದ ಪ್ರಯುಕ್ತ ಈದ್ ಸ್ನೇಹ ಮಿಲನ ಕಾರ್ಯಕ್ರಮವನ್ನು ಜೂ.25ರಂದು ಸಂಜೆ 7.20ಕ್ಕೆ ನಗರದ ಬೈಪಾಸ್ ರಸ್ತೆಯಲ್ಲಿರುವ ಮಹಾರಾಜ ಪಾರ್ಟಿ ಹಾಲ್‌ನಲ್ಲಿ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಾರ್ಯಕ್ರಮದಲ್ಲಿ ಎಸಿ ಮಹಮ್ಮದ್ ಹಾರೀಸ್ ಸುಮೇರ್, ಜಮಾತೆ ಇಸ್ಲಾಮಿ ಹಿಂದ್ ಸಂಚಾಲಕ ಅಬ್ದುಲ್ ಸಲಾಂ, ಜೈನುಲ್ಲಾಬಿದ್ದೀನ್, ಗಾವಡಗೆರೆ ಮಠದ ಶ್ರೀಗುರುಲಿಂಗ ಜಂಗಮ ದೇವರ ಮಠದ ನಟರಾಜ ಸ್ವಾಮೀಜಿ, ಸೆಂಟ್ ಫ್ರಾನ್ಸಿಸ್ ಕ್ಸೆವಿಯರ್ಸ್, ಚರ್ಚ್ ಧರ್ಮಗುರು ಜಾರ್ಜ್ ಮಾರ್ಟಿನ್, ಅಕ್ಬರ್ ಅಲಿ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದು, ಸಮುದಾಯದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ರೇಣುಕಾಸ್ವಾಮಿ ಹತ್ಯೆ ಖಂಡಿಸಿ, ನಟ ದರ್ಶನ್, ಗ್ಯಾಂಗ್‌ಗೆ ಕಠಿಣ ಶಿಕ್ಷೆಗೆ ಆಗ್ರಹಿಸಿ

ಸರಗೂರಲ್ಲಿ ವೀರಶೈವ ಮಹಾಸಭಾದಿಂದ ಪ್ರತಿಭಟನೆ


ರೇಣುಕಾಸ್ವಾಮಿ ಹತ್ಯೆ ಖಂಡಿಸಿ, ನಟ ದರ್ಶನ್, ಗ್ಯಾಂಗ್‌ಗೆ ಕಠಿಣ ಶಿಕ್ಷೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಸರಗೂರು, ಜೂ.24– ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಖಂಡಿಸಿ ಹಾಗೂ ನಟ ದರ್ಶನ್, ಪವಿತ್ರಾಗೌಡ ಮತ್ತು ಸಹಚರರಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಒತ್ತಾಯಿಸಿ ತಾಲೂಕಿನ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಜೆಎಸ್‌ಎಸ್ ಶಿವರಾತ್ರೀಶ್ವರ ಶಿವಾನುಭವನದ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಅಲ್ಲಿಂದ ಬ್ಯಾನರ್ ಹಿಡಿದು ಮೆರವಣಿಗೆಯಲ್ಲಿ ಬಸ್ ನಿಲ್ದಾಣಕ್ಕೆ ತೆರಳಿ ಅಲ್ಲಿ ಮಾನವ ಸರಪಳಿ ರಚಿಸಿ ನಟ ದರ್ಶನ್ ಹಾಗೂ ಇತರರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ಅಲ್ಲಿಂದ ತಾಲೂಕು ಕಚೇರಿಗೆ ತೆರಳಿ ಪ್ರತಿಭಟನೆ ನಡೆಸಿದರು. ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಡಿ.ಜಿ.ಶಿವರಾಜು ಮಾತನಾಡಿ, ನಟ ದರ್ಶನ್ ಮಾಡಿರುವುದು ಸಾಮಾನ್ಯ ಕೃತ್ಯವಲ್ಲ. ವಿಕೃತಿ ಎಂದು ಕಿಡಿಕಾರಿದರು.

ನಟ ದರ್ಶನ್ ತಾನು ಅಜಾನುಬಾಹು ಎಂಬುದನ್ನು ರೇಣುಕಾಸ್ವಾಮಿ ಎದುರು ತೋರಿಸಿಕೊಂಡಿದ್ದಾನೆ. ಅಲ್ಲದೇ ಕೊಲೆ ಪ್ರಕರಣದಲ್ಲಿ ಭಾಗಿಯಾದ ಎಲ್ಲರಿಗೂ ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದರು.

ಮುಖಂಡ ಗಿರೀಶ್ ಮಾತನಾಡಿ, ತಂದೆ–ತಾಯಿ ನೋಡಿಕೊಳ್ಳಬೇಕಾದ ವಯಸ್ಸಿನಲ್ಲಿ ರೇಣುಕಾಸ್ವಾಮಿ ಕೊಲೆಯಾಗಿದ್ದಾನೆ. ಆತನ ಹೆಂಡತಿ ಗರ್ಭಿಣಿಯಾಗಿದ್ದು, ಕುಟುಂಬವು ಆಘಾತ ಮತ್ತು ದುಃಖ ದಲ್ಲಿದೆ. ಅವರಿಗೆ ನ್ಯಾಯ ಸಿಗಬೇಕು. ಈ ಘಟನೆ ಯಿಂದ ಅಭಿಮಾನಿಗಳಿಗೆ ದರ್ಶನ್ ನಿಜ ಮುಖ ಬಯಲಾಗಿದೆ ಎಂದರು.

ಇದೇ ವೇಳೆ ಪ್ರತಿಭಟನಾಕಾರರು ತಹಸೀಲ್ದಾರ್ ರುಕಿಯಾ ಬೇಗಂ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಮಹಾಸಭಾ ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ, ಟೌನ್ ಅಧ್ಯಕ್ಷ ಎಸ್.ಎನ್.ಮೋಹನ್ ಕುಮಾರ್, ಮುಖಂಡರಾದ ಮಹದೇವಪ್ಪ, ಗಣಪತಿ, ಬೈಂಗೀಶ್, ಎಂ.ಕೆಂಡಗಣ್ಣಸ್ವಾಮಿ, ಎಸ್.ಎಸ್.ಪ್ರಭುಸ್ವಾಮಿ, ಶಿವಕುಮಾರ್, ಡಿ.ಪಿ.ನಟರಾಜು, ಡಿ.ಸಿ.ಮಹೇಶ್, ಮಹಿಳಾ ಅಧ್ಯಕ್ಷೆ ಸುನಂದರಾಜ್, ಭವಾನೀಶ್, ಎಸ್.ಎನ್.ಪ್ರಕಾಶ್ ಹಾಗೂ ವೀರಶೈವ ಲಿಂಗಾಯತ ಸಮಾಜದ ಮುಖಂಡರು ಇದ್ದರು.

ಅಣ್ಣೂರಲ್ಲಿ ಸಿಕಲ್ ಸೆಲ್ ಅನಿಮಿಯಾ ತಪಾಸಣೆ ಶಿಬಿರ


ಸೊಳ್ಳೆಪುರ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ಸಿಕಲ್ ಸೆಲ್ ಅನಿಮಿಯಾ ತಪಾಸಣೆ ಶಿಬಿರ ನಡೆಯಿತು.

ಹೆಚ್.ಡಿ.ಕೋಟೆ, ಜೂ.24– ಸಿಕಲ್ ಸೆಲ್ ಅನಿಮಿಯಾವನ್ನು ಕುಡುಗೋಲು ಅಥವಾ ಕುಡ್ಲು ಕಾಯಿಲೆ ಎಂದು ಕರೆಯುತ್ತಾರೆ. ಈ ಕಾಯಿಲೆಯಲ್ಲಿ ಕೆಂಪು ರಕ್ತ ಕಣಗಳು ಕುಡುಗೋಲು ಆಕಾರಕ್ಕೆ ಪರಿವರ್ತನೆಗೊಂಡು ಅನಾರೋಗ್ಯಕ್ಕೆ ಕಾರಣವಾಗುತ್ತದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ತಿಳಿಸಿದರು.

ತಾಲೂಕಿನ ಅಣ್ಣೂರು ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಸೊಳ್ಳೆಪುರ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ಗಿರಿಜನ ಮಕ್ಕಳಿಗಾಗಿ ಆಯೋಜಿಸಿದ್ದ ಸಿಕಲ್ ಸೆಲ್ ಅನಿಮಿಯಾ ತಪಾಸಣೆ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಸಿಕಲ್ ಸೆಲ್ ಕಾಯಿಲೆ ಹೆಚ್ಚಾಗಿ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಒಂದು ಅನುವಂಶಿಕ ಕಾಯಿಲೆ. ಆದರೂ ಆರೋಗ್ಯವಂತ ಪೋಷಕರಿಗೆ ಸಿಕಲ್ ಸೆಲ್ ಕಾಯಿಲೆ ಇರುವ ಮಕ್ಕಳು ಹುಟ್ಟಬಹುದು. ಪದೇ ಪದೇ ಜ್ವರ, ತೀವ್ರ ಮೂಳೆ ನೋವು, ತೀವ್ರ ಹೊಟ್ಟೆ ನೋವು, ಆಗಾಗ ಕಾಮಲೆ ರೋಗ, ರಕ್ತ ಹೀನತೆ, ವಾಸಿಯಾಗದ ಹುಣ್ಣುಗಳು, ಲಕ್ವಾ ಈ ಲಕ್ಷಣಗಳು ಮಕ್ಕಳಲ್ಲಿ ಕಂಡು ಬರುತ್ತವೆ. ಈ ಲಕ್ಷಣಗಳು ಯಾವುದೇ ಮಕ್ಕಳಲ್ಲಿ ಹಾಗೂ ಪೋಷಕರಲ್ಲಿ ಕಂಡು ಬಂದಲ್ಲಿ ರಕ್ತ ಪರೀಕ್ಷೆ ಮೂಲಕ ಪತ್ತೆ ಹಚ್ಚಬಹುದು ಎಂದರು.

ಮಕ್ಕಳಿಗೆ ಸಿಕಲ್ ಸೆಲ್ ಕಾಯಿಲೆ ದೃಢಪಟ್ಟರೆ ಕುಟುಂಬದ ಎಲ್ಲಾ ಸದಸ್ಯರು, ಸಂಬಂಧಿಕರನ್ನು ತಪಾಸಣೆಗೆ ಒಳಪಡಿಸಬೇಕು. ಇನ್ನು ಈ ಕಾಯಿಲೆಯನ್ನು ಕಡೆಗಣಿಸಿದ್ದೆ ಆದಲ್ಲಿ ಜೀವಕ್ಕೆ ಅಪಾಯವಾಗಬಹುದು. ಹೀಗಾಗಿ ಆರಂಭದಲ್ಲೇ ಕಾಯಿಲೆ ಪತ್ತೆ ಹಚ್ಚಿ ಚಿಕಿತ್ಸೆ ಪಡೆದುಕೊಂಡರೆ ಪ್ರಾಣಾಪಾಯದಿಂದ ಪಾರಾಗಬಹುದು ಎಂದರು.

ಇದೀಗ ಎಲ್ಲಾ ವಸತಿ ಶಾಲೆಗಳಲ್ಲಿ ಪರೀಕ್ಷೆ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಎಲ್ಲಾ ಹಾಡಿಯ ಆದಿವಾಸಿಗಳು ಮತ್ತು ಮಕ್ಕಳಿಗೂ ಸಿಕಲ್ ಸೆಲ್ ಅನಿಮಿಯಾ ತಪಾಸಣೆ ಮಾಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಜಿ.ಆರ್.ಮಹೇಶ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ನಾಗೇಂದ್ರ, ರವಿರಾಜ್, ಆದಿವಾಸಿ ಮುಖಂಡ ಪುಟ್ಟಬಸವಯ್ಯ, ಸಿದ್ದರಾಜು, ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳಾದ ಕೃಷ್ಣ, ಸುಜಾತ, ಅಂಬಿಕಾ, ಬೀರಪ್ಪ, ಕಮಲಮ್ಮ, ಆಶಾ ಕಾರ್ಯಕರ್ತೆಯರು ವಸತಿ ಶಾಲೆ ಉಪನ್ಯಾಸಕರು, ಆಡಳಿತ ವರ್ಗ ಮತ್ತು ಶಿಕ್ಷಕರು, ಮಕ್ಕಳು ಇತರರಿದ್ದರು.

ಮೈಸೂರು ಮಿತ್ರ ಮಂಗಳವಾರ 25 ಜೂನ್ 2024

ಮೈಸೂರಲ್ಲಿ ರಫ್ತು ನಿರ್ವಹಣಾ ತರಬೇತಿ

ರಫ್ತು ವ್ಯವಹಾರದಿಂದ ದೇಶದ ಆದಾಯ ಹೆಚ್ಚಳ

ಮೈಸೂರು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ.ದಿನೇಶ್ ಅಭಿಮತ

ಮೈಸೂರು,ಜೂ.24(ಎಂಟಿವೈ)–ರಫ್ತು ವ್ಯವಹಾರದಿಂದ ವಿದೇಶಿ ವಿನಿಮಯದೊಂದಿಗೆ ದೇಶದ ಆದಾಯ ಹೆಚ್ಚಾಗಲಿದ್ದು, ಕೈಗಾರಿಕೆಗಳಿಗೆ ಉತ್ತೇಜನ ದೊರೆಯುತ್ತದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ.ದಿನೇಶ್ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಸೋಮವಾರ ಆಯೋಜಿಸಿದ್ದ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎಲ್ಲಾ ಉದ್ದಿಮೆದಾರರಿಗೂ ಪ್ರತಿದಿನ ಉದ್ದಿಮೆಯಲ್ಲಿ ಹೊಸತನ್ನು ಕಲಿಯಬೇಕು ಎನ್ನುವ ಹಂಬಲ ಇರಬೇಕು. ದೇಶದಲ್ಲಿ 778 ಮಿಲಿಯನ್ ಡಾಲರ್ ಮೊತ್ತದ ವಸ್ತುಗಳನ್ನು ರಫ್ತು ಮಾಡಲಾಗಿದ್ದು, 860 ಮಿಲಿಯನ್ ಡಾಲರ್ ಮೊತ್ತದ ಸರಕನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ದೇಶದಲ್ಲಿಯೇ ರಫ್ತು ವ್ಯವಹಾರ, ವಹಿವಾಟಲ್ಲಿ ಕರ್ನಾಟಕ 4ನೇ ಸ್ಥಾನದಲ್ಲಿದ್ದು, ಮೊದಲ ಸ್ಥಾನಕ್ಕೆ ಬರಲು ಎಲ್ಲಾ ಉದ್ದಿಮೆದಾರರು ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಉದ್ದಿಮೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಎಲ್ಲಾ ಜಿಲ್ಲೆಯಲ್ಲೂ ರಫ್ತು ಉತ್ತೇಜನ ಕೇಂದ್ರ ಸ್ಥಾಪಿಸಿದೆ. ಮೈಸೂರು ಜಿಲ್ಲೆಯಲ್ಲಿಯೂ ಕೈಗಾರಿಕೆಗಳ ಸ್ಥಾಪನೆಗೆ ವಿಫುಲ ಅವಕಾಶಗಳಿವೆ. ಪ್ರತಿ ವರ್ಷ ಶೇ.5ರಷ್ಟು ರಫ್ತು ಹೆಚ್ಚಳ ಮಾಡಲು ಕ್ರಮ ಕೈಗೊಳ್ಳಬೇಕು. ಮೈಸೂರು ಜಿಲ್ಲೆಯಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಪೂರಕವಾದ ವಾತಾವರಣವಿದ್ದು, ಕೈಗಾರಿಕೆಗಳ ಬೆಳವಣಿಗೆಗೆ ಬೇಕಾದ ಸೌಲಭ್ಯ ಸಿಗುತ್ತಿದೆ. ಈ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ಉತ್ಪಾದನೆ ಪ್ರಮಾಣವನ್ನು ಹೆಚ್ಚಿಸಿ, ರಫ್ತು ಮಾಡುವ ಮೂಲಕ ಉದ್ದಿಮೆಯಲ್ಲಿ ಇನ್ನಷ್ಟು ಪ್ರಗತಿ ಸಾಧಿಸಬೇಕು ಎಂದರು.



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಆಯೋಜಿಸಿದ್ದ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮವನ್ನು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ.ದಿನೇಶ್ ಉದ್ಘಾಟಿಸಿದರು.

ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದ ಜಂಟಿ ನಿರ್ದೇಶಕರಾದ ಸಿ.ಎಸ್.ಬಾಬು ನಾಗೇಶ್ ಮಾತನಾಡಿ, ಜಿಲ್ಲೆಯಲ್ಲಿ ಯುವ ಉದ್ಯಮಿಗಳು ಹೆಚ್ಚಾಗಿದ್ದು, 6 ದಿನಗಳ ಕಾಲ ಹಮ್ಮಿಕೊಂಡಿರುವ ರಫ್ತು ನಿರ್ವಹಣಾ ತರಬೇತಿಯನ್ನು ಸದುಪಯೋಗಪಡಿಸಿಕೊಳ್ಳಬೇಕು. ರಫ್ತು ಕೈಗಾರಿಕೆಗಳ ಆದಾಯವನ್ನು ಹೆಚ್ಚಿಸುತ್ತದೆ. ಇದರಿಂದ ಉತ್ಪಾದನೆ ಹೆಚ್ಚು ಮಾಡಿ, ಉದ್ಯಮಿಗಳು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಮೈಸೂರು ಕೈಗಾರಿಕಾ ಸಂಘದ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ ಮಾತನಾಡಿ, ಮೈಸೂರಲ್ಲಿ ರಫ್ತು ಕೇಂದ್ರದ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ರಫ್ತು ಮಾಡಬೇಕಾದರೆ ಪ್ಯಾಕಿಂಗ್ ಉತ್ತಮವಾಗಿರಲು ಹೆಚ್ಚಿನ ಗಮನ ಹರಿಸಬೇಕು. ನಾವು ಉತ್ಪಾದಿಸುವ ವಸ್ತುಗಳು ತಲುಪಬೇಕಾದ ಸ್ಥಳವನ್ನು ಉತ್ತಮ ಸ್ಥಿತಿಯಲ್ಲಿ ಸಕಾಲದಲ್ಲಿ ತಲುಪುವಂತೆ ನೋಡಿಕೊಳ್ಳಬೇಕು. ರಫ್ತಿನಲ್ಲಿ ಸಣ್ಣ ಕೈಗಾರಿಕೆಗಳ ಪಾಲು ಶೇ.45ರಷ್ಟು ಇದೆ. ಮೈಸೂರಲ್ಲಿ ನೋಟು ಮುದ್ರಣ ಮಾಡಲಾಗುತ್ತಿದೆ. ಮೈಸೂರು ಕೈಗಾರಿಕೆಗಳ ಸ್ಥಾಪನೆಗೆ ಉತ್ತಮ ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ. ಸೆಮಿ ಕಂಡಕ್ಟರ್‌ಗಳ ಉತ್ಪಾದನಾ ಕೇಂದ್ರ ಸ್ಥಾಪನೆ ಆಗುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು ಮಾತನಾಡಿ, ನಾವು ರಫ್ತು ಮಾಡುವ ಯಾವುದೇ ಪದಾರ್ಥ ರಾಸಾಯನಿಕ ಮುಕ್ತವಾಗಿರಬೇಕು. ಉತ್ಪಾದನೆ ಗುಣಮಟ್ಟದಿಂದ ಕೂಡಿರಬೇಕು. ಮೈಸೂರಿನಲ್ಲಿ ಈಗಾಗಲೇ ಸುಮಾರು 165 ಉದ್ಯಮಿಗಳು ನಾನಾ ಉತ್ಪಾದನೆ ರಫ್ತು ಮಾಡುತ್ತಾ ಬಂದಿದ್ದಾರೆ. ಇನ್ನು ಹೆಚ್ಚಿನ ಉದ್ಯಮಿಗಳು ದೇಶ ವಿದೇಶಕ್ಕೆ ರಫ್ತು ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ರಫ್ತು ಮಾಹಿತಿ ಕೇಂದ್ರದ ಉಪ ನಿರ್ದೇಶಕರಾದ ಮೇಘಲಾ ಸೇರಿದಂತೆ ಹಲವು ಕೈಗಾರಿಕೋದ್ಯಮಿಗಳು ಉಪಸ್ಥಿತರಿದ್ದರು.

ನವಕೀಸ್‌ನಲ್ಲಿ ಯೋಗದಿನ ಆಚರಣೆ



ಮೈಸೂರು, ಜೂ.24(ಎಂಕೆ)– ಮೈಸೂರಿನ ಬನ್ನೂರು ಮುಖ್ಯರಸ್ತೆಯಲ್ಲಿರುವ ಎಂ.ಎಸ್.ರಾಮಯ್ಯ ನವಕೀಸ್ ಎಜುಕೇಷನಲ್ ಸೆಂಟರ್‌ನಲ್ಲಿ 10ನೇ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು.

ಈ ವೇಳೆ ವಿದ್ಯಾರ್ಥಿಗಳು ಪ್ರಾಣಾಯಾಮ ಸೇರಿದಂತೆ ಯೋಗದ ವಿವಿಧ ಆಸನಗಳನ್ನು ಪ್ರದರ್ಶಿಸಿದರು. ಅಲ್ಲದೆ ಯೋಗದ ಮಹತ್ವ, ಪ್ರತಿನಿತ್ಯ ಯೋಗಾಭ್ಯಾಸದಿಂದಾಗುವ ಮಹತ್ತರವಾದ ಪ್ರಯೋಜನಗಳ ಕುರಿತು ತಿಳಿಸಿಕೊಡಲಾಯಿತು. ಪ್ರಧಾನಿ ನರೇಂದ್ರ ಮೋದಿಯವರು ಯೋಗದ ಪರಿಕಲ್ಪನೆಯನ್ನು ಜಾಗತಿಕವಾಗಿ ಪ್ರಚಾರ ಮತ್ತು ಜನಪ್ರಿಯಗೊಳಿಸಿದ್ದರ ಕುರಿತು ತಿಳಿಸಿಕೊಡಲಾಯಿತು. ಶಾಲಾ ಮುಖ್ಯೋಪಾಧ್ಯಾಯರಾದ ತಾರಕೇಶ್ವರಿ ದೈನಂದಿನ ಜೀವನದಲ್ಲಿ ಯೋಗಾಭ್ಯಾಸ ಮಾಡುವುದರ ಪ್ರಯೋಜನಗಳನ್ನು ತಿಳಿಸಿದರು. ಶಾಲೆಯ ಶಿಕ್ಷಕರು, ಸಿಬ್ಬಂದಿ ಉಪಸ್ಥಿತರಿದ್ದರು.

ರೋಟರಿ ಮೈಸೂರು ಬೃಂದಾವನದ ಬೆಳ್ಳಿ ಮಹೋತ್ಸವ ಆಚರಣೆ



ಮೈಸೂರು, ಜೂ.24(ಎಂಕೆ)– ಮೈಸೂರಿನ ಹೆಬ್ಬಾಳಿನಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ರೋಟರಿ ಮೈಸೂರು ಬೃಂದಾವನದ ಬೆಳ್ಳಿ ಮಹೋತ್ಸವದ ವರ್ಷಾಚರಣೆ, ಚಾರಿಟಿ ಹಾಗೂ ಪದಗ್ರಹಣ ಸಮಾರಂಭ ಸೋಮವಾರ ನಡೆಯಿತು.

ಸಮಾರಂಭವನ್ನು ರೋಟರಿ ಜಿಲ್ಲೆ–3181ರ ಮಾಜಿ ಜಿಲ್ಲಾ ಗೌರ್ನರ್ ಪ್ರಕಾಶ್ ಕಾರಂತ್ ಉದ್ಘಾಟಿಸಿದರು. ಹಾಲಿ ಜಿಲ್ಲಾ ಗೌರ್ನರ್ ಹೆಚ್.ಆರ್.ಕೇಶವ್ ಸಮ್ಮುಖದಲ್ಲಿ 2024–25ನೇ ಸಾಲಿಗೆ ಅಧ್ಯಕ್ಷ ಎಸ್.ನಾಗೇಶ್, ಕಾರ್ಯದರ್ಶಿ ಡಾ.ಹೆಚ್.ಎಂ.ವಿರೂಪಾಕ್ಷ ನೇತೃತ್ವದಲ್ಲಿ ಪದಾಧಿಕಾರಿಗಳ ಪದಗ್ರಹಣ ನೆರವೇರಿತು.

ಕುಂಬಾರಕೊಪ್ಪಲಿನ ವಿಕಲಚೇತನ ಹೂವಿನ ವ್ಯಾಪಾರಿ ವಿಜಯ್‌ಕುಮಾರ್‌ಗೆ ತಳ್ಳುವ ಗಾಡಿಯನ್ನು ನೀಡುವ ಮೂಲಕ ಅನುಕೂಲ ಮಾಡಿಕೊಡಲಾಯಿತು. ಹಾಗೆಯೇ 25ನೇ ವರ್ಷದ ಅಂಗವಾಗಿ ರೋಟರಿ ಮೈಸೂರು ಬೃಂದಾವನ ಎಂದು ಹೆಸರುಳ್ಳ ಬೆಳ್ಳಿ ನಾಣ್ಯಗಳನ್ನು ಬಿಡುಗಡೆ ಮಾಡಿ, ಸಂಸ್ಥೆಗೆ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸಿದವರನ್ನು ಅಭಿನಂದಿಸಿ, ಉಡುಗೊರೆಯಾಗಿ ನೀಡಲಾಯಿತು.

ರೋಟರಿ ಮೈಸೂರು ಬೃಂದಾವನದ 2023–24ನೇ ಸಾಲಿನ ಅಧ್ಯಕ್ಷ ಎಲ್.ಸಿ.ಧರ್ಮಾನಂದ, ರೋಟೇರಿಯನ್‌ಗಳಾದ ಪ್ರಮೋದ್ ಡೆಮೆಲೊ, ಶ್ರೀಪ್ರಕಾಶ್ ಆರ್ ಹನಸೋಗೆ, ಕೇಶವ್ ಪ್ರಕಾಶ್, ಪಿ.ಎನ್.ಶ್ರೀಧರ, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ನಗರಪಾಲಿಕೆ ಮಾಜಿ ಸದಸ್ಯ ಶೋಭಾ ಮೋಹನ್ ಮತ್ತಿತರರು ಉಪಸ್ಥಿತರಿದ್ದರು.

ಯುಜಿಸಿ–ನೆಟ್ ಹಗರಣ ಸಂಬಂಧ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳನ್ನೊಳಗೊಂಡ ಸಮಿತಿಯಿಂದ ತನಿಖೆಗೆ ಆಗ್ರಹ

ಭಾರತ ವಿದ್ಯಾರ್ಥಿ ಫೆಡರೇಷನ್ ಕಾರ್ಯಕರ್ತರಿಂದ ಪ್ರತಿಭಟನೆ

ಮೈಸೂರು,ಜೂ.24(ಎಂಟಿವೈ)– ಯುಜಿಸಿ–ನೆಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣವನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿ ತನಿಖೆ ನಡೆಸಬೇಕು ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಆಗ್ರಹಿಸಿದೆ.

ಮಾನಸ ಗಂಗೋತ್ರಿಯ ಎದುರಿನ ಕುವೆಂಪು ಪ್ರತಿಮೆ ಮುಂದೆ ಎಸ್‌ಎಫ್‌ಐ ಕಾರ್ಯಕರ್ತರು ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.



ಯುಜಿಸಿ–ನೆಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣವನ್ನು ಸುಪ್ರೀಂಕೋರ್ಟ್ ನ್ಯಾಯಾಧೀಶರ ಸಮಿತಿಯಿಂದ ತನಿಖೆ ನಡೆಸುವಂತೆ ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಯುಜಿಸಿ–ನೆಟ್ ಪರೀಕ್ಷೆಯನ್ನು ಜೂ.18ರಂದು ನಡೆಸಲಾಗಿತ್ತು. ಆದರೆ, ಜೂ.19ರಂದು ಶಿಕ್ಷಣ ಸಚಿವಾಲಯ ಯುಜಿಸಿ–ನೆಟ್ 2024 ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಹಿನ್ನೆಲೆಯಲ್ಲಿ ಪರೀಕ್ಷೆ ರದ್ದುಗೊಳಿಸಿತ್ತು. ಎನ್‌ಟಿಎ ಪ್ರಾರಂಭವಾದಂದಿನಿಂದ ಪ್ರಮುಖ ಪರೀಕ್ಷೆಗಳಲ್ಲಿ ಗಂಭೀರ ಹಗರಣಗಳು ನಡೆಯುತ್ತಿವೆ. ಅಂತಹ ಎನ್‌ಟಿಎ ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಭಾಗಿಯಾದವರ ಬಗ್ಗೆ ಪಾರದರ್ಶಕ ಮತ್ತು ನಿಷ್ಪಕ್ಷಪಾತ ತನಿಖೆಗಾಗಿ ಈ ಪ್ರಕರಣವನ್ನು ಸುಪ್ರೀಂ ಕೋರ್ಟಿನ ನ್ಯಾಯಾಧೀಶರ ಒಳಗೊಂಡ ಸಮಿತಿಗೆ ಒಪ್ಪಿಸಬೇಕು ಎಂದು ಆಗ್ರಹಿಸಿದರು.

ಜೂ.4ರಂದು ಪ್ರಕಟವಾದ ನೀಟ್ ಫಲಿತಾಂಶದಲ್ಲೂ ಭಾರೀ ಹಗರಣ ನಡೆದಿರುವುದು ಬೆಳಕಿಗೆ ಬಂದಿದೆ. ಒಂದೇ ಕೇಂದ್ರದ ಹಲವು ಕ್ರಮ ಸಂಖ್ಯೆ ಹೊಂದಿರುವ ವಿದ್ಯಾರ್ಥಿಗಳು 720ಕ್ಕೆ 720 ಅಂಕಗಳನ್ನು ಪಡೆದಿದ್ದಾರೆ. ಇದು ಹಲವಾರು ಅನುಮಾನಕ್ಕೆ ಕಾರಣವಾಗಿದೆ. ಆ ವಿದ್ಯಾರ್ಥಿಗಳು ಒಂದೇ ಖಾಸಗಿ ಕೋಚಿಂಗ್ ಸೆಂಟರ್‌ಗೆ ಸೇರಿದವರಾಗಿದ್ದಾರೆ. ಈಗೆ ವೈದ್ಯಕೀಯ ಕ್ಷೇತ್ರದ ಪ್ರವೇಶ ಪರೀಕ್ಷೆಯಲ್ಲಿ ಭ್ರಷ್ಟಾಚಾರ ನಡೆದಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ. ಹಾಗಾಗಿ ಹಲವಾರು ಪರೀಕ್ಷೆಗಳಲ್ಲಿ ಅಕ್ರಮವಾಗಿರುವ ಎನ್‌ಟಿಎ ರದ್ದುಪಡಿಸಬೇಕು ಎಂದು ಆಗ್ರಹಿಸಿದರು.

ಹಕ್ಕೊತ್ತಾಯಗಳು: ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ನೀಟ್) ರದ್ದುಗೊಳಿಸಿ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಜಾರಿಯಾಗಬೇಕು. ಎಲ್ಲ ರಾಷ್ಟ್ರೀಯ ಪರೀಕ್ಷೆಗಳನ್ನು ಸಂವಿಧಾನದ ಎಂಟನೇ ಶೆಡ್ಯೂಲ್‌ನಲ್ಲಿ ತಿಳಿಸಿರುವ 22 ಭಾಷೆಗಳಲ್ಲೂ ನಡೆಸಬೇಕು. ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಅಕ್ರಮದ ನೇರ ಹೊಣೆಯನ್ನು ಭಾರತದ ಸರ್ಕಾರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಒತ್ತು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಎಸ್‌ಎಫ್‌ಐನ ಅಖಿಲ ಭಾರತ ಜಂಟಿ ಕಾರ್ಯದರ್ಶಿ ನಿತೀಶ್ ನಾರಾಯಣ್, ಜಿಲ್ಲಾ ಅಧ್ಯಕ್ಷ ವಿಜಯ್ ಕುಮಾರ್, ಜಿಲ್ಲಾ ಕಾರ್ಯದರ್ಶಿ ಡಿ.ಅಭಿ, ಮುಖಂಡರಾದ ಎಸ್.ಕೆ.ಚಿರಾಗ್, ಪ್ರಜ್ವಲ್, ಮೇಘ ಶ್ರೀ, ಭಾರತ್ ಮತ್ತು ಹಲವು ಕಾರ್ಯಕರ್ತರು ಭಾಗವಹಿಸಿದ್ದರು.

ಪರೀಕ್ಷಾ ದಿನಗಳಂದು ನಿಷೇಧಾಜ್ಞೆ ಜಾರಿ

ಮೈಸೂರು.ಜೂ.24– ಜೂನ್ 24 ರಿಂದ ಜುಲೈ 5 ರವರೆಗೆ ಮೈಸೂರು ನಗರದ 2 ಪರೀಕ್ಷಾ ಕೇಂದ್ರಗಳಲ್ಲಿ ದ್ವಿತೀಯ ಪಿ.ಯು.ಸಿ. ಪರೀಕ್ಷೆ–3 ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಬಳಿ ಪರೀಕ್ಷಾ ಅಕ್ರಮಗಳು, ಕಾನೂನು ಬಾಹಿರ ಚಟುವಟಿಕೆಗಳು ನಡೆಯುವುದನ್ನು ತಡೆಗಟ್ಟುವ ಸಲುವಾಗಿ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮತ್ತು ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಪರೀಕ್ಷಾ ಕೇಂದ್ರಗಳ ಸುತ್ತಲೂ ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ.

ಜೂನ್ 24 ರಿಂದ 30 ರವರೆಗೆ ದ್ವಿತೀಯ ಪಿ.ಯು.ಸಿ. ಪರೀಕ್ಷಾ ದಿನಗಳಂದು ಸೆಕ್ಷನ್ 144 ರೀತ್ಯ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ, ಜುಲೈ 1 ರಿಂದ 5 ರವರೆಗೆ– ದ್ವಿತೀಯ ಪಿ.ಯು.ಸಿ. ಪರೀಕ್ಷಾ ದಿನಗಳಂದು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ–2023 ಸೆಕ್ಷನ್ 163 ರೀತ್ಯ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆಯನ್ನು ಹೊರಡಿಸಲಾಗಿದೆ.

ಪರೀಕ್ಷೆಯು ಮೈಸೂರಿನ ಮರಿಮಲ್ಲಪ್ಪ ಪದವಿ ಪೂರ್ವ ಕಾಲೇಜು ಹಾಗೂ ಪೀಪಲ್ಸ್ ಪಾರ್ಕ್‌ನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ನಡೆಯಲಿದ್ದು, ಪರೀಕ್ಷಾ ದಿನಗಳಂದು ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳನ್ನು ಹೊರತುಪಡಿಸಿ ಅನಧೀಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್ ಮತ್ತು ಸೈಬರ್ ಕೇಂದ್ರಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ಎರಡು ದಿನಗಳ ಕ್ರೆಡಾಯ್ ಸಮಾವೇಶ ಆರಂಭ

ಬಡಾವಣೆಗಳು ತ್ವರಿತವಾಗಿ ಅಭಿವೃದ್ಧಿ; ಮೂಲ ಸೌಕರ್ಯ ಮಾತ್ರ ಮರೀಚಿಕೆ!

• ಶಾಸಕ ತನ್ವೀರ್ ಸೇಠ್ ವಿಷಾದ • ಪರಿಸರ ನಾಶದಂತಹ ಕಾರ್ಯಕ್ಕೆ ನಾವು ಕೈ ಹಾಕಬಾರದು

ಮೈಸೂರು, ಜೂ. 24(ಆರ್‌ಕೆ)– ಮೈಸೂರಿನ ಹೊರವಲಯದ ಖಾಸಗಿ ಹೋಟೆಲ್‌ನಲ್ಲಿ ಎರಡು ದಿನಗಳ ರಾಜ್ಯ ಮಟ್ಟದ ಕ್ರೆಡಾಯ್ ಸಮಾವೇಶ ಇಂದಿನಿಂದ ಆರಂಭವಾಗಿದೆ.

ಕ್ರೆಡಾಯ್ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ರಾಜ ಶ್ರೀನಿವಾಸ, ರಾಜ್ಯ ಘಟಕದ ಅಧ್ಯಕ್ಷ ಪ್ರದೀಪ್ ಡಿ. ರಾಯ್ಕರ್, ಶಾಸಕ ತನ್ವೀರ್ ಸೇಠ್ ಸಮಾವೇಶವನ್ನು ಉದ್ಘಾಟಿಸಿದರು. ಪಾಲ್ಗೊಂಡಿದ್ದ ಕ್ರೆಡಾಯ್ ಸದಸ್ಯರು, ರಿಯಲ್ ಎಸ್ಟೇಟ್ ಉದ್ದಿಮೆದಾರರು, ತಂತ್ರಜ್ಞರು, ಸಿವಿಲ್ ಇಂಜಿನಿಯರ್‌ಗಳು, ಕಟ್ಟಡ ನಿರ್ಮಾಣದಲ್ಲಿ ತೊಡಗಿರುವ ಪರಿಣಿತರು ಹಾಗೂ ಹೂಡಿಕೆದಾರರನ್ನುದ್ದೇಶಿಸಿ ಮಾತನಾಡಿದ ತನ್ವೀರ್ ಸೇಠ್, ಇದೀಗ ಅತ್ಯಲ್ಪ ಅವಧಿಯಲ್ಲಿ ಬಡಾವಣೆಗಳು ತಲೆ ಎತ್ತುತ್ತಿವೆ ಆದರೆ, ಮೂಲ ಸೌಲಭ್ಯಗಳಿಲ್ಲದ ಕಾರಣ ಅಲ್ಲಿನ ವಾಸಿಗಳು ತೊಂದರೆ ಅನುಭವಿಸುವಂತಾಗಿದೆ ಎಂದರು.

ಉದ್ಯಾನವನ, ಕುಡಿಯುವ ನೀರು, ವಿದ್ಯುತ್ ಸಂಪರ್ಕ, ಒಳಚರಂಡಿ, ರಸ್ತೆ, ಕಸ ವಿಲೇವಾರಿ ಘಟಕ, ಎಸ್‌ಟಿಪಿಯಂತಹ ಸೌಲಭ್ಯಗಳನ್ನು ಬಡಾವಣೆ ನಿರ್ಮಾಣ ಹಂತದಲ್ಲೇ ಬಿಲ್ಡರ್‌ಗಳು ಒದಗಿಸಿದಲ್ಲಿ ಮಾತ್ರ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಲಿದೆ ಎಂದ ಅವರು, ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಪರಿಸರ ನಾಶ ಮಾಡುತ್ತಿರುವುದರಿಂದ ಉತ್ತಮ ವಾತಾವರಣ ಮರೀಚಿಕೆಯಾಗಿದೆ ಎಂದರು.



ಮೈಸೂರಿನ ಹೂಟಗಳ್ಳಿ ಬಳಿಯ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ಆರಂಭವಾದ ಎರಡು ದಿನಗಳ ಕ್ರೆಡಾಯ್ ಸಮಾವೇಶವನ್ನು ಶಾಸಕ ತನ್ವೀರ್ ಸೇಠ್ ಉದ್ಘಾಟಿಸಿದರು. ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ. ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಮುಡಾ ಅಧ್ಯಕ್ಷ ಕೆ. ಮರೀಗೌಡ, ಕ್ರೆಡಾಯ್ ನ್ಯಾಷನಲ್ ಜಂಟಿ ಕಾರ್ಯದರ್ಶಿ ರಾಜ ಶ್ರೀನಿವಾಸ, ಕರ್ನಾಟಕ ರಾಜ್ಯ ಅಧ್ಯಕ್ಷ ಪ್ರದೀಪ್ ಡಿ. ರಾಯ್ಕರ್, ಭಾಸ್ಕರ್ ನಾಗೇಂದ್ರಪ್ಪ, ಡಿ. ಶ್ರೀಹರಿ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ಮೈಸೂರಲ್ಲಿ ನಿರ್ಮಾಣವಾಗುತ್ತಿರುವ ಅಪಾರ್ಟ್‌ಮೆಂಟ್‌ಗಳು ನಿಗದಿಗಿಂತ ಎತ್ತರವಾಗಿರುವುದರಿಂದ ಅಲ್ಲಿನ ನಿವಾಸಿಗಳು ಡಬಲ್ ತೆರಿಗೆ ಪಾವತಿಸುವಂತಾಗಿದ್ದು, ಹಲವು ತೊಂದರೆಗಳನ್ನು ಎದುರಿಸುವಂತಾಗಿದೆ ಎಂದರು.

ಕ್ರೆಡಾಯ್ ಕರ್ನಾಟಕದ ಅಧ್ಯಕ್ಷ ಪ್ರದೀಪ್ ಡಿ. ರಾಯ್ಕರ್ ಮಾತನಾಡಿ, ಲಭ್ಯವಿರುವ ತಂತ್ರಜ್ಞಾನ ಬಳಸಿ ಇಂದು ಪರಿಸರ ಸ್ನೇಹಿ ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸುವ ಮೂಲಕ ಜಾಗತಿಕ ತಾಪಮಾನವನ್ನು ಕಾಪಾಡಲಾಗುತ್ತಿದೆ ಎಂದರು.

ಕಟ್ಟಡ ನಿರ್ಮಾಣ ಕ್ಷೇತ್ರವು ಇಂದು ಕಾರ್ಮಿಕರ ಕೊರತೆ ಎದುರಿಸುತ್ತಿದ್ದು, ಹೊರ ರಾಜ್ಯಗಳಿಂದ ಕೌಶಲ್ಯ ಕಾರ್ಮಿಕರನ್ನು ಕರೆತಂದು ಕಾಮಗಾರಿ ಮಾಡಿಸಬೇಕಾಗಿದೆಯಾದ್ದರಿಂದ ಮುಂದೆ ಕಾರ್ಮಿಕರಿಗೆ ಕೌಶಲ್ಯಾಭಿವೃದ್ಧಿ ಕಾರ್ಯಾಗಾರ ಏರ್ಪಡಿಸಿ ತರಬೇತಿ ನೀಡಲಾಗುವುದು ಎಂದು ಅವರು ನುಡಿದರು.

ಶಾಸಕ ಕೆ. ಹರೀಶ್‌ಗೌಡ, ಕ್ರೆಡಾಯ್ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ರಾಜ ಶ್ರೀನಿವಾಸ, ಪ್ರೆಸಿಡೆಂಟ್ ಎಲೆಕ್ಟ್ ಭಾಸ್ಕರ ನಾಗೇಂದ್ರಪ್ಪ ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಮುಡಾ ಅಧ್ಯಕ್ಷ ಕೆ. ಮರೀಗೌಡ, ಕ್ರೆಡಾಯ್ ರಾಷ್ಟ್ರೀಯ ಉಪಾಧ್ಯಕ್ಷ ನಾಗರಾಜ ರೆಡ್ಡಿ, ಕೇರಳ ಅಧ್ಯಕ್ಷ ರವಿ ಜಾಕೋಬ್, ಮೈಸೂರಿನ ಡಿ. ಶ್ರೀಹರಿ, ಎನ್.ಎಸ್. ಮುರಳೀಧರ, ಕಾರ್ಯದರ್ಶಿ ಎಲ್. ಅರುಣ್ ಪಂಡಿತ್, ಬಿ. ಧನಂಜನ, ಕೆ.ಎನ್. ರವಿಶಂಕರ್ ಹಾಗೂ ಇತರರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಹೂಡಿಕೆ, ಸರ್ಕಾರದ ಯೋಜನೆಗಳು, ಉದ್ಯಮ ಎದುರಿಸುತ್ತಿರುವ ಸವಾಲುಗಳು, ತೊಡಕುಗಳು, ಪರಿಹಾರದ ಬಗ್ಗೆ ಸಮಾವೇಶದಲ್ಲಿ ಚಿಂತನ–ಮಂಥನ, ಚರ್ಚೆಗಳು ನಡೆಯುತ್ತಿವೆ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಗುಂಟೂರು ಖಾರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಅರನ್‌ಮನೈ–4 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಎ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮಹಾರಾಜ (ತ)	4 ಪ್ರದರ್ಶನಗಳು
ಸಂಗಂ	
ಕೋಟಿ (ಕ)	4 ಪ್ರದರ್ಶನಗಳು
ಲಿಡೋ	
ಕರಟಕ ದಮನಕ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಹದ್ದೂರ್ (ಕ)	4 ಪ್ರದರ್ಶನಗಳು
ಪ್ರಭಾ	
ಬಹದ್ದೂರ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಇನ್‌ಸೈಡ್ ಔಟ್ 2(3ಡಿ) (ಇಂ): ಬೆ.11ಕ್ಕೆ, ಪೋಕಿರಿ (ತ): ಮ.1ಕ್ಕೆ, ಹಮಾರೆ ಬಾರಹ್ (ಹಿಂ): ಸಂ.4.10ಕ್ಕೆ, ರಾ.7.05ಕ್ಕೆ, ಕ್ರಿಯೇಷನ್ಸ್ ಆಫ್ ದಿ ಗಾಡ್ಸ್ 1 (ಚೈ): ರಾ.10ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.10.25ಕ್ಕೆ, ರಾ.7.10ಕ್ಕೆ, ಮುಂಜ್ಯಾ (ಹಿಂ): ಮ.1.35ಕ್ಕೆ, ಶಿವಮ್ಮ ಚಂದು ಚಾಂಪಿಯನ್ (ಹಿಂ): ಸಂ.4.10ಕ್ಕೆ, ನಡನ್ನ ಸಂಭವಂ (ಮ): ರಾ.10.15ಕ್ಕೆ.
ಸ್ಕ್ರೀನ್ 3	ಮಹಾರಾಜ (ತ): ಬೆ.10.30ಕ್ಕೆ, ಸಂ.4.15ಕ್ಕೆ, ಸಂಭವಾಮಿ ಯುಗೇ ಯುಗೆ (ಕ): ಮ.1.25ಕ್ಕೆ, ಉಲ್ಲೋಝುಕ್ಕು (ಮ): ರಾ.7.15ಕ್ಕೆ, ಜಹಂಗೀರ್ ನ್ಯಾಷನಲ್ ಯೂನಿವರ್ಸಿಟಿ (ಹಿಂ): ರಾ.9.50ಕ್ಕೆ.
ಸ್ಕ್ರೀನ್ 4	ಚಿಲ್ಲಿ ಚಿಕನ್ (ಕ): ಬೆ.10.50ಕ್ಕೆ, ಕೋಟಿ (ಕ): ಮ.1.25ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಸಂ.4.40ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಇನ್‌ಸೈಡ್ ಔಟ್ (3ಡಿ)(ಹಿಂ): ಬೆ.11ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಮ.1.20ಕ್ಕೆ, ಸಂ.4.20ಕ್ಕೆ, ಸಂ.6.40ಕ್ಕೆ, ಮುಂಜ್ಯಾ (ಹಿಂ): ರಾ.9ಕ್ಕೆ.
ಸ್ಕ್ರೀನ್ 2	ಮುಂಜ್ಯಾ (ಹಿಂ): ಬೆ.10ಕ್ಕೆ, ರಾ.7.35ಕ್ಕೆ, ರಾಕ್‌ಸ್ಟಾರ್ (ಹಿಂ): ಮ.12.45ಕ್ಕೆ, ಕೋಟಿ (ಕ): ಸಂ.4.05ಕ್ಕೆ, ರಾ.10.20ಕ್ಕೆ,
ಸ್ಕ್ರೀನ್ 3	ಚಂದು ಚಾಂಪಿಯನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.05ಕ್ಕೆ, ಮಹಾರಾಜ (ತ): ಮ.1.35ಕ್ಕೆ, ರಾ.7.05ಕ್ಕೆ, ಶಿವಮ್ಮ ಹರೆಹಂಚಿನಾಳ (ಕ): ಸಂ.4.40ಕ್ಕೆ, ಜಿಆರ್‌ಆರ್‌ಆರ್ (ಮ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕೋಟಿ (ಕ): ಮ.1ಕ್ಕೆ, ಸಂಭವಾಮಿ ಯುಗೇ ಯುಗೆ (ಕ): ಸಂ.4.05ಕ್ಕೆ, ಚಿಲ್ಲಿ ಚಿಕನ್ (ಕ): ರಾ.7.05ಕ್ಕೆ, ಮಹಾರಾಜ (ತ): ರಾ.9.30ಕ್ಕೆ.
ಸ್ಕ್ರೀನ್ 2	ದೇಸಾಯಿ (ಕ): ಸಂ.4.15ಕ್ಕೆ, ಕೋಟಿ (ಕ): ರಾ.7.45ಕ್ಕೆ.
ಸ್ಕ್ರೀನ್ 3	ಪೋಕಿರಿ (ತ): ಮ.1.15ಕ್ಕೆ, ಲವ್ ಲಿ (ಕ): ಸಂ.4.20ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 4	ಲವ್ ಲಿ (ಕ): ಮ.1.30ಕ್ಕೆ, ಮಹಾರಾಜ (ತ): ಸಂ.6.45ಕ್ಕೆ, ಕೋಟಿ (ಕ): ರಾ.9.25ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139


ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮತ್ತೊಂದು ನಿಗೂಢ ಕೊಲೆ ಪ್ರಕರಣ ಸಿಐಡಿಗೆ

ಹತ್ಯೆಗೀಡಾದ ಬಾಲಕಿ ತಾಯಿ ದೂರಿನ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಆದೇಶ

ಮೈಸೂರು,ಜೂ.24(ಎಂಟಿವೈ)– ಬೆಂಗಳೂರಿನ ಪದ್ಮನಾಭನಗರದಲ್ಲಿ ಮೇ 15ರಂದು ನಡೆದ ಸಾಮಾಜಿಕ ಹೋರಾಟಗಾರ್ತಿ ಕೆಆರ್.ಸೌಮ್ಯಗೌಡ ಅವರ ಪುತ್ರಿ ಪ್ರಬುದ್ಧಾ ಬರ್ಬರ ಕೊಲೆ ಪ್ರಕರಣವನ್ನು ಸಿಐಡಿಗೆ ವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದಾರೆ.



ಪ್ರಬುದ್ಧಾ

ಬೆಂಗಳೂರಿನ ಖಾಸಗಿ ಕಾಲೇಜೊಂದರಲ್ಲಿ ದ್ವಿತೀಯ ವರ್ಷದ ಬಿಬಿಎ ವಿದ್ಯಾರ್ಥಿನಿ ಪ್ರಬುದ್ಧಾಳನ್ನು ಅವರ ಮನೆಯಲ್ಲಿಯೇ ಕುತ್ತಿಗೆ ಸೀಳಿ, ಮೊಣಕೈನ ರಕ್ತನಾಳ ಕತ್ತರಿಸಿ ಹಾಗೂ ತಲೆ ಹಿಂಭಾಗಕ್ಕೆ ಬಲವಾಗಿ ಹೊಡೆದು ಕೊಲೆಗೈಯ್ಯಲಾಗಿತ್ತು. ಸುಬ್ರಹ್ಮಣ್ಯಪುರ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಅಲ್ಲದೆ, ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆಯನ್ನು ವ್ಯಕ್ತಪಡಿಸಿದ್ದರು.

ಆದರೆ, ಮೃತ ಯುವತಿಯ ಸಹೋದರ ತನ್ನ ಸ್ನೇಹಿತನ ಮುಖದ ಮೇಲೆ ಪರಚಿದ ಗಾಯದ ಗುರುತು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದ. ಐದಾರು ದಿನದ ನಂತರ ಪರಚಿದ ಗಾಯವಾಗಿದ್ದ 15 ವರ್ಷದ ಬಾಲಕನನ್ನು ಪೊಲೀಸರು ಬಂಧಿಸಿದ್ದರು. ಆ ಬಾಲಕ ಎರಡು ಸಾವಿರ ರೂ. ಕದ್ದಿದ್ದನ್ನು ನೋಡಿದ್ದಕ್ಕೆ ಹತ್ಯೆ ಮಾಡಿ, ಮನೆಯಲ್ಲಿ ರಕ್ತದ ಕಲೆಯನ್ನೆಲ್ಲಾ ಸ್ವಚ್ಛಗೊಳಿಸಿದ ನಂತರ ಹಿಂಬಾಗಿಲಿನ ಮೂಲಕ ಟೆರೇಸ್ ಮೇಲಿಂದ ಪರಾರಿಯಾಗಿದ್ದಾಗಿ ಒಪ್ಪಿಕೊಂಡಿದ್ದನು. ಆ ಬಾಲಕ ಬಾರ್ ಮಾಲೀಕನ ಮಗನಾಗಿರುವ ಕಾರಣ ತನಿಖೆ ಸೂಕ್ತ ರೀತಿಯಲ್ಲಿ ನಡೆಯದೇ, ಭೀಕರವಾಗಿ ಕೊಲೆ ಮಾಡಿದ 10 ದಿನದಲ್ಲಿ ಕೋರ್ಟ್‌ನಲ್ಲಿ ಜಾಮೀನು ಮಂಜೂರಾಗಿತ್ತು. ಸಿಸಿಟಿವಿ ಫುಟೇಜ್ ಸೇರಿದಂತೆ ಪ್ರಬಲ ಸಾಕ್ಷಿ ಸಂಗ್ರಹಿಸುವಲ್ಲಿ ಪೊಲೀಸರು ನಿರ್ಲಕ್ಷ್ಯ ತೋರಿದ್ದಾರೆ. ಆರೋಪಿಯ ತಂದೆಯೊಂದಿಗೆ ಶಾಮೀಲಾಗಿ ಪ್ರಕರಣವನ್ನು ಮುಚ್ಚಿಹಾಕುತ್ತಿದ್ದಾರೆ ಎಂದು ಯುವತಿ ತಾಯಿ ಕೆ.ಆರ್.ಸೌಮ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದೂರು ನೀಡಿದ್ದರು. ಈ ದೂರಿನ ಹಿನ್ನೆಲೆಯಲ್ಲಿ ಪ್ರಕರಣವನ್ನು ಸಿಐಡಿಗೆ ವಹಿಸಲು ಸೂಚನೆ ನೀಡಿದ್ದಾರೆ. ಇದರಿಂದ ಮತ್ತೊಂದು ಕೊಲೆ ಪ್ರಕರಣ ಸಿಐಡಿ ತೆಕ್ಕೆಗೆ ಬಿದ್ದಂತಾಗಿದೆ.

ದೂರವಾಣಿ ಸಂಖ್ಯೆ ಬದಲಾವಣೆ

ಮೈಸೂರು.ಜೂ.24– ಸಹಾಯಕ ಕೃಷಿ ನಿರ್ದೇಶಕರ ಕಛೇರಿ ದೂರವಾಣಿ ಸಂಖ್ಯೆ 8277933153 ಯು ತಾಂತ್ರಿಕ ದೋಷದ ಕಾರಣ ಕಾರ್ಯನಿರ್ವಹಿಸುತ್ತಿರುವುದಿಲ್ಲ. ಸದರಿ ಸಂಖ್ಯೆ ಬದಲಾಗಿ ಕಛೇರಿ ದೂ.ಸಂಖ್ಯೆ 8277933162 ನ್ನು ಸಂಪರ್ಕಿಸಬಹುದು ಎಂದು ಸಹಾಯಕ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಮಾಣವಚನ ಸ್ವೀಕಾರ...



ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಕೆ. ವಿವೇಕಾನಂದ ಅವರು ವಿಧಾನಪರಿಷತ್ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿದರು.

ಆಟೋ–ಬೈಕ್ ಮುಖಾಮುಖಿ ಡಿಕ್ಕಿ; ಹಿಂಬದಿ ಸವಾರ ಸಾವು

ಮೈಸೂರು, ಜೂ.24(ಎಂಕೆ)– ಆಟೋ–ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ, ಬೈಕ್ ಹಿಂಬದಿ ಸವಾರ ಸ್ಥಳದಲ್ಲಿ ಮೃತಪಟ್ಟಿರುವ ಘಟನೆ ಮೈಸೂರಿನ ಯರಗನಹಳ್ಳಿಯ ಡಾ.ರಾಜ್‌ಕುಮಾರ್ ರಸ್ತೆಯಲ್ಲಿ ಸೋಮವಾರ ರಾತ್ರಿ ನಡೆದಿದೆ.

ಮೈಸೂರು ಶಾಂತಿನಗರ ನಿವಾಸಿ ಮೊಹಮ್ಮದ್ ಇರ್ಫಾನ್(19) ಮೃತ ಯುವಕ. ಸೋಮವಾರ ರಾತ್ರಿ ರಾಜ್‌ಕುಮಾರ್ ರಸ್ತೆಯ ಕೆಇಬಿ ಜಂಕ್ಷನ್‌ನಿಂದ ತ್ರಿವೇಣಿ ವೃತ್ತದ ಕಡೆಗೆ ಸ್ನೇಹಿತ ಸಾಹಿಲ್ ಜೊತೆಗೆ ಕೆಟಿಎಂ(ಕೆಎ 19 ಕ್ಯೂ 4468) ಬೈಕ್‌ನಲ್ಲಿ ಬರುತ್ತಿದ್ದಾಗ ಎದುರುಗಡೆಯಿಂದ ಬಂದ ಆಟೋ(ಕೆಎ 09 ಎಬಿ0306) ಡಿಕ್ಕಿ ಹೊಡೆದಿದೆ. ಬೈಕ್‌ನ ಹಿಂಬದಿ ಕುಳಿತ್ತಿದ್ದ ಮೊಹಮ್ಮದ್ ಇರ್ಫಾನ್ ತಲೆಗೆ ತೀವ್ರ ಪೆಟ್ಟುಬಿದ್ದು, ಸ್ಥಳದಲ್ಲಿ ರಕ್ತಸ್ರಾವವಾಗಿ ಮೃತಪಟ್ಟಿದ್ದಾನೆ. ಗಾಯ ಗೊಂಡಿರುವ ಸಾಹಿಲ್ ಮತ್ತು ಆಟೋ ಚಾಲಕ ಸಿದ್ದಾಪ್ಪಾಜಿ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಸಿದ್ಧಾರ್ಥ ನಗರ ಸಂಚಾರ ಠಾಣೆಯಲ್ಲಿ ದೂರು ದಾಖಲಾಗಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ. 24– ಶ್ರೀ ಗಾಯತ್ರಿ ಎಜುಕೇಷನಲ್ ಕಲ್ಚರಲ್ ಮತ್ತು ಚಾರಿಟಬಲ್ ಟ್ರಸ್ಟ್ ಸಿದ್ಧಾರ್ಥನಗರ, ಮೈಸೂರು ವತಿಯಿಂದ ಸದಸ್ಯರುಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಬ್ರಾಹ್ಮಣ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಂದ (ಶೇ. 70 ಮೇಲ್ಪಟ್ಟು) ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳು ಸಿದ್ಧಾರ್ಥ ನಗರ ಸೇರಿದಂತೆ ಸುತ್ತಮುತ್ತಲಿನ ಬಡಾವಣೆಯಲ್ಲಿ ವಾಸವಾಗಿರುವವರು. ಪುರಸ್ಕಾರಕ್ಕಾಗಿ ಅರ್ಜಿ ಸಲ್ಲಿಸಲು ಅರ್ಹರು. ವಿದ್ಯಾರ್ಥಿಗಳು ಸ್ವವಿವರದೊಂದಿಗೆ ದೃಢೀಕೃತ ಅಂಕಪಟ್ಟಿಯ ಜೆರಾಕ್ಸ್, ಆಧಾರ್ ಜೆರಾಕ್ಸ್ ಹಾಗೂ ಎರಡು ಭಾವ ಚಿತ್ರವನ್ನು ದಿನಾಂಕ: 27–06–2024ರ ಒಳಗೆ # 59, 2ನೇ ಕ್ರಾಸ್, ವಿದ್ಯಾನಗರ, ಮೈಸೂರು ತಲುಪಿಸಬೇಕಾಗಿ ಕೋರಲಾಗಿದೆ.

ವಿವರಗಳಿಗಾಗಿ 9901851138, 9886555108 ಸಂಪರ್ಕಿಸುವುದು.

ಛಾಯಾಗ್ರಹಣ, ಕಿರು ವಿಡಿಯೋ ಸ್ಪರ್ಧೆ

ಮೈಸೂರು.ಜೂ.24– ಪ್ರವಾಸೋದ್ಯಮ ಇಲಾಖೆ ವತಿಯಿಂದ ಮೈಸೂರಿನ ಅನ್ವೇಷಿಸದ ಪ್ರವಾಸಿ ತಾಣಗಳು ಶೀರ್ಷಿಕೆಯಡಿಯಲ್ಲಿ ರಾಜ್ಯ ಮಟ್ಟದ ಛಾಯಾಚಿತ್ರ ಮತ್ತು ಕಿರು ವಿಡಿಯೋ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ನದಿಗಳು, ಪ್ರಕೃತಿ ಮತ್ತು ರಮಣೀಯ ಸೌಂದರ್ಯ ತಾಣಗಳು, ಜಲಪಾತಗಳು, ವಸ್ತು ಸಂಗ್ರಹಾಲಯಗಳು, ಜಾನಪದ ಹಾಗೂ ಕಲೆಗಳು, ಸಾಂಪ್ರದಾಯಿಕ ಸ್ಥಳೀಯ ಹಬ್ಬಗಳು ಮತ್ತು ಕಲೆಗಳು, ಪಾರಂಪರಿಕ ಕಟ್ಟಡಗಳು ಮತ್ತು ಸ್ಮಾರಕಗಳು, ಧಾರ್ಮಿಕ ಮತ್ತು ಸಾಹಸ ಪ್ರವಾಸೋದ್ಯಮ ಹಾಗೂ ಇತರೆ ತಾಣಗಳ ರಾಜ್ಯ ಮಟ್ಟದ ಛಾಯಾಗ್ರಹಣ ಮತ್ತು ಕಿರು ವೀಡಿಯೋ ಸ್ಪರ್ಧೆಯಾಗಿದೆ. ಆಯ್ಕೆಯಾದ ಅತ್ಯುತ್ತಮ ಸಲ್ಲಿಕೆಗಳಿಗೆ ಪ್ರಥಮ ಬಹುಮಾನವಾಗಿ ರೂ.25,000, ದ್ವಿತೀಯ ಬಹುಮಾನ ರೂ.15,000 ಹಾಗೂ ತೃತೀಯ ಬಹುಮಾನವಾಗಿ ರೂ. 10,000 ಗಳನ್ನು ನೀಡಲಾಗುವುದು.

ಭಾಗವಹಿಸಲು ಇಚ್ಛಿಸುವವರು https://mysore.nic.in/en/competitions/ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಜುಲೈ 5 ಅಂತಿಮ ದಿನವಾಗಿದೆ. ಮಾಹಿತಿಗಾಗಿ visitmysurutourism @gmail.com ಹಾಗೂ 7411564510, 9008693409 ನ್ನು ಸಂಪರ್ಕಿಸಬಹುದು ಎಂದು ಮೈಸೂರು ವಿಭಾಗದ ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಎಂ.ಕೆ ಸವಿತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಪತ್ರಿಕಾ ಪ್ರಕಟಣೆ

ಈ ಮೂಲಕ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಶ್ರೀ ಮಂಜುನಾಥ್.ಎನ್ ನಿಂಗಣ್ಣ, ವಯಸ್ಸು ಸುಮಾರು 36 ವರ್ಷ ರವರು ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಬಿನ್ ಕಳಲವಾಡಿ ಗ್ರಾಮದ ಸರ್ವೆ ನಂ.119/4ರ ವಿಸ್ತೀರ್ಣ 1 ಎಕರೆ 30 1/2 ಗುಂಟೆ ಜಮೀನು ಮತ್ತು ಇದಕ್ಕೆ ಹೊಂದಿಕೊಂಡಂತೆ ಇರುವ 4 ಗುಂಟೆ ಖರಾಬು ಜಮೀನನ್ನು ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಉದ್ಬೂರು ಗ್ರಾಮದಲ್ಲಿ ವಾಸವಾಗಿರುವ ಜವರನಾಯಕರವರ ಪತ್ನಿಯಾದ ಶ್ರೀಮತಿ. ಲಕ್ಷ್ಮಮ್ಮ ಮತ್ತು ಇವರ ಮಕ್ಕಳುಗಳಾದ ಶಂಕರ್ ಮತ್ತು ಕುಮಾರಸ್ವಾಮಿ ರವರಿಂದ ಖರೀದಿಸುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ ಭಾಗಾಂಶ, ಆಧಾರ, ಭೋಗ್ಯ, ಜೀವನಾಂಶ, ಕ್ರಯದ ಕರಾರು ಮತ್ತು ನ್ಯಾಯಾಲಯದಿಂದ ತಡೆಯಾಜ್ಞೆ ಇದ್ದಲ್ಲಿ ಈ ಪತ್ರಿಕಾ ಪ್ರಕಟಣೆಗೊಂಡ 7 ದಿನಗಳ ಒಳಗಾಗಿ ಯಾರಾದರೂ ತಂಟೆ, ತಕರಾರು ಇದ್ದಲ್ಲಿ ಮೇಲೆ ಸೂಚಿಸಿರುವ ಮೊಬೈಲ್‌ನಲ್ಲಾಗಲೀ ಅಥವಾ ಅವರನ್ನು ಖುದ್ದು ಭೇಟಿಯಾಗಿ ಸಲ್ಲಿಸಬಹುದಾಗಿರು ತ್ತದೆ. ವಕೀಲರ ಸದರಿ 07 ದಿನಗಳ ಅವಧಿ ಮುಗಿದನಂತರ ಯಾವುದೇ ತಂಟೆ, ತಕರಾರು ಬಂದಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ರವಿ. ಎಸ್. B.Com., LL.B
ವಕೀಲರು, ಕೆ.ಎ.ಆರ್.: 2019/2011,
ನಂ. 751, 'I' ಬ್ಲಾಕ್, ರಾಮಕೃಷ್ಣನಗರ, ಮೈಸೂರು
ದಿನಾಂಕ: 25–6–2024 ಮೊ: 7795001007

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

7ನೇ ವರ್ಷದ ಸವಿನೆನಪು



ವಿ.ಚಿಕ್ಕತಾಯಮ್ಮ
ಆರೋಗ್ಯ ಇಲಾಖೆ (ನಿವೃತ್ತ)
ಮರಣ: 25.06.2017

ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು:
ತಂಗಿ ಸುಭದ್ರ, ಮೊಮ್ಮಗಳು ರಚನಾ ಹಾಗೂ ಕುಟುಂಬ ವರ್ಗದವರು
ನೀಲಕಂಠನಗರ ನಂಜನಗೂಡು

5ನೇ ವರ್ಷದ ಸವಿನೆನಪು



ಬಸವರಾಜು

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನೀವು ನಮ್ಮ ಮನಸ್ಸಿನಲ್ಲಿ ಹಸಿರಾಗಿರುತ್ತೀರಿ
ದುಃಖತಪ್ತರು:
ಪತ್ನಿ ರತ್ನಮ್ಮ ಮಕ್ಕಳು, ಸೊಸೆ ಮತ್ತು ಅಳಿಯಂದಿರು ಹಾಗೂ ಮೊಮ್ಮಕ್ಕಳು, ಗಿರಿದರ್ಶಿನಿ ಬಡಾವಣೆ, ಮೈಸೂರು.

PUBLIC NOTICE

NOTICE hereby given that my clients **Mr. Ananthakumar C V & Mrs. Roopa** CA have agreed to purchase the below said agricultural land bearing No- 159/2, 159/3 & 160/4, situated at Kadakola Village, Jayapura Hobli, Mysore measuring in total 2 Acres 10 Guntas.

Property No. 1:- Survey No. 159/2 & 159/3 measuring in total 1 Acre 10 Guntas, Bounded on East by Land belonging to Mr. Marigowda, West by Road , North by Land belonging to Mr. Appajaiah & Javaraiah, South by Survey No. 160/3 belonging to Beeramadamma.

Property No. 2:- Survey No. 160/3 measuring in total 1 Acre, Bounded on East by Survey No. 160/3 of Subbamma, Sy 161 & 162, West by Road , North by Land belonging to Beeramadamma @ Maramma, South by Survey No. 160/3 of Subbamma & Survey No. 160/2.

I am here with issuing this public Notice in this regard on behalf of my clients. If Any person having any Right, Interest, Title claim or demand of any nature whatsoever in respect of the said property, hereby required to make the same known in writing along with the documentary proof thereof, to the undersigned at **"Vikalpa Legal Solutions" Office: - No. 2796, 1st Floor, 2nd Main, between 3rd & 4th Cross, Jayanagara, Mysore-570014, Phone No. 0821-3567401** within 15 days from the date of publication hereof, failing which it will be deemed as Mr. K Prakash Shetty & Mrs. Vasantha Prakash the sellers has a clear title. Any claim or objection received without any reference or after 15 days will not be binding over the schedule property or my clients, such claims and the claims if any, shall be deemed to have been given up or waived.

Date: 24-06-2024
Place : Mysore

U.M. Kalpana
Advocate
Mob: 9686667699

Vidyavardhaka Sangha (Regd), Mysore
VIDYAVARDHAKA COLLEGE OF ENGINEERING
Autonomous Institute, Accredited by NBA & NAAC with"A" Grade
Gokulam 3rd Stage, Mysuru-570 002 | Ph : (0821) 4276200

USED GOOD RUNNING CONDITION VEHICLES FOR SALE

- Skoda Rapid - 2013 make
- Mahendra Bolero - 2013 make
- Tata Ace Mega goods auto

Please submit the sealed quotation by **29th June 2024** at the college office. The visual inspection of vehicles can be done at the college premises on the working days between 11am to 4pm. The auction will take place on **Monday, 1st July 2024** @ 5.30pm in 'A' block board room of VVCE.